
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಆಗಸ್ಟ್ 4, 2010 ರೂ. 12/-

ದೇಶಕಾಲ
ಬರಗೂರು
ಪ್ರತಿಕ್ರಿಯೆ



ರೌಡಿ ರಾಮುಲು ಜೈಲು ಪಾಲಿಟಿಕ್ಸ್



ಅರಣ್ಯಾಧಿಕಾರಿ
ಗೋಕುಲ್ ಕೊಲೆಗೆ ಸ್ಕೆಚ್?



ಕಾಂಗ್ರೆಸ್ ದಂಡಯಾತ್ರೆ
ಆತಂಕದಲ್ಲಿ ರೆಡ್ಡಿ ಗ್ಯಾಂಗ್



ಶಾಸಕ ನಂದೀಶ್ ರೆಡ್ಡಿಗೆ ತಹಶೀಲ್ದಾರ್ ಆಶಾ ಒದೆ!



ಂಗಳೂರು: ಮರಳು ಮಾಫಿಯಾ ಡಾನ್ ಪಾಲೇಮಾರ್

ಕಾಂಗ್ರೆಸ್-ಬಿಜೆಪಿ: ಜಾಯಿಂಟ್ ಐರನ್ ಓರ್ ಎಕ್ಸ್‌ಪೋರ್ಟ್ ಕಂಪನಿ (ಅನ್‌ಲಿಮಿಟೆಡ್)!

ಬೇಲೇಕೇರಿಯಲ್ಲಿ ವಶಪಡಿಸಿಕೊಂಡಿದ್ದ 25 ಲಕ್ಷ ಟನ್ ಕಬ್ಬಿಣದ ಅದಿರಿನ ಕಳ್ಳ ಸಾಗಾಟದಿಂದ ಪ್ರಾರಂಭವಾದ ಗಣಿ ಅಕ್ರಮಗಳ ಮಹಾಭಾರತ ಇದೀಗ ಅದಿರು ರಫ್ತು ನಿಯಂತ್ರಣವೆಂಬ ಅಸಲಿ ವಿಷಯಕ್ಕೆ ಬಂದು ತಲುಪಿದೆ. ಬೇಲೇಕೇರಿಯಲ್ಲಿ ಸರ್ಕಾರ ವಶಪಡಿಸಿಟ್ಟುಕೊಂಡಿದ್ದ ಅದಿರನ್ನು ರೆಡ್ಡಿ ಬ್ರದರ್ಸ್‌ಗಳು ತಮ್ಮ ಅಧಿಕಾರವನ್ನು ಬಳಸಿಕೊಂಡು ರಾತ್ರೋರಾತ್ರಿ ಅಕ್ರಮ ಸಾಗಾಟ ಮಾಡಿ ಏನಿಲ್ಲವೆಂದರೂ 2,500 ಕೋಟಿ ರೂ. ಲಾಭ ಮಾಡಿಕೊಂಡಿದ್ದಾರೆಂಬುದು ಈಗ ಜಗಜ್ಜಾಹೀರಾಗಿದೆ. ಅದಿರು ರಫ್ತು ಕಾನೂನುಬದ್ಧವಾಗಿದ್ದರೂ, ಇಲ್ಲದಿದ್ದರೂ ಬೇಲೇಕೇರಿಯಲ್ಲಿ ನಡೆದ ಈ ಅಕ್ರಮ ಅಪರಾಧವೇ. ಆದರೆ ಯಡಿಯೂರಪ್ಪ ಈ ಅಪರಾಧ ಸಂಭವಿಸಲು ಅದಿರು ರಫ್ತಿಗಿರುವ ಅವಕಾಶವೇ ಕಾರಣವೆಂಬ ಹಾಸ್ಯಾಸ್ಪದ ಸಮರ್ಥನೆ ನೀಡುತ್ತಾ ರೆಡ್ಡಿ ಬ್ರದರ್ಸ್ ಅನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ. ಕತ್ತಿಗಳು ಲಭ್ಯವಿರುವುದರಿಂದಲೇ ಕೊಲೆಗಳಾಗುತ್ತಿವೆ, ಆದ್ದರಿಂದ ಎಲ್ಲಿಯತನಕ ಕತ್ತಿಗಳನ್ನು ನಿಷೇಧಿಸುವುದಿಲ್ಲವೋ ಅಲ್ಲಿಯತನಕ ಕೊಲೆಗಳು ನಡೆಯುತ್ತಲೇ ಇರುತ್ತವೆ ಎಂದು ಹೇಳುತ್ತಾ ಕೊಲೆಯ ಅಪರಾಧವನ್ನು ಸಾಮಾನ್ಯೀಕರಿಸುವ ಪ್ರಯತ್ನವು ಎಷ್ಟು ಹಾಸ್ಯಾಸ್ಪದವೋ, ಬೇಲೇಕೇರಿಯಲ್ಲಿ ನಡೆದ ಅದಿರು ರಫ್ತಿನ ಅಪರಾಧದ ಸಮರ್ಥನೆಯೂ ಸಹ ಅಷ್ಟೇ ಹಾಸ್ಯಾಸ್ಪದ!

ಅದೇನೇ ಇರಲಿ, ಎಲ್ಲಿಯತನಕ ಅದಿರು ರಫ್ತಿಗೆ ಅವಕಾಶವಿರುತ್ತದೋ ಅಲ್ಲಿಯವರೆಗೆ ಅಕ್ರಮ ಗಣಿಗಾರಿಕೆ ಇರುತ್ತದೆ. ಆದ್ದರಿಂದ ಅಕ್ರಮ ಗಣಿಗಾರಿಕೆ ನಿಲ್ಲಬೇಕೆಂದರೆ ಅದಿರು ರಫ್ತನ್ನು ನಿಲ್ಲಿಸಿ ಎಂದು ಬಿಜೆಪಿಯ ರಾಷ್ಟ್ರೀಯ ನಾಯಕರು ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವ ಮೂಲಕ ಅದಿರು ರಫ್ತಿನ ವಿಷಯವನ್ನು ಒಂದು ರಾಷ್ಟ್ರೀಯ ವಿಷಯವನ್ನಾಗಿಸಿದ್ದಾರೆ.




ಒಂದು ರೀತಿಯಲ್ಲಿ ಬಿಜೆಪಿಗಳು ಹೇಳುತ್ತಿರುವುದು ಸರಿ. ಅದಿರು ರಫ್ತಿಗೆ ಮುಕ್ತ ಪರವಾನಗಿ ಕುಬೇರನ ಖಜಾನೆಗೆ ಕೀಲಿ ಕೈಯನ್ನು ನೀಡಿದಂತಾಗಿದೆ. ಇದು ಅಕ್ರಮ ಗಣಿಗಾರಿಕೆಯನ್ನು ಹೆಚ್ಚು ಮಾಡಿದೆ. ಆದರೆ ಈ ಅಕ್ರಮ ಗಣಿಗಾರಿಕೆ ಮತ್ತು ಅದಿರು ರಫ್ತಿನ ಪ್ರಧಾನ ಫಲಾನುಭವಿಗಳು ಬಿಜೆಪಿಗಳೇ. ಕಾಂಗ್ರೆಸ್ಸಿಗರು ಈ ಬಾಬತ್ತಿನಲ್ಲಿ ಹಳೇಹುಲಿಗಳೇ ಆಗಿದ್ದರೂ ಕಳೆದ ಐದು ವರ್ಷಗಳಲ್ಲಿ ಅದಿರು ರಫ್ತು ಮಾರುಕಟ್ಟೆ ಒದಗಿಸಿದ ಅವಕಾಶಗಳನ್ನು ಬಳಿದು ಬಾಚಿಕೊಂಡು ಕುಬೇರರಾದವರಲ್ಲಿ ಹೆಚ್ಚಿನವರು ಬಿಜೆಪಿಗಳೇ. ಹೀಗಾಗಿ ಈ ಅದಿರು ರಫ್ತು ಒಂದು ರೀತಿಯಲ್ಲಿ ಕಾಂಗ್ರೆಸ್-ಬಿಜೆಪಿ ಜಾಯಿಂಟ್ ಐರನ್ ಓರ್ ಎಕ್ಸ್‌ಪೋರ್ಟ್ ಕಂಪನಿ (ಅನ್‌ಲಿಮಿಟೆಡ್)ಯ ವ್ಯವಹಾರವೇ. ಎರಡು ಪಕ್ಷಗಳ ಸಮರ್ಥಕರೂ ಅದಿರು ರಫ್ತು ನೀತಿಯ ಫಲಾನುಭವಿಗಳೇ ಆಗಿರುವುದರಿಂದ ಬಿಜೆಪಿ ಇಟ್ಟಿರುವ ಅದಿರು ರಫ್ತು ನಿಷೇಧದ ಪ್ರಸ್ತಾಪಕ್ಕೆ ಪುಕ್ಕಟೆ ಪ್ರಚಾರಕ್ಕಿಂತ ಹೆಚ್ಚಿನ ಮೌಲ್ಯವಿಲ್ಲ.

ಭಾರತ ದೇಶದ ಅದಿರಿನ ಮೇಲೆ ಕಣ್ಣಿಟ್ಟು ಇಂದು ಭಾರತದ ಬೃಹತ್ ಉದ್ದಿಮೆಪತಿಗಳು ಮಾತ್ರವಲ್ಲ ದೇಶ-ವಿದೇಶದ ಬೃಹತ್ ಬಹುರಾಷ್ಟ್ರೀಯ ಕಂಪನಿಗಳೂ ಗಣಿಗಾರಿಕೆಯ ಮೇಲೆ ಬೃಹತ್ ಹೂಡಿಕೆ ಮಾಡುತ್ತಿವೆ. ಈ ಕಂಪನಿಗಳು ಎಷ್ಟು ಬಲಶಾಲಿಗಳೆಂದರೆ ಅವರ ವಾರ್ಷಿಕ ವಹಿವಾಟು ಈ ದೇಶದ ಹಲವಾರು ರಾಜ್ಯಗಳ ವಾರ್ಷಿಕ ಉತ್ಪನ್ನಕ್ಕೆ ಸಮ.

ಉದಾಹರಣೆಗೆ ಇತ್ತೀಚೆಗೆ ನಡೆದ ಜಾಗತಿಕ ಬಂಡವಾಳಗಾರರ ಸಮ್ಮೇಳನದಲ್ಲಿ ಬಳ್ಳಾರಿಯಲ್ಲಿ ಸ್ಟೀಲ್ ಫ್ಯಾಕ್ಟರಿ ಮಾಡಲು ಮುಂದೆ ಬಂದಿರುವ ವಿಶ್ವದ ನಂ.1 ದೈತ್ಯ ಸ್ಟೀಲ್ ಉದ್ಯಮಿ ಮಿಟ್ಟಲ್ ಗಣಿಗಾರಿಕೆಗೂ ಲೈಸೆನ್ಸ್ ಕೇಳಿದ್ದಾನೆ. ಏಕೆಂದರೆ ಜಗತ್ತಿನಾದ್ಯಂತ ಇರುವ ಅವರ ಸ್ಟೀಲ್ ಫ್ಯಾಕ್ಟರಿಗಳಿಗೆ ಅದಿರು ಸರಬರಾಜು ಮಾಡುತ್ತಿದ್ದ ಅದಿರು ಕಂಪನಿಗಳು ಏಕಾಏಕಿ ಅದಿರು ದರ ಏರಿಸಿವೆ. ಇದರಿಂದ ಮಿಟ್ಟಲ್ ಕಂಪನಿ ಬೇರೆ ಅದಿರು ಮೂಲಗಳನ್ನು ಅರಸುತ್ತಿದೆ. ಹೀಗಾಗಿ ಮಿಟ್ಟಲ್ ಕರ್ನಾಟಕದಲ್ಲಿ ಬಂಡವಾಳ ಹೂಡಲು ಅದಿರು ರಫ್ತು ಅವಕಾಶವೇ ಪ್ರಧಾನವೆಂಬುದನ್ನು ಮರೆಯುವಂತಿಲ್ಲ. ಈ ಕಂಪನಿಯ ವಾರ್ಷಿಕ ವಹಿವಾಟು 105 ಬಿಲಿಯನ್ ಡಾಲರ್‌ಗಳು. ಅಂದರೆ 4,20,000 ಕೋಟಿ ರೂಪಾಯಿಗಳು. ಕರ್ನಾಟಕದ ವಾರ್ಷಿಕ ಬಜೆಟ್ಟು 60,0000 ಕೋಟಿ ಎಂಬುದನ್ನು ನೆನಪಿಸಿಕೊಂಡರೆ ಈ ಕಂಪನಿಗಳ ಮುಂದೆ ಯಡಿಯೂರಪ್ಪ ಏಕೆ ಹಲ್ಲುಗಿಂಜಿಕೊಂಡು ಮೊಣಕಾಲೂರಿ ನಿಲ್ಲುತ್ತಾರೆ ಎಂಬುದು ಅರ್ಥವಾಗುತ್ತದೆ.





ಅದೇ ಸಮಾವೇಶದಲ್ಲಿ ಯಡಿಯೂರಪ್ಪ ದಮ್ಮಯ್ಯಗುಡ್ಡೆ ಹಾಕಿ ಕರೆದುಕೊಂಡು ಬಂದ ಕೊರಿಯಾದ ಪೋಸ್ಕೋ ಕಂಪನಿ ಸಹ ತಾನು ಕರ್ನಾಟಕದಲ್ಲಿ ಸ್ಟೀಲ್ ಕಂಪನಿ ಹಾಕಬೇಕೆಂದರೆ ತನಗೆ ತನ್ನದೇ ಆದ ಗಣಿ ಬೇಕೆಂದೂ ಮತ್ತು ಅದರಲ್ಲಿ ತಾನು ಉತ್ಪಾದಿಸುವ ಅದಿರನ್ನು ತನಗೆ ಬೇಕಾದಂತೆ ರಫ್ತು ಮಾಡಲು ಅವಕಾಶವೂ ಇರಬೇಕೆಂದು ಶರತ್ತು ಹಾಕಿತ್ತು. ಬಿಜೆಪಿ ಸರ್ಕಾರ ಈ ಶರತ್ತುಗಳಿಗೆ ಒಪ್ಪಿಕೊಂಡ ಮೇಲೇ ಪೋಸ್ಕೋ ಕಂಪನಿ ಬೆಂಗಳೂರಿನ ಸಮಾವೇಶದಲ್ಲಿ ಭಾಗವಹಿಸಲು ಒಪ್ಪಿಕೊಂಡಿದ್ದು. ಈ ಪೋಸ್ಕೋ ಕಂಪನಿಗೆ ಒರಿಸ್ಸಾದಲ್ಲಿ 2002ರಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ-ಬಿಜೆಡಿ ಸರ್ಕಾರವೇ ಗಣಿಗಾರಿಕೆ ಮಾಡಲು 5000 ಎಕರೆ ಕೃಷಿ ಯೋಗ್ಯ ಭೂಮಿಯನ್ನು ಬಿಟ್ಟುಕೊಟ್ಟಿತ್ತು. ಅಲ್ಲಿ ಅವರು ಪ್ರತಿವರ್ಷ ಉತ್ಪಾದನೆ ಮಾಡುವ 600 ದಶಲಕ್ಷ ಟನ್ ಕಬ್ಬಿಣದ ಅದಿರಿನಲ್ಲಿ 400 ದಶಲಕ್ಷ ಟನ್ ಅದಿರನ್ನು ರಫ್ತು ಮಾಡಲೂ ಸಹ ಬಿಜೆಪಿ ಸರ್ಕಾರ ಅನುಮತಿ ನೀಡಿತ್ತು. ಈಗ ಅದೇ ಬಿಜೆಪಿ ಪಕ್ಷ ಕಬ್ಬಿಣದ ಅದಿರಿನ ರಫ್ತು ನಿಷೇಧವಾಗಬೇಕೆಂಬ ಬೇಡಿಕೆ ಇಟ್ಟಿದೆ!

ವರ್ತಮಾನದಲ್ಲಿ ಮತ್ತು ಭವಿಷ್ಯದಲ್ಲಿ ಭಾರತಲ್ಲಿ ಅತಿಹೆಚ್ಚು ಗಣಿಗಾರಿಕೆ ನಡೆಯಲಿರುವ ರಾಜ್ಯಗಳೆಂದರೆ ಛತ್ತೀಸ್‌ಘಡ್, ಜಾರ್ಖಂಡ್ ಮತ್ತು ಒರಿಸ್ಸಾ. ಅಲ್ಲಿ ಅಧಿಕಾರದಲ್ಲಿರುವುದು ಬಿಜೆಪಿ ಪಕ್ಷವೇ. ಈ ಜಾರ್ಖಂಡ್, ಛತ್ತೀಸ್‌ಘಡ್‌ಗಳಲ್ಲಿ 12 ಲಕ್ಷ ಕೋಟಿ ರೂಪಾಯಿ ಮೌಲ್ಯದ ಕಬ್ಬಿಣ, ಕಲ್ಲಿದ್ದಲು, ವಜ್ರ, ಚಿನ್ನ, ಬಾಕ್ಸೈಟ್, ಯುರೇನಿಯಂ, ಒಳಗೊಂಡಂತೆ 28 ಬಗೆಯ ಖನಿಜ ಸಂಪತ್ತು ಅಡಕವಾಗಿದೆ. ಒಂದು ಅಂದಾಜಿನಂತೆ ಬಿಜೆಪಿ-ಕಾಂಗ್ರೆಸ್ ಸರ್ಕಾರಗಳು ಸ್ವದೇಶಿ ಮತ್ತು ವಿದೇಶಿ ಗಣಿ ಕಂಪನಿಗಳ ಜೊತೆ ಸುಮಾರು 1,50,000 ಕೋಟಿ ಮೌಲ್ಯದ ಒಪ್ಪಂದ ಪತ್ರಕ್ಕೆ (Memorandum Of Under standing- MOU) ಸಹಿ ಹಾಕಿದೆ. ಅದನ್ನು ಜಾರಿಗೆ ತರಲೆಂದೇ ಆದಿವಾಸಿ ವಲಯದಲ್ಲಿ ಆಪರೇಷನ್ ಗ್ರೀನ್ ಹಂಟ್ ಕೂಡಾ ಪ್ರಾರಂಭವಾಗಿದೆ. ಅದರ ಬಗ್ಗೆ ಕಾಂಗ್ರೆಸ್-ಬಿಜೆಪಿ ಎರಡರಲ್ಲೂ ಸಹಮತವಿದೆ. ಭಾರತದಲ್ಲಿ ಗಣಿಗಾರಿಕೆ ನಡೆಸಲು ಒಪ್ಪಂದ ಮಾಡಿಕೊಂಡಿರುವ ಎಸ್ಸಾರ್, ಟಾಟಾ, ವೇದಾಂತದಂಥ ದೇಶೀಯ ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿ ಉತ್ಪಾದಿಸುವ ಅದಿರನ್ನು ರಫ್ತು ಮಾಡಲು ಪರವಾನಗಿ ಪಡೆದುಕೊಂಡೇ ಭಾರತವನ್ನು ಪ್ರವೇಶಿಸಿವೆ. ಅದಿರು ಗಣಿಗಾರಿಕೆಗೆ ಅಂತಿಮ ಪರವಾನಗಿ ಕೊಡುವ ಅಧಿಕಾರ ಕೇಂದ್ರದ್ದೇ ಆದರೂ ಅದಕ್ಕೆ ರಾಜ್ಯ ಸರ್ಕಾರ ಶಿಫಾರಸ್ಸು ಮಾಡುವುದು ಕಡ್ಡಾಯ. ಹೀಗೆ ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ ಮತ್ತು ಕೇಂದ್ರದಲ್ಲಿರುವ ಕಾಂಗ್ರೆಸ್ ಸರ್ಕಾರ ಎರಡರ ಒಪ್ಪಿಗೆಯ ಮೇರೆಗೇ ಅದಿರು ರಫ್ತು ಮಾಡುವ ಕಂಪನಿಗಳಿಗೆ ಗಣಿಗಾರಿಕೆಗೆ ಅನುಮತಿ ನೀಡಲಾಗುತ್ತಿದೆ. ಆದರೆ ಈಗ ಮಾತ್ರ ಇದೇ ಕಾಂಗ್ರೆಸ್ ಮತ್ತು ಬಿಜೆಪಿಗಳು ತಾವು ಸದ್ಗುಣ ಸಂಪನ್ನರೆಂಬಂತೆ, ದೇಶಭಕ್ತರೆಂಬಂತೆ ಅದಿರು ರಫ್ತು ನಿಷೇಧದ ಬಗ್ಗೆ ಸೋಗಲಾಡಿ ಮಾತುಗಳನ್ನಾಡುತ್ತಿವೆ!

ಎಲ್ಲಕ್ಕಿಂತ ವಿಶೇಷವೇನೆಂದರೆ 2006ರಲ್ಲಿ ದೇಶದಿಂದ ಕಬ್ಬಿಣದ ಅದಿರನ್ನು ರಫ್ತು ಮಾಡುವ ಬಗ್ಗೆ ವರದಿ ನೀಡಲೆಂದೇ "ಹೂಡಾ ಆಯೋಗ"ವನ್ನು ಯೋಜನಾ ಆಯೋಗ ನೇಮಿಸಿತ್ತು. ಇದು ಎಲ್ಲಾ ರಾಜ್ಯಗಳ ಮತ್ತು ಪಕ್ಷಗಳ ವಕ್ತಾರರ ಅಭಿಪ್ರಾಯವನ್ನು ಮತ್ತು ದೇಶದ ಆರ್ಥಿಕ ವರದಿಗಳನ್ನು ಅಧ್ಯಯನ ಮಾಡಿ ಕಬ್ಬಿಣದ ಅದಿರಿನ ರಫ್ತಿಗೆ ಮುಕ್ತ ಅನುಮತಿ ನೀಡಬೇಕೆಂಬ ವರದಿಯನ್ನು ನೀಡಿತ್ತು. ಇದನ್ನು ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಮುಕ್ತಕಂಠದಿಂದ ಸ್ವಾಗತಿಸಿದ್ದವು. ಎಲ್ಲಕ್ಕಿಂತ ಹೆಚ್ಚಾಗಿ 1991ರಿಂದ ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾದ ನಂತರ ಗಣಿಗಾರಿಕೆಯನ್ನು ವಿದೇಶಿ ಬಂಡವಾಳಕ್ಕೆ ಮುಕ್ತಗೊಳಿಸಲಾಯಿತು. ಅದರ ಭಾಗವಾಗಿ ಹೊಸ "ರಾಷ್ಟ್ರೀಯ ಖನಿಜ ನೀತಿ"ಯನ್ನು ಘೋಷಿಸಲಾಯಿತು. ಅದರ ಪ್ರಕಾರ ಖನಿಜ ಸಂಪತನ್ನೂ ಖಾಸಗಿ ಕಂಪನಿಗಳೂ ಹುಡುಕಿ (Explore), ತೆಗೆದು (Extract), ರಫ್ತು (Export) ಮಾಡುವ ನೀತಿಯನ್ನು ಜಾರಿಗೆ ತರಲಾಯಿತು. ಹೂಡಾ ಆಯೋಗ ಅದನ್ನು ಇನ್ನಷ್ಟು ತೀವ್ರಗೊಳಿಸಬೇಕೆಂದು ಸಲಹೆ ನೀಡಿತ್ತು, ಇವೆಲ್ಲಕ್ಕೂ ಕಾಂಗ್ರೆಸ್ ಮತ್ತು ಬಿಜೆಪಿಗಳ ಒಪ್ಪಿಗೆ ಇದೆ.

ಇದಕ್ಕೂ ಮುಂಚೆ 1976ರಷ್ಟು ಹಿಂದೆ ಕರ್ನಾಟಕದಲ್ಲಿ ಪ್ರಾರಂಭವಾದ KIOCL (ಕುದುರೆಮುಖ ಕಬ್ಬಿಣದ ಅದಿರು ಕಂಪನಿ) ಸರ್ಕಾರಿ ಸ್ವಾಮ್ಯದ್ದಾದರೂ ಶೇ.100ರಷ್ಟು ರಫ್ತಿನ ಆಧಾರದ ಮೇಲೇ ಕರ್ನಾಟಕದ ಖನಿಜ ಸಂಪತ್ತನ್ನು ಬರಿದು ಮಾಡುತ್ತಿತ್ತು, ಮೊದಲು ಇರಾನ್‌ಗೆ ಕಬ್ಬಿಣ ರಫ್ತು ಮಾಡಲೆಂದು ಪ್ರಾರಂಭವಾದರೂ ನಂತರ ಸತತವಾಗಿ ಜಪಾನಿನ ನಿಪ್ಪಾನ್ ಸ್ಟೀಲ್ ಕಂಪನಿಗೆ ಅದಿರು ಸರಬರಾಜು ಮಾಡುತ್ತಾ ಕರ್ನಾಟಕದ ಜೀವನದಿಗಳಾದ ತುಂಗಭದ್ರೆಗೇ ಕುತ್ತು ತಂದಿತ್ತು. ಆಗಲೂ ಕಾಂಗ್ರೆಸ್‌ಗಾಗಲೀ, ಬಿಜೆಪಿಗಾಗಲೀ ಅದಿರು ರಫ್ತಿನ ಬಗ್ಗೆ ಆಕ್ಷೇಪಣೆ ಇರಲಿಲ್ಲ. 1999-2004ರ ನಡುವೆ ಕೇಂದ್ರದಲ್ಲಿದ್ದದ್ದು ಬಿಜೆಪಿ ನೇತೃತ್ವದ ಸರ್ಕಾರ. ಆ ಸಮಯದಲ್ಲಿ ಕುದುರೆಮುಖದಲ್ಲಿ ಗಣಿಗಾರಿಕೆ ರದ್ದು ಮಾಡಬೇಕೆಂದು ತುಂಗಭದ್ರಾ ನದಿತೀರದ ಲಕ್ಷಾಂತರ ರೈತಾಪಿ ಜನ ಬೃಹತ್ ಜನಾಂದೋಲನ ಕಟ್ಟಿದ್ದರು. ಆಗ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್‌ನ ಕೃಷ್ಣ ಸರ್ಕಾರ, ಕೇಂದ್ರದ ವಾಜಪೇಯಿ ಸರ್ಕಾರಗಳೆರಡೂ ಹೇಗಾದರೂ ಮಾಡಿ ಗಣಿಗಾರಿಕೆ ಮುಂದುವರೆಸುವ ರೀತಿಯಲ್ಲಿ ಸುಪ್ರೀಂಕೋರ್ಟಿನಲ್ಲಿ ಹಲವು ಬಗೆಯ ಸುಳ್ಳು ಹೇಳಿಕೆಗಳನ್ನು ನೀಡಿದ್ದು ಈಗಲೂ ಜನಮಾನಸದಲ್ಲಿ ಹಸಿರಾಗಿದೆ.

2002ರ ನಂತರ ಚೀನಾದಲ್ಲಿ ಕಬ್ಬಿಣದ ಅದಿರಿಗೆ ಬೇಡಿಕೆ ಹೆಚ್ಚಾದ ಮೇಲೆ ಕರ್ನಾಟಕದಲ್ಲಿ ಮತ್ತು ಇತರ ಕಡೆ ಅದಿರು ರಫ್ತು ಕಂಪನಿಗಳು ಭಾರತವನ್ನು ಬಗೆಬಗೆದು ಚೀನಾವನ್ನು ಕಟ್ಟಲು ಪ್ರಾರಂಭಿಸಿದವು. 2002-2006ರ ನಡುವೆ ಈ ದೇಶದಲ್ಲಿ 250 ಮಿಲಿಯನ್ ಟನ್ ಅದಿರು ಉತ್ಪಾದನೆಯಾಗಿದ್ದರೆ ಅದರಲ್ಲಿ 200 ಮಿಲಿಯನ್ ಟನ್ ಅದಿರನ್ನು ಚೀನಾಗೆ ರಫ್ತು ಮಾಡಲಾಗಿದೆ.

ಕರ್ನಾಟಕದಿಂದ ರಫ್ತಾದ ಕಬ್ಬಿಣದ ಅದಿರು ಚೀನಾದಲ್ಲಿ ಕಮ್ಯುನಿಸಂ ಮುಸುಕಿನಲ್ಲಿರುವ ಕಾಪಿಟಲಿಸ್ಟ್ ದೇಶವನ್ನು ಕಟ್ಟಿತು. ಆದರೆ ಕರ್ನಾಟಕದಲ್ಲಿ ಅದು ಕಟ್ಟಿದ್ದು ರೆಡ್ಡಿಗಳ ಪಾಳೆಗಾರಿ ಸಾಮ್ರಾಜ್ಯವನ್ನು ಮಾತ್ರ. ವಾಸ್ತವವಾಗಿ ಚೀನಾದಲ್ಲೂ ಭಾರತಕ್ಕಿಂತ ಹಲವಾರು ಪಟ್ಟು ಹೆಚ್ಚು ಕಬ್ಬಿಣದ ಅದಿರಿದೆ. ಆದರೆ ಅದನ್ನವರು ಭವಿಷ್ಯದ ದೃಷ್ಟಿಯಿಂದ ಕಾಪಾಡಿಕೊಂಡಿದ್ದಾರೆ. ಬದಲಿಗೆ ಕೇವಲ ತತ್‌ಕ್ಷಣದ ಮತ್ತು ಸ್ವಾರ್ಥ ಲಾಭದ ದೃಷ್ಟಿಯಿಂದ ದೇಶವನ್ನು ಹರಾಜು ಮಾಡಲು ಸಿದ್ಧವಿರುವ ಭಾರತದಂಥ ದೇಶಗಳಿಂದ ಅಗ್ಗದ ದರದಲ್ಲಿ ಅದಿರನ್ನು ಪಡೆದುಕೊಂಡು ಅದು ತನ್ನ ದೇಶ ಕಟ್ಟುತ್ತಿದೆ.

1947ರ ಹಿಂದೆ ಭಾರತ ಬ್ರಿಟಿಷ್ ವಸಾಹತುವಾಗಿದ್ದಾಗ ಬ್ರಿಟಿಷರು ಭಾರತದ ಖನಿಜ ಸಂಪನ್ಮೂಲವನ್ನೆಲ್ಲಾ ಲೂಟಿ ಮಾಡಿ ತಮ್ಮ ದೇಶವನ್ನು ಸೂರ್ಯ ಮುಳುಗದ ಸಾಮ್ರಾಜ್ಯವನ್ನಾಗಿ ಕಟ್ಟಿದರು. ಆಗ ನಮಗೆ ಸ್ವಾತಂತ್ರ್ಯವಿರಲಿಲ್ಲ, ಈ ದೇಶದ ಸಂಪತ್ತಿನ ಮೇಲೆ ನಮಗೆ ಅಧಿಕಾರವಿರಲಿಲ್ಲ. ಈಗ ಈ ದೇಶಕ್ಕೆ ಸ್ವಾತಂತ್ರ್ಯ ಬಂದು 63 ವರ್ಷಗಳಾಗಿವೆ. ಈಗಲೂ ಈ ದೇಶ ಶ್ರೀಮಂತ ದೇಶಗಳಿಗೆ ಅದಿರನ್ನು ರಫ್ತು ಮಾಡುವ ವಸಾಹತು ದೇಶವಾಗಿಯೇ ಉಳಿದುಕೊಂಡಿದೆ. ಏಕೆಂದರೆ ಕಾಂಗ್ರೆಸ್-ಬಿಜೆಪಿಗಳು ಈ ದೇಶವನ್ನು, ಸ್ವಾತಂತ್ರ್ಯವನ್ನು ಮಾರಿಕೊಂಡಿವೆ. ಇಂಥಾ ದೇಶದ್ರೋಹಿಗಳು ಅದಿರು ರಫ್ತನ್ನು ನಿಷೇಧಿಸಬಲ್ಲರೇ?

ನೋ ಕಾಮೆಂಟ್ಸ್

"ಬೆಂಗಳೂರು ನಗರದ ಪ್ರಮುಖ ರಸ್ತೆಗಳ ಗೋಡೆಗಳ ಮೇಲೆ ಚಿತ್ರಿಸಿರುವ ರಾಜ್ಯದ ಸಾಂಸ್ಕೃತಿಕ ಕಲಾಕೃತಿಗಳು ನೋಡುಗರ ಮನಸ್ಸಿಗೆ ಮುದ ನೀಡುವುದಿಲ್ಲ, ಬದಲಿಗೆ ಚಿತ್ರಹಿಂಸೆ ನೀಡುವಂತಿದೆ. ಅವುಗಳ ವಿರುದ್ಧ ಯಾವ ಕಲಾವಿದರೂ ಆಕ್ಷೇಪಣೆಯ ದನಿ ಎತ್ತದಿರುವುದು ಬೇಸರದ ಸಂಗತಿ."

- ಪ್ರೊ. ವಿ.ಜಿ. ಅಂದಾನಿ

"ಸಂಬಳ ಹೆಚ್ಚಿಸಿದರೆ ಭ್ರಷ್ಟಾಚಾರ ನಿರ್ಮೂಲನೆಯಾಗುತ್ತದೆ ಎಂಬುದು ಭ್ರಮೆಯಾಗಿದೆ. ಭ್ರಷ್ಟರು ಅಂಟುರೋಗದಂತೆ ಸಮಾಜದ ತುಂಬಾ ಹರಡುತ್ತಿದ್ದಾರೆ."

- ಸಂತೋಷ್ ಹೆಗ್ಡೆ

"ರೆಡ್ಡಿ ಸಹೋದರರು ಶೇ.101ರಷ್ಟು ಪರಿಶುದ್ಧರು ಎಂದು ಮುಖ್ಯಮಂತ್ರಿಗಳೇ ಸರ್ಟಿಫಿಕೇಟ್ ನೀಡುವುದಾದರೆ ಲೋಕಾಯುಕ್ತ ತನಿಖೆ ಏಕೆ ಬೇಕು? ಮುಖ್ಯಮಂತ್ರಿಗಳೇ ಹೀಗೆ ಹೇಳಿದ ಮೇಲೆ ಅಕ್ರಮ ಗಣಿಗಾರಿಕೆಯ ತನಿಖೆಯಲ್ಲಿ ನಮ್ಮ ಕಚೇರಿ ಹೇಗೆ ಮುಂದುವರೆಯಲಾಗುತ್ತದೆ?"

- ಸಂತೋಷ್ ಹೆಗ್ಡೆ

"ಭ್ರಷ್ಟ ಆಡಳಿತ ಪಕ್ಷ, ಅಸಮರ್ಥ ವಿರೋಧ ಪಕ್ಷ, ಪುಕ್ಕಲು ಮುಖ್ಯಮಂತ್ರಿ, ಬೇಜವಾಬ್ದಾರಿ ಮತದಾರರು, ಎಡಬಿಡಂಗಿ ಸಂಸ್ಕೃತಿ ರಕ್ಷಕರು, ಆತ್ಮವಂಚಕ ಧಾರ್ಮಿಕ ಮುಖಂಡರು, ಮೂಕ ಸಜ್ಜನರು... ಬೇಡದ್ದೆಲ್ಲವೂ, ಎಲ್ಲರೂ ಕೂಡಿದಾಗ "ಬಳ್ಳಾರಿ ಗಣಿ ಮಾಫಿಯಾ" ಅಲ್ಲದೆ ಮದರ್ ಥೆರೇಸಾ ಸಂತತಿ ಸೃಷ್ಟಿಸಲು ಸಾಧ್ಯವೇ?"

- ದಿನೇಶ್ ಅಮೀನ್ ಮಟ್ಟು

"ನಮ್ಮ ಸಾಹಿತಿಗಳು ನಮ್ಮ ರಾಜಕಾರಣಿಗಳಿಗಿಂತಲೂ, ನಮ್ಮ ವ್ಯಾಪಾರಿಗಳಿಗಿಂತಲೂ ಭಾರಿ ಭಾರಿ ಶ್ರೇಷ್ಠರಾಗಿದ್ದಾರೆ ಎಂದರೆ ನನಗೆ ಹೆದರಿಕೆ. ನಮ್ಮ ಸಾಹಿತ್ಯ ಪರಿಷತ್ ಸ್ವಚ್ಛವಾಗಿರಬೇಕು ಎನ್ನುವ ಕಾಳಜಿಗಿಂತ ನಮ್ಮ ಹೋಟೆಲ್‌ಗಳು ಸ್ವಚ್ಛವಾಗಿರಬೇಕು ಅನ್ನುವ ಕಾಳಜಿ ತೀರಾ ಕಡಿಮೆಯಾಗಿ ಹೋದರೆ ನನಗೆ ಹೆದರಿಕೆ.... ಶ್ರೇಷ್ಠತೆಯ ವ್ಯಸನವೆಂಬುದು ಪುನಃ ಹೋಲಿಕೆ ಮತ್ತು ತುಲನೆಗಳ ಮುಖಾಂತರವೇ ಮೌಲ್ಯಮಾಪನ ಮಾಡಲು ಬಯಸುತ್ತದೆ. ಅದಕ್ಕಾಗಿ ಆದರ್ಶ ಮಾದರಿಯೊಂದನ್ನು ನಿಕಷವೆಂದು ಕೇಂದ್ರದಲ್ಲಿ ಸ್ಥಾಪಿಸಿಟ್ಟುಕೊಳ್ಳುತ್ತದೆ."

-ಕೆ.ವಿ. ಸುಬ್ಬಣ್ಣ *(1992ರ ಭಾಷಣವೊಂದರಲ್ಲಿ)*

ನಂಬಿದ್ರೆನಂಬಿ ಬಿಟ್ರೆಬಿಡಿ

"ಬಳ್ಳಾರಿ ಸಹೋದರರು ಶೇ.101ರಷ್ಟು ಶುದ್ಧಹಸ್ತರು."

- ಯಡಿಯೂರಪ್ಪ

"ನಾವು 24 ಕ್ಯಾರೆಟ್‌ನಷ್ಟು ಅಪರಂಜಿ ಚಿನ್ನಗಳು."

- ಜನಾರ್ದನ ರೆಡ್ಡಿ

ಬೆಂಗಳೂರು ಲಂಡನ್ ಅಲ್ಲ, ಭಾರತ ಬ್ರಿಟನ್ ಅಲ್ಲ!

"ದೇಶದಲ್ಲಿ ಮೂಲಸೌಕರ್ಯ ವೃದ್ಧಿಗೆ ಸರ್ಕಾರಿ-ಖಾಸಗಿ ಸಹಭಾಗಿತ್ವವೊಂದೇ ದಾರಿ. ಲಂಡನ್‌ನಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ವ್ಯವಸ್ಥಿತವಾಗಿ ರೂಪುಗೊಂಡಿರುವ ವಿದ್ಯುತ್ ಪೂರೈಕೆ ಮಾದರಿಯನ್ನೇ ನಾವೂ ಏಕೆ ಅಳವಡಿಸಬಾರದು? ಬೆಂಗಳೂರೇ ಇದಕ್ಕೆ ಸೂಕ್ತ ವೇದಿಕೆ ಏಕಾಗಬಾರದು?"

- ಗಜೇಂದರ್ ಹಾಲ್ದಿಯಾ, ಯೋಜನಾ ಆಯೋಗದ ಸಲಹೆಗಾರ

ಭಾಷಾ ಅಜ್ಞಾನಕ್ಕಿಂತ ಕೇಸರಿ ಕಾಮಾಲೆಯ ಸಮಸ್ಯೆ

"ಇತರ ಭಾರತೀಯ ಭಾಷೆಗಳ ಬಗೆಗಿನ ವಿದ್ವಾಂಸರ ಅಜ್ಞಾನದಿಂದಾಗಿ ಇತಿಹಾಸ ಸಂಶೋಧನೆಗಳ ಮೇಲೆ ಮಾರಕ ಪರಿಣಾಮ ಉಂಟಾಗುತ್ತಿದೆ."

- ಪ್ರೊ. ಸುಬ್ಬರಾಯಲು

ಸಮಸ್ಯೆ ಕತ್ತಿಯದ್ದು, ಕೊಲೆಗಾರನದ್ದಲ್ಲ??

"ಟಿವಿ ಚಾನೆಲ್ ಮೇಲೆ ನಾವು ಶಾಂತಿಯುತವಾಗಿಯೇ ದಾಳಿ ಮಾಡಿದೆವು. ಆದರೆ ಹಾಗೆ ಮಾಡುವಾಗ ಕೆಲವು ಹ[illegible]ಂಡಗಳು ಮತ್ತು ಸಣ್ಣಪುಟ್ಟ ಆಸ್ತಿ-ಪಾಸ್ತಿಗೆ ಹಾ[illegible]ಾಗಿದ್ದಕ್ಕೆ ನಾವು ಕ್ಷಮೆ ಕೋರುತ್ತೇವೆ."

- ಆರೆಸ್ಸೆಸ್ ಹೇಳಿಕೆ

ಮೊ[illegible] ಮತ್ತೊಬ್ಬ ಮಂತ್ರಿ 1 ಕೋಟಿ ಅಂದಿದ್ದರಲ್ಲ!!

"ಬಿಜೆಪಿ ತನ್ನ ಅಧಿಕಾರಾವಧಿಯಲ್ಲಿ 10 ಲಕ್ಷ ಜನರಿಗೆ ಉದ್ಯೋಗ ಕಲ್ಪಿಸುವ ಗುರಿ ಹೊಂದಿದೆ."

- ಬಚ್ಚೇಗೌಡ

ಆಧ್ಯಾತ್ಮವೆಂದರೆ ಹೋಮ-ಹವನವಲ್ಲ ಗೌಡರೇ!

"ಪ್ರಸ್ತುತ ಸಾಮಾಜಿಕ-ರಾಜಕೀಯ ವ್ಯವಸ್ಥೆಗೆ ಆಧ್ಯಾತ್ಮದಿಂದಲೇ ಮುಕ್ತಿ. ಈ ದಿಸೆಯಲ್ಲಿ ರಾಜಕೀಯ ಏಕತೆಗೆ ಆಧ್ಯಾತ್ಮಕ್ಕೆ ಮೊರೆಹೋಗುವ ಅವಶ್ಯಕತೆ ಇದೆ."

- ದೇವೇಗೌಡ

ನಮ್ಮದು ಎಮ್ಮೆ ಸಂಸ್ಕೃತಿ, ಗೋವು ಸಂಸ್ಕೃತಿಯಲ್ಲ!

"ಗೋವು ಇರುವವರೆಗೂ ನಮ್ಮ ಸಂಸ್ಕೃತಿ ಇರುತ್ತದೆ. ಗೋವು ಅಳಿದಲ್ಲಿ ನಮ್ಮ ಸಂಸ್ಕೃತಿಯೂ ಇಲ್ಲವಾಗುತ್ತದೆ."

- ಚಿದಾನಂದಮೂರ್ತಿ

ಆರೆಸ್ಸೆಸ್ ಎಂಬ ಭಯೋತ್ಪಾದಕ ಸಂಘಟನೆ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

2007 ರ ಮೇ 18. ಶುಕ್ರವಾರ. ಮುಸಲ್ಮಾನರಿಗೆ ಖ್ಯವಾದ ದಿನ. ಅಂದಿನ ಹೈದರಾಬಾದಿನ ಅತಿ ಮುಖ್ಯ ತ್ತು ದೊಡ್ಡದಾದ ಮೆಕ್ಕಾ ಮಸೀದಿಯಲ್ಲಿ ಬಾಂಬ್ ಯ ಸ್ಫೋಟಗೊಂಡು ಆರು ಜನ ಮುಸಲ್ಮಾನರು ಲ್ಲೇ ಮೃತಪಟ್ಟರು. ನೂರಾರು ಜನ ಗಾಯಗೊಂಡರು. ತರ ನಡೆದ ಪೊಲೀಸ್ ಫೈರಿಂಗ್‌ನಲ್ಲಿ ಇನ್ನೂ ಎಂಟು ಮುಸಲ್ಮಾನರು ಸಾವಿಗೀಡಾದರು.

ಈ ಬಾಂಬ್ ಸ್ಫೋಟಗೊಂಡದ್ದು ಒಂದು ಮಸೀದಿ ಲ್ಲಾದರೂ, ಅದಕ್ಕೆ ಬಲಿಯಾದವರು ಮುಸಲ್ಮಾನರಾದರೂ ಲೀಸರು ಬಂಧಿಸಿದ್ದು 26 ಮುಸಲ್ಮಾನರನ್ನು. ಅಷ್ಟೇ ಅವರೆಲ್ಲರೂ ಹುಜಿ ಎಂಬ ಭಯೋತ್ಪಾದಕ ಟನೆಯ ಸದಸ್ಯರೆಂದೂ ವಾದಿಸಿದ ಪೊಲೀಸರು ಗೆಲ್ಲ ಹಿಂಸೆ ನೀಡಿ ತಾವೇ ಆ ಬಾಂಬ್ ಸ್ಫೋಟದ ದ್ದೇವು ಎಂಬ ತಪ್ಪೊಪ್ಪಿಗೆಯನ್ನು ಅವರಿಂದ ವಂತವಾಗಿ ಪಡೆದು ಅವರನ್ನೆಲ್ಲ ಆರು ತಿಂಗಳ ಬಂಧನದಲ್ಲಿಟ್ಟಿತ್ತು.

ಅಲ್ಲ, ಮುಸಲ್ಮಾನ ಭಯೋತ್ಪಾದಕರು ಅದ್ಯಾಕೆ ಸಲ್ಮಾನರೇ ಪ್ರಾರ್ಥನೆ ಸಲ್ಲಿಸುತ್ತಿರುವಾಗ ಜಿದಿಯೊಂದರಲ್ಲಿ ಬಾಂಬ್ ಸ್ಫೋಟಿಸುತ್ತಾರೆ ಎಂಬ ಯನ್ನು ಪೊಲೀಸರಾಗಲಿ, ಮಾಧ್ಯಮಗಳಾಗಲಿ, ಕಾರಣಿಗಳಾಗಲೀ ಕೇಳಿಕೊಳ್ಳಲೇ ಇಲ್ಲ, ಬದಲಾಗಿ, ನಂತೆ ಎಲ್ಲಾ ಭಯೋತ್ಪಾದಕ ಕೃತ್ಯಗಳ ಹಿಂದೆ ಸಲ್ಮಾನ ಉಗ್ರಗಾಮಿಗಳೇ ಇರುತ್ತಾರೆಂಬ 'ಸರಳ ಕ್ಕೆ ಎಲ್ಲರೂ ಜೋತುಬಿದ್ದರು.


ಇದೇ ತರ್ಕ ಹಲವಾರು ಬಾರಿ ಪುನರಾವರ್ತನೆ ಡಿತು. 2007 ರಲ್ಲಿ ಅಜ್ಮೇರ್‌ನಲ್ಲಿರುವ ಸೂಫಿ ದಲ್ಲಿ; ಮಹಾರಾಷ್ಟ್ರದ ಮಾಲೆಗಾಂವ್ ನಗರದ ಸಲ್ಮಾನರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಶದಲ್ಲಿ, ಪಾಕಿಸ್ತಾನದ 68 ಮುಸಲ್ಮಾನರನ್ನು ಬಲಿ ಕೊಂಡ ಸಂಜೋತಾ ರೈಲು ಬಾಂಬ್ ಸ್ಫೋಟ .. ಈ ಎಲ್ಲಾ ಪ್ರಕರಣಗಳಲ್ಲೂ ಪೊಲೀಸರ ಗೆಗೆ, ಮಾಧ್ಯಮಗಳ ಬುದ್ಧಿಗೆ ಬಂದದ್ದು ವಿವಿಧ ರುಗಳಡಿ ರೂಪಿತಗೊಂಡಿರುವ ಮುಸಲ್ಮಾನ ಯೋತ್ಪಾದಕ ಸಂಘಟನೆಗಳ ಹೆಸರುಗಳೇ....

ಆದರೆ ಕೆಲವೇ ಕೆಲವು ಅಧಿಕಾರಿಗಳಲ್ಲಿ, ರಾಜಕಾರಣಿ ಮತ್ತು ಪತ್ರಕರ್ತರಲ್ಲಿ ಈ ಕೃತ್ಯಗಳ ಹಿಂದೆ ದೂತ್ವವಾದಿ ಉಗ್ರಗಾಮಿಗಳ ಕೈವಾಡ ಇರಬಹುದೇ ಗುಮಾನಿಯಂತೂ ಉದ್ಭವಿಸಿತ್ತು. ಈಗ ಈ ಬಾಂಬ್ ಟಗಳ ತನಿಖೆಯಿಂದಾಗಿ ಅವರ ಗುಮಾನಿ ಇವತ್ತು ಮಾನಿಯಾಗಿ ಉಳಿಯದೆ ದೃಢಪಟ್ಟಿದೆ. ನೂರಾರು ಯಕ ಜನರನ್ನು ಬಲಿತೆಗೆದುಕೊಂಡ ಈ ಭಯೋತ್ಪಾದಕ ಳ ಹಿಂದೆ ಹಿಂದೂ ಉಗ್ರಗಾಮಿಗಳ ಸಂಘಟನೆಗಳು ಯೆಂದೂ, ಆ ಸಂಘಟನೆಗಳೊಂದಿಗೆ ಆರೆಸ್ಸೆಸ್‌ನ ಕರ ನಂಟು ಇದೆಯೆಂದೂ ಸ್ಪಷ್ಟವಾಗುತ್ತಿದೆ. ಈ ದೆಯಲ್ಲೇ ಈಗ ಆರೆಸ್ಸೆಸ್ ಮತ್ತು ಅದರ ಅಂಗ ಗಳಾದ ವಿಶ್ವಹಿಂದೂ ಪರಿಷತ್, ಭಜರಂಗದಳ ತರಹದ ಪುಗಳ ಮೇಲೆ ನಿಷೇಧ ಹೇರಬೇಕೆಂಬ ಕೂಗು ರುತ್ತಿದೆ.

ಆದರೆ ಇಂದು ಸರ್ಕಾರದ, ಆಡಳಿತದ ಯಂತ್ರಾಂಗದ, ೀಸ್ ಮತ್ತು ಮಾಧ್ಯಮಗಳಲ್ಲೂ ಹಿಂದೂತ್ವವಾದಿಗಳು ಶ ಪಡೆದಿರುವುದರಿಂದ ಆರೆಸ್ಸೆಸ್ ವಿರುದ್ಧದ ಈ ಅರಣ್ಯರೋದನದಂತೆ ಕಾಣಿಸುತ್ತಿದೆ...

ತ್ತೀಚೆಗೆ ಪ್ರಕಟಗೊಂಡಿರುವ ಹಲವು ಪತ್ರಿಕಾ ವರದಿಗಳ ರ ಹಿಂದೂ ಭಯೋತ್ಪಾದಕರ ಸುಳಿವು 2002- ಲ್ಲೇ ಪೊಲೀಸರಿಗೆ ಸಿಕ್ಕಿತ್ತು. ಆಗ ಮಧ್ಯಪ್ರದೇಶದ ಪಾಲ್ ರೈಲ್ವೆ ನಿಲ್ದಾಣದಲ್ಲಿ ಒಂದು ಬಾಂಬ್ ಪತ್ತೆ ತ್ತು. ಅದರ ಜಾಲ ಹಿಡಿದು ಹೋದ ಪೊಲೀಸರು ಗೆ ತಲುಪಿದ್ದು ಇಂದೋರ್ ನಗರದಲ್ಲಿದ್ದ ರಾಮಚಂದ್ರ ಕಾಲಸಂಗ್ರ ಮತ್ತು ಸುನೀಲ್ ಜೋಷಿ ಎಂಬ ಹಿಂದೂತ್ವ ವಾದಿಗಳ ಬಾಗಿಲಿಗೆ.

ಈ ಜೋಷಿ ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಈತ ಚಿಕ್ಕವನಾಗಿದ್ದಾಗಲೇ ಆರೆಸ್ಸೆಸ್ ಸಂಘಟನೆಯ ಸಕ್ರಿಯ ಸದಸ್ಯನಾಗಿದ್ದು, ಅದರಲ್ಲೇ ಹಿಂದೂತ್ವದ ಅಮಲನ್ನು ಏರಿಸಿಕೊಂಡು, ಆನಂತರ ಆ ಸಂಘಟನೆಯ ಪ್ರಚಾರಕನಾಗಿದ್ದವನು. ಮಾತ್ರವಲ್ಲ ಆರೆಸ್ಸೆಸ್ ಗೌಪ್ಯವಾಗಿ ಪ್ರಾಯೋಜಿಸುತ್ತಿದ್ದ ಭಯೋತ್ಪಾದಕ ಕೃತ್ಯಗಳಿಗೆ ಮುಖ್ಯಸ್ಥನಾಗಿದ್ದವನು. ಮಧ್ಯಪ್ರದೇಶದ ಕಾಂಗ್ರೆಸ್ ನಾಯಕ ಮತ್ತು ಆತನ ಮಗನನ್ನು ಕೊಂದ ಆರೋಪವನ್ನು ಎದುರಿಸುತ್ತಿದ್ದ ಜೋಷಿ ಇಂದೋರ್‌ನಲ್ಲಿ ಭೂಗತನಾಗಿ ವಾಸಿಸುತ್ತಿದ್ದವನು. ಅಲ್ಲಿಂದಲೇ ಭಯೋತ್ಪಾದಕ ಚಟುವಟಿಕೆಗಳಿಗೆ ರೂಪರೇಷೆಗಳನ್ನು



ನೀಡುತ್ತಿದ್ದವನು. (ಕೆಲ ವರ್ಷಗಳ ಹಿಂದೆ ಈ ಜೋಷಿ ನಿಗೂಢವಾಗಿ ಕೊಲೆಯಾದ).

ಯಾವಾಗ ಭೋಪಾಲ್ ರೈಲು ನಿಲ್ದಾಣದಲ್ಲಿ ಸಿಕ್ಕಿದ್ದ ಬಾಂಬ್ ಪುರಾಣ ಇಂತಹ ಜೋಷಿ ಮನೆಯ ಬಾಗಿಲಿಗೆ ಬಂದುನಿಂತಿತೋ ಆಗ ದಿಗ್ವಿಜಯ್ ಸಿಂಗ್ ಎಂಬ ಕಾಂಗ್ರೆಸ್ ನಾಯಕರು ಮೊತ್ತಮೊದಲ ಬಾರಿಗೆ "ಇದರ ಹಿಂದೆ ಭಜರಂಗದಳ ಕೈವಾಡ ಇದೆ" ಎಂದು ಹೇಳಿದ್ದರು. ಆದರೆ ಅವರ ಮಾತನ್ನು ಆಗ ಯಾರೂ ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ.

ಆನಂತರ ಮಹಾರಾಷ್ಟ್ರದ ಹಲವಾರು ಪುಟ್ಟ ನಗರಗಳಲ್ಲಿನ ಮಸೀದಿಗಳಲ್ಲೂ ಸಣ್ಣ ಬಾಂಬ್‌ಗಳು ಸ್ಫೋಟಗೊಂಡಿದ್ದವು. ನಾಗಪುರದಲ್ಲಿ ಬಾಂಬ್ ಒಂದು ಸ್ಫೋಟಗೊಂಡ ಸ್ಥಳದಲ್ಲಿ ಮುಸಲ್ಮಾನ ಪುರುಷರು ಧರಿಸುವಂತಹ ಉಡುಪುಗಳು ಮತ್ತು ನಕಲಿ ಗಡ್ಡಗಳೂ ಸಿಕ್ಕಿದ್ದವು. ಕಾನಪೂರದಲ್ಲಿನ ಆರೆಸ್ಸೆಸ್ ನಾಯಕನ ಮನೆಯಲ್ಲಿ ಭಜರಂಗದ ಹಲವರು ಬಾಂಬ್‌ಗಳನ್ನು ತಯಾರಿಸುತ್ತಿದ್ದಾಗ ಒಂದು ಬಾಂಬ್ ಸ್ಫೋಟಗೊಂಡು ಇಬ್ಬರು ಸತ್ತಿದ್ದರು... ಇವೆಲ್ಲವೂ ಸ್ಪಷ್ಟವಾಗಿ ಹಿಂದೂತ್ವವಾದಿಗಳು ಈಗ ಭಯೋತ್ಪಾದನೆಗೂ ಇಳಿದಿದ್ದಾರೆ ಎಂಬುದರತ್ತ ಬೊಟ್ಟು ಮಾಡಿ ತೋರಿಸುತ್ತಿದ್ದವು. ಆದರೆ 'ಹಿಂದೂ ಉಗ್ರರು' ಎಂಬುದನ್ನು ಕಲ್ಪಿಸಿಕೊಳ್ಳಲಿಕ್ಕೂ ಆಗದಿದ್ದ ರಾಜಕಾರಣಿಗಳು, ಅಧಿಕಾರಿಗಳು, ಪೊಲೀಸರು ಮತ್ತು ಮಾಧ್ಯಮಗಳು "ಮುಸ್ಲಿಮ್ ಭಯೋತ್ಪಾದಕರು", "ಮುಸ್ಲಿಮ್ ಉಗ್ರರು" ಎಂದೇ ಕಣ್ಣುಮುಚ್ಚಿಕೊಂಡು ಜಪಿಸುತ್ತಿದ್ದರು.

ಎಷ್ಟರಮಟ್ಟಿಗೆ ಅಂದರೆ ಮಾಲೆಗಾಂವ್ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಸಾಕ್ಷ್ಯಾಧಾರಿಗಳು ಮೀಸೆ ಗಡ್ಡ ಇಲ್ಲದವರ ಬಗ್ಗೆ ಮಾಹಿತಿ ನೀಡಿದ್ದರೆ ಪೊಲೀಸರು ಹಲವಾರು ವರ್ಷಗಳಿಂದ ಗಡ್ಡ ಮೀಸೆ ಹೊಂದಿದ್ದ ಮುಸಲ್ಮಾನರನ್ನು ಬಂಧಿಸಿದ್ದರು. ಈ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಜಹೀದ್ ಅಂದು 700 ಕಿಲೋಮೀಟರ್ ದೂರದ ನಗರದಲ್ಲಿ ಪ್ರಾರ್ಥನೆಯನ್ನು ನಡೆಸಿಕೊಡುತ್ತಿದ್ದರೂ ಆತನನ್ನು ಬಂಧಿಸಿದ್ದರು. ಇದೆಲ್ಲಕ್ಕಿಂತಲೂ ಹಾಸ್ಯಾಸ್ಪದವಾಗಿ ಈ ಪ್ರಕರಣದ ರೂವಾರಿ ಎಂದು ಶಬ್ಬೀರ್ ಮಿಸಿಉಲ್ಲಾನನ್ನೇ ಪೊಲೀಸರು ಹೆಸರಿಸಿದ್ದರು. ಆದರೆ ಅದೇ ಮಿಸಿಉಲ್ಲಾ ಅದಕ್ಕಿಂತ ಒಂದು ತಿಂಗಳ ಹಿಂದಿನಿಂದ ಅದೇ ಪೊಲೀಸರ ವಶದಲ್ಲಿದ್ದ!

ಅಜ್ಮೇರ್ ದರ್ಗಾ ಬಾಂಬ್ ಸ್ಫೋಟದ ಹಿಂದೆಯೂ ಹೂಜಿ ಮತ್ತು ಎಲ್‌ಇಟಿ ತರಹದ ಸಂಘಟನೆಗಳಿವೆ ಎಂದು ಹೇಳಿದ್ದ ಪೊಲೀಸರು, ಸಮ್ಜೋತೆ ರೈಲು ಬಾಂಬ್ ಸ್ಫೋಟದ ಹಿಂದೆಯೂ ಪಾಕಿಸ್ತಾನದ ಐಎಸ್‌ಐ ಕೈವಾಡ ಇದೆ ಎಂದೇ ವಾದಿಸಿದ್ದರು. ಆದರೆ ಆರೆಸ್ಸೆಸ್, ವಿವಿಧ ಮುಖವಾಡಗಳನ್ನು ಹೊತ್ತಿರುವ ಹಲವಾರು ಹಿಂದೂತ್ವವಾದಿ ಸಂಘಟನೆಗಳು ಮತ್ತು ಹಿಂದೂತ್ವ ಭಯೋತ್ಪಾದಕರ ನಡುವಿನ ನಂಟನ್ನು ಬಹಿರಂಗಪಡಿಸಿದ್ದು ಮಹಾರಾಷ್ಟ್ರದ ದಿಟ್ಟ ಪೊಲೀಸ್ ಅಧಿಕಾರಿ ಹೇಮಂತ್ ಕರ್ಕರೆ ಅವರು.

ಮಹಾರಾಷ್ಟ್ರದ ಮಾಲೆಗಾಂವ್‌ನಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟದ ತನಿಖೆಯನ್ನು ಕೈಗೆತ್ತಿಕೊಂಡ ವಿಶೇಷ ಪೊಲೀಸ್ ಪಡೆಯ ಮುಖ್ಯಸ್ಥ ಕರ್ಕರೆ ಅವರು ಪ್ರಜ್ಞಾ ಸಿಂಗ್ ಎಂಬ ಕಾವಿ ಧಾರಿಣಿಯನ್ನು, ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪುರೋಹಿತ್ ಎಂಬ ಸೈನ್ಯಾಧಿಕಾರಿಯನ್ನು, ಅಮೃತಾನಂದ ಮಹಾರಾಜ್ ಎಂಬ ಢೋಂಗಿ ಸ್ವಾಮಿಯನ್ನು, ಅಭಿನವ ಭಾರತ ಎಂಬ ಹಿಂದೂವಾದಿ ಸಂಘಟನೆಯ ಮುಖ್ಯಸ್ಥನಾಗಿದ್ದ ನಿವೃತ್ತ ಸೈನ್ಯಾಧಿಕಾರಿ ಮೇಜರ್ ಉಪಾಧ್ಯಾಯ ಎಂಬುವವನನ್ನು ಬಂಧಿಸಿದ್ದರು. ಈ "ಹಿಂದೂ ವೀರ ಮಣಿ"ಗಳೆಲ್ಲರೂ ಭಯೋತ್ಪಾದಕರು ಎಂಬ ಆರೋಪ ಪಟ್ಟಿಯನ್ನೂ ಕರ್ಕರೆ ನ್ಯಾಯಾಲಯದ ಮುಂದೆ ಸಲ್ಲಿಸಿದ್ದರು.

ಆನಂತರ ಬಹಿರಂಗಗೊಂಡ ಸಂಗತಿಗಳು ಯಾವುದೆಂದರೆ ಈ ಎಲ್ಲ ಭಯೋತ್ಪಾದಕ ಕೃತ್ಯಗಳ ರೂವಾರಿ ಆರೆಸ್ಸೆಸ್‌ನ ಪ್ರಚಾರಕ ಸುನೀಲ್ ಜೋಷಿ ಎಂದೂ, ಅಜ್ಮೇರ್‌ನ ದರ್ಗಾ, ಹೈದರಾಬಾದಿನ ಮಸೀದಿ ಮತ್ತು ಇತರೆ ಕಡೆಗಳಲ್ಲಿ ಹಿಂದೂತ್ವವಾದಿ ಉಗ್ರರು ಸ್ಫೋಟಿಸಿದ ಬಾಂಬ್‌ಗಳಿಗೆ ಆರ್‌ಡಿಎಕ್ಸ್ ಅನ್ನು ಒದಗಿಸಿದ್ದು ಸೈನ್ಯಾಧಿಕಾರಿ ಶ್ರೀಕಾಂತ್ ಪುರೋಹಿತನೆ ಎಂಬುದು.

ಅದರಷ್ಟೇ ಮುಖ್ಯವಾದ ಇನ್ನೊಂದು ಅಂಶ ಯಾವುದೆಂದರೆ ಈ ಎಲ್ಲಾ ಭಯೋತ್ಪಾದಕ ಕೃತ್ಯಗಳಿಗೆ ಸಂಬಂಧಿಸಿದಂತೆ ಈಗ ಪೊಲೀಸರು ಬಂಧಿಸಿರುವವರು ಮತ್ತು ಪತ್ತೆಹಚ್ಚುತ್ತಿರುವವರೆಲ್ಲಾ ಒಂದಲ್ಲ ಒಂದು ಹಿಂದೂ ಸಂಘಟನೆಗಳ ಸದಸ್ಯರು ಮತ್ತು ಆರೆಸ್ಸೆಸ್‌ನೊಂದಿಗೆ ಸಂಪರ್ಕ ಹೊಂದಿರುವವರೇ ಆಗಿದ್ದಾರೆ.

ಆರೆಸ್ಸೆಸ್‌ನ ಹಿಂದೂತ್ವ ಭಯೋತ್ಪಾದನೆಗೆ ಇವೆಲ್ಲ ಸಾಕ್ಷಿಗಳು ಸಾಲದೆಂಬಂತೆ ಕಳೆದ ವಾರ ಹೆಡ್‌ಲೈನ್ಸ್ ಟುಡೆ ಮತ್ತು ಆಜ್ ತಕ್ ಎಂಬ ಟಿವಿ ಚಾನೆಲ್‌ಗಳು 'ಹಿಂದೂ ಭಯೋತ್ಪಾದನೆ' ಎಂಬ ಕಾರ್ಯಕ್ರಮವನ್ನು ಪ್ರಸಾರ ಮಾಡಿದವು. ಅದರಲ್ಲಿ ಆರೆಸ್ಸೆಸ್‌ನ ನಿಜವಾದ ಮುಖವಾಡವನ್ನು ಕಳಚಿಡಲಾಯಿತು.

ಆ ಕಾರ್ಯಕ್ರಮದಲ್ಲಿ ಸ್ಫೋಟಿಸಲಾದ ಸಂಗತಿಗಳು ಯಾವುದೆಂದರೆ:

* ಆರೆಸ್ಸೆಸ್‌ನ ಹಾಲಿ ಮುಖ್ಯಸ್ಥ ಮೋಹನ್ ಭಾಗವತ್‌ಗೆ ಆಪ್ತನಾದ ಮತ್ತೋರ್ವ ಆರೆಸ್ಸೆಸ್ ನಾಯಕ ಇಂದ್ರೇಶ್ ಕುಮಾರ್ ಎಂಬಾತ ಹಿಂದೂ ಭಯೋತ್ಪಾದಕ ಸುನೀಲ್ ಜೋಷಿಯ 'ಗುರು' ಆಗಿದ್ದನಲ್ಲದೆ, ಕುಮಾರ್‌ಗೆ ಹೈದರಾಬಾದಿನ ಮಸೀದಿ ಮತ್ತು ಅಜ್ಮೇರ್‌ನಲ್ಲಿನ ದರ್ಗಾದಲ್ಲಿ ಬಾಂಬ್ ಸ್ಫೋಟಿಸುವ ಸಂಚಿನ ಬಗ್ಗೆ ಗೊತ್ತಿತ್ತು ಮತ್ತು ಆ ಹಿಂಸಾಕೃತ್ಯಗಳಿಗೆ ಕುಮಾರನ ಆಶೀರ್ವಾದವೂ ಇತ್ತು.
* ಆರೆಸ್ಸೆಸ್ ಮೂಲದವನಾದ ಮತ್ತು ಮಾಜಿ ಬಿಜೆಪಿ ಸಂಸದನಾದ ಬಿ.ಎಲ್. ಶರ್ಮಾ ಎಂಬಾತ 2007 ರಲ್ಲಿ ನಾಸಿಕ್‌ನ ಒಂದು ದೇವಸ್ಥಾನದಲ್ಲಿ ಶ್ರೀಕಾಂತ್ ಪುರೋಹಿತನನ್ನು ಭೇಟಿ ಮಾಡಿ ಮುಸಲ್ಮಾನರ ವಿರುದ್ಧ ಒಂದು ಭೂಗತ ಭಯೋತ್ಪಾದಕ ಹಿಂದೂ ಸಂಘಟನೆಯನ್ನು ಹುಟ್ಟುಹಾಕುವ ಬಗ್ಗೆ ಚರ್ಚೆ ನಡೆಸಿದ್ದ. ಅದರ ಫಲವೇ ಅಭಿನವ ಭಾರತ ಎಂಬ ಹಿಂದೂ ಉಗ್ರಗಾಮಿ ಸಂಘಟನೆಯ ಉದ್ಭವ.
* ಆರೆಸ್ಸೆಸ್‌ನ ಸದಸ್ಯನಾಗಿರುವ ವೈದ್ಯ ಆರ್.ಪಿ. ಸಿಂಗ್ ತಾನು ಹೇಗೆ ಭಾರತದ ಉಪಾಧ್ಯಕ್ಷ ಹಮೀದ್ ಅನ್ಸಾರಿ ಅವರನ್ನು ಕೊಲ್ಲಲು ಯತ್ನಿಸಿದೆ ಎಂದು ವಿವರಿಸಿದ ದೃಶ್ಯಗಳ ಜೊತೆಗೆ "ಮುಸಲ್ಮಾನರು ನಂಬರ್ ಒನ್ ಶತ್ರುಗಳು. ಅವರನ್ನೆಲ್ಲ ನಾನು ಕೊಂದು ಹಾಕುತ್ತೇನೆ. ಅದಕ್ಕೆ ನನಗೆ ಬಾಂಬ್‌ಗಳು ಬೇಕು" ಎಂದು ಹೇಳಿದ ದೃಶ್ಯಗಳನ್ನೆಲ್ಲ ಪ್ರಸಾರ ಮಾಡಲಾಯಿತು.

ಇಂದ್ರೇಶ್ ಕುಮಾರ್ ಮತ್ತು ಸುನೀಲ್ ಜೋಷಿ ಅಲ್ಲದೆ ಈಗ ಬಂಧನದಲ್ಲಿರುವ ದೇವೇಂದ್ರ ಗುಪ್ತ, ದಯಾನಂದ್ ಪಾಂಡೆ, ರಮೇಶ್ ಉಪಾಧ್ಯಾಯ, ಪ್ರಜ್ಞಾ ಠಾಕೂರ್, ಶ್ರೀಕಾಂತ್ ಪುರೋಹಿತ್, ಅಶೋಕ್ ವರ್ಷ್ಣೆ ಮತ್ತು ಅಶೋಕ್ ಬೆರ‍್ರಿ ಎಲ್ಲರೂ ಹಿಂದೂತ್ವವಾದಿಗಳೇ. ಹಾಗೆಯೇ ಈಗ ಪೊಲೀಸರು ಕಣ್ಣಿಟ್ಟಿರುವ ಸ್ವಾಮಿ ಅಸೀಮಾನಂದ (ಈತ ನರಹಂತಕ ನರೇಂದ್ರ ಮೋದಿಗೆ ಆಪ್ತ), ವೈದ್ಯ ಬಿ.ಎಲ್. ಶರ್ಮ, ನಾಪತ್ತೆ ಆಗಿರುವ ರಾಮಚಂದ್ರ ಕಾಲಸಗ್ರಾ ಮತ್ತು ಸಂದೀಪ್ ಡಾಂಗೆ...... ಇವರೆಲ್ಲರೂ ಆರೆಸ್ಸೆಸ್ ಸದಸ್ಯರು ಅಥವಾ ನಾಯಕರು....

ಇದೆಲ್ಲದರ ಅರ್ಥ: ಆರೆಸ್ಸೆಸ್ ತಾನು ಹೇಳಿಕೊಳ್ಳುವಂತೆ ಒಂದು ಸಾಮಾಜಿಕ ಮತ್ತು ಸಾಂಸ ತಿಕ ಸಂಘಟನೆ ಅಲ್ಲ, ಬದಲಾಗಿ ಆರೆಸ್ಸೆಸ್ ಮತ್ತು ಅದರ ಇತರೆ ಎಲ್ಲಾ ಸಂಘಟನೆಗಳು ಹಿಂದೂ ಭಯೊತ್ಪಾದಕ ಸಂಘಟನೆಗಳು ಎಂದೇ ಅಲ್ಲವೇ?

ಹಿಂದೂತ್ವವಾದವನ್ನೇ ತನ್ನ ಧ್ಯೇಯವಾಗಿಸಿಕೊಂಡಿರುವ ಆರೆಸ್ಸೆಸ್ ಇವತ್ತು ಹಲವು ತಲೆತಿರುಕರ ಸಂಘಟನೆಯಾಗಿ ಉಳಿದಿಲ್ಲ. ಬದಲಾಗಿ ಇವತ್ತು ಸಾರ್ವಜನಿಕವಾದ ಪ್ರತಿಯೊಂದು ಕ್ಷೇತ್ರವನ್ನೂ ಆಕ್ರಮಿಸಿಕೊಂಡಿರುವ ಅನಾಹುತಕಾರಿ ಸಂಘಟನೆಯಾಗಿದೆ. ನಮ್ಮ ಜಾತ್ಯತೀತ ಸಂವಿಧಾನವನ್ನೇ ಕಿತ್ತೊಗೆದು ಮೂಲಭೂತವಾದಿ ಹಿಂದೂ ರಾಷ್ಟ್ರವನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿರುವ ಆರೆಸ್ಸೆಸ್ ರಾಜಕೀಯ, ಸರ್ಕಾರ, ಪೊಲೀಸ್, ನ್ಯಾಯಾಂಗ, ಮಾಧ್ಯಮದಂತಹ ಕ್ಷೇತ್ರಗಳನ್ನೆಲ್ಲ ಆವರಿಸಿಕೊಂಡಿದೆ. ಇನ್ನು ಆರೆಸ್ಸೆಸ್ಸಿನ ರಾಜಕೀಯ ಅಂಗವಾಗಿರುವ ಬಿಜೆಪಿಯಲ್ಲಿ ಅದಕ್ಕೆ ಎಷ್ಟು ಶಕ್ತಿ ಇದೆ ಎಂದರೆ ಬಿಜೆಪಿ ಸರ್ಕಾರದಲ್ಲಿ ಯಾರು ಮುಖ್ಯಮಂತ್ರಿ ಆಗಬೇಕೆಂಬುದರಿಂದ ಹಿಡಿದು ಸಚಿವ ಸಂಪುಟದಲ್ಲಿ ಯಾರಿರಬೇಕು, ಯಾರಿರಬಾರದು ಎಂದೆಲ್ಲ ಫತ್ವಾ ಹೊರಡಿಸುತ್ತದೆ. ವಿಶ್ವಹಿಂದೂ ಪರಿಷತ್ ಮತ್ತು ಭಜರಂಗದಳದಂತಹ ಗೂಂಡಾ ಪಡೆಗಳನ್ನು ಹೊಂದಿದೆ. ಶಿಕ್ಷಣ, ಸಮಾಜೋದ್ಧಾರದ ನೆಪದಲ್ಲಿ ಎಲ್ಲೆಡೆ ತನ್ನ ಪರಧರ್ಮ ದ್ವೇಷದ ನಂಜನ್ನು ಹಬ್ಬುತ್ತಿದೆ. ಈಗ ಇದೆಲ್ಲದರೊಂದಿಗೆ ಹಿಂದೂ ಭಯೋತ್ಪಾದಕ ಸಂಘಟನೆಯನ್ನು ಹುಟ್ಟುಹಾಕಿ ನೂರಾರು ಅಮಾಯಕರನ್ನು ಕೊಂದಿದೆ.

ಹೇಳಿ, ಇಂತಹ ಆರೆಸ್ಸೆಸ್ ಅನ್ನು ಖಂಡಿತವಾಗಿಯೂ ನಿಷೇಧಿಸಬೇಕಲ್ಲವೇ? ●

ಕಾಂಗ್ರೆಸ್ ದಂಡಯಾತ್ರೆ ಆತಂಕದಲ್ಲಿ ರೆಡ್ಡಿ ಗ್ಯಾಂಗ್!

ಬಳ್ಳಾರಿಯ ರೆಡ್ಡಿ ರಕ್ಕಸರ ವಿರುದ್ಧ ಕೊನೆಗೂ ಕಾಂಗ್ರೆಸ್ ನೇರ ಯುದ್ಧ ಘೋಷಿಸಿದೆ. ಇದೇ ತಿಂಗಳ 25ನೇ ತಾರೀಖು ಬೆಂಗಳೂರಿನಿಂದ ಶುರುವಾಗಲಿರುವ ಹೋರಾಟಕ್ಕೆ 'ಪಾದಯಾತ್ರೆ' ಎಂಬ ಹೆಸರಿದೆಯಾದರೂ ಅದೊಂದು ದಂಡಯಾತ್ರೆಯಾಗಲಿದೆ. ದಿನ ಬೆಳಗಾದರೆ ಮೀಸೆ ತಿರುವಿಕೊಂಡು ಅಟ್ಟಹಾಸ ಮಾಡುತ್ತಿದ್ದ ರೆಡ್ಡಿ ಗ್ಯಾಂಗಿಗೇ ಈಗ ಮೈ ನಡುಕ ಶುರುವಾಗಿ ಬಿಟ್ಟಿದೆ. ಏಕೆಂದರೆ ಈ ದಂಡಯಾತ್ರೆಯ ವಿರುದ್ಧ ನಿಲ್ಲುವುದೆಂದರೆ ಹುಡುಗಾಟವಲ್ಲ ಎಂಬುದು ರೆಡ್ಡಿಗಳಿಗೆ ಗೊತ್ತಾಗಿಹೋಗಿದೆ. ಯಾರೋ ನಾಲ್ವರು ಅಬ್ಬೇಪಾರಿ ಶಾಸಕರನ್ನು ಖರೀದಿಸಿದಷ್ಟು, ಮುಖ್ಯಮಂತ್ರಿ ಯಡ್ಡಿಯನ್ನೇ ಆಡಿಸಿ ಬೀಳಿಸಿ ನೋಡುತ್ತಿದ್ದಂತಹ ಆಟವಲ್ಲ ಇದು. ಖುದ್ದು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ನೀಡುತ್ತಿರುವ ಚಾಲೆಂಜ್ ಇದು. ಈ ಸವಾಲು ಹಾಕಲು ಸೋನಿಯಾ ಕೊಂಚ ಹೆಚ್ಚು ಸಮಯ ತೆಗೆದುಕೊಂಡಿರಬಹುದಾದರೂ ಕಾಂಗ್ರೆಸ್ ಹೈಕಮಾಂಡಿಗಿದು ಅನಿವಾರ್ಯವಾಗಿತ್ತು.
ಈಗಿನ ಕಾಂಗ್ರೆಸ್ ಯುದ್ಧ ಘೋಷಣೆಯ ಕಾರಣಗಳನ್ನು ಇಲ್ಲಿ ವಿವರಿಸಿದೆ.


ಬಳ್ಳಾರಿಯ ರಾಕ್ಷಸ ರೆಡ್ಡಿಗಳ ದುಷ್ಟ ಚಟುವಟಿಕೆಗಳು ಅಕ್ರಮ ಅದಿರು ಲೂಟಿ ಹಾಗೂ ಗೂಂಡಾಗಿರಿ ಲೆವೆಲ್ ಅನ್ನು ದಾಟಿ ಮುಂದೆಹೋಗಿದೆ. ಅವರಿಗೀಗ ನ್ಯಾಷನಲ್ ಲೆವೆಲ್‌ನಲ್ಲಿ ರಾಜಕಾರಣ ಬೇಕಾಗಿದೆ. ಕಳೆದ ಒಂದು ವರ್ಷದಲ್ಲಿ ಈ ಖದೀಮರ ಗುಂಪು ಏನೇನು ರಾಜಕೀಯ ಮಾಡಿದ್ದಾರೆ ಎಂದು ಹೇಳಿದರೆ ಆಶ್ಚರ್ಯವಾಗದಿರದು.

ಅಕ್ರಮ ಗಣಿಗಾರಿಕೆಯ ಮೂಲಕ 50 ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಗುಡ್ಡೆ ಹಾಕಿಕೊಂಡಿರುವ ರೆಡ್ಡಿ ಗ್ಯಾಂಗ್‌ಗೆ ಈಗ ಕೇವಲ ರಾಜ್ಯ ಸರ್ಕಾರವನ್ನಷ್ಟೇ ಕಂಟ್ರೋಲಿನಲ್ಲಿಟ್ಟುಕೊಂಡರೆ ಸಾಕೆನಿಸುತ್ತಿಲ್ಲ. ಅವರಿಗೆ ದೆಹಲಿ ಸರ್ಕಾರದ ಜುಟ್ಟನ್ನೇ ಹಿಡಿಯಬೇಕೆಂಬ ಆಕಾಂಕ್ಷೆ ಬಂದಿದೆ. ಆದರೆ ರೆಡ್ಡಿಗಳೀಗ ಕಾಂಗ್ರೆಸ್ ವಿರೋಧಿ ಪಾಳೆಯದಲ್ಲಿದ್ದಾರೆ. ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ಮೈತ್ರಿಕೂಟವಾಗಿರುವ ಯುಪಿಎಗೆ ವಿರುದ್ಧವಿರುವುದು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ. ಆದರೆ ಎನ್‌ಡಿಎ ಈಗ ರೆಕ್ಕೆಪುಕ್ಕಗಳಿರದ ರೋಗಿಷ್ಟ ಕೋಳಿಯಾಗಿ ಹೋಗಿದೆ. ಒಂದು ಕಾಲದಲ್ಲಿ ಬಿಜೆಪಿ ಜೊತೆಯಲ್ಲಿದ್ದ ಡಿಎಂಕೆ, ತೆಲುಗು ದೇಶಂ, ಜೆಡಿಎಸ್, ತೃಣಮೂಲ ಕಾಂಗ್ರೆಸ್, ಬಿಎಸ್‌ಪಿಗಳೀಗ ದೂರ ಸರಿದಿವೆ. ಇವರಲ್ಲಿ ಅನೇಕ ಪಕ್ಷಗಳು ಈಗ ಕಾಂಗ್ರೆಸ್‌ನೊಂದಿಗಿವೆ. ಈ ರೆಡ್ಡಿಗಳ ಲೆಕ್ಕಾಚಾರ ಏನೆಂದರೆ ಬಿಜೆಪಿ ಮತ್ತೆ ಕೇಂದ್ರದಲ್ಲಿ ಅಧಿಕಾರ ಹಿಡಿಯಬೇಕೆಂದರೆ ಎನ್‌ಡಿಎ ಬಲಗೊಳ್ಳಬೇಕು. ಅದಾದರೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸಮರ್ಥವಾಗಿ ಪೈಪೋಟಿ ನೀಡಿ, ಅಕಸ್ಮಾತ್ ಗೆದ್ದೇ ಬಿಟ್ಟರೆ...

ಈ ಕಳ್ಳರ ನಾಯಕಿ ಸುಷ್ಮಾ ಸ್ವರಾಜ್ ಪ್ರಧಾನಿಯಾಗಿ...

ರೆಡ್ಡಿಗಳ ಗಣಿ ದಂಧೆಗೆ ಯಾವ ಅಡ್ಡಿಯೂ ಇಲ್ಲದಂತಾಗಿ...


ಅವರು ಜಗತ್ತಿನ ಅತೀ ಶ್ರೀಮಂತ ಬ್ಯುಸಿನೆಸ್‌ಮೆನ್‌ಗಳಾಗಿ ಮೆರೆಯುವ ಕನಸು ಕಾಣುತ್ತಿದ್ದಾರೆ.



ಅದಕ್ಕಾಗಿ ಅವರು ಬಿಜೆಪಿ ನಾಯಕರಿಗೆ 5 ಸಾವಿರ ಕೋಟಿ ರೂಪಾಯಿ ತನಕ ಹಣ ಖರ್ಚು ಮಾಡಲು ರೆಡಿಯಿರುವುದಾಗಿಯೂ ಮೆಸೇಜ್ ಕಳುಹಿಸಿದ್ದಾರೆ. ಈ ಮೊತ್ತ ಮುಂದಿನ ಪಾರ್ಲಿಮೆಂಟ್ ಎಲೆಕ್ಷನ್ ಖರ್ಚಿನ ಬಾಬ್ತು!


ಹೀಗೆ ಸತ್ತು ಹೋಗಿರುವ ಎನ್‌ಡಿಎಗೆ ಆಕ್ಸಿಜನ್ ನೀಡಲು ತಯಾರಾಗಿರುವ ರೆಡ್ಡಿಗಳು ಕಳೆದ ಒಂದು ವರ್ಷದಿಂದಲೇ ಕೆಲಸ ಶುರು ಮಾಡಿದ್ದಾರೆ.


ಈ ಹೊಸ 'ಆಪರೇಷನ್ ಕಮಲ' ಮೊದಲು ಪ್ರಯೋಗವಾಗಿದ್ದು ಡಿಎಂಕೆ ನಾಯಕ ಕರುಣಾನಿಧಿ ಮೇಲೆ!





2G Spectrum ನ ಈ ಹಿಂದಿನ ಹರಾಜಿನ ಸಮಯದಲ್ಲಿ ಕೇಂದ್ರ ದೂರ ಸಂಪರ್ಕ ಖಾತೆ ಸಚಿವ ಎ. ರಾಜಾ ಸಾವಿರಾರು ಕೋಟಿ ನುಂಗಿದ ಹಗರಣ ಬಯಲಿಗೆ ಬಂದಾಗ ಕಾಂಗ್ರೆಸ್ ನಾಯಕರಿಗೆ ಇರುಸುಮುರುಸಾಗಿತ್ತು, ಸಂಸತ್‌ನಲ್ಲೂ ಗಲಾಟೆಗಳಾಗಿ ರಾಜಾ ರಾಜೀನಾಮೆ ನೀಡುವ ಸನ್ನಿವೇಶ ಉಂಟಾಗಿತ್ತಲ್ಲವೆ. ಆಗ ಕರುಣಾನಿಧಿ ಕಾಂಗ್ರೆಸ್‌ಗೆ ನೀಡಿದ್ದ ಬೆಂಬಲ ಹಿಂಪಡೆಯುತ್ತಾರೆಂಬ ರೂಮರ್ ಸಹ ಇತ್ತು, ಆಗಲೇ ರೆಡ್ಡಿಗಳು ಕರುಣಾನಿಧಿಯನ್ನು ಕಂಡು ಯುಪಿಎಯಿಂದ ಡಿಎಂಕೆ ಹೊರಬರುವುದಾದರೆ ಒಂದು ಸಾವಿರ ಕೋಟಿ ರೂಪಾಯಿ ನೀಡುವುದಾಗಿ ಆಮಿಷ ಒಡ್ಡಿದ್ದರಂತೆ. ಅದರೊಂದಿಗೆ ಡಿಎಂಕೆ ಮತ್ತೆ ಎನ್‌ಡಿಎ ಜೊತೆ ಸೇರಬೇಕೆಂಬ ಷರತ್ತೂ ಇತ್ತೆನ್ನಲಾಗಿದೆ. ಕರುಣಾನಿಧಿ ಸಹ ಕೆಲಕಾಲ ಈ ಆಫರ್‌ನಿಂದ ಥ್ರಿಲ್ ಆಗಿ ಹೋಗಿದ್ದರಂತೆ. ಆದರೆ ಈಗಾಗಲೇ ಕೈಲಿರುವ ಹಾಗೂ ಮುಂದಿನ ಮೂರೂವರೆ ವರ್ಷ ಇರಬಹುದಾದ ಅಧಿಕಾರ ಬಿಟ್ಟು ವಿನಾಕಾರಣ ಬಿಜೆಪಿ ಜೊತೆ ಯಾಕೆ ಹೋಗಬೇಕೆಂದು ಸುಮ್ಮನಾಗಿದ್ದಾರೆ. ಆದರೆ ಕಾಂಗ್ರೆಸ್ ಏನಾದರೂ ಎ. ರಾಜಾನ ರಾಜೀನಾಮೆಗೆ ಒತ್ತಾಯಿಸಿದ್ದಿದ್ದರೆ ಡಿಎಂಕೆಯವರು ಎನ್‌ಡಿಎ ಹಾಗೂ ರೆಡ್ಡಿ ಭೂತ ತೋರಿಸಿ ಸೋನಿಯಾಗೆ ಧಮಕಿ ಕೊಡುತ್ತಿದ್ದರೆನ್ನುವುದರಲ್ಲಿ ಸಂಶಯವಿಲ್ಲ. ಇದಾದನಂತರ ಮರಾಠ ನಾಯಕ ಶರದ್ ಪವಾರ್ ಶಿಬಿರ ಹೊಕ್ಕ ರೆಡ್ಡಿಗಳು ಮಹಾರಾಷ್ಟ್ರ ಅಸೆಂಬ್ಲಿ ಚುನಾವಣೆ ನಡೆದಾಗಲೂ ಹಣದ ಸಹಾಯ ಮಾಡುವ ಭರವಸೆ ನೀಡಿ ಬಂದಿದ್ದರು. ಕಾಂಗ್ರೆಸ್ ಹೈಕಮಾಂಡಿನ ಅನುಮಾನ ಏನೆಂದರೆ ಪವಾರ್ ಜೊತೆ ಈಗಲೂ ರೆಡ್ಡಿಗಳ ರಹಸ್ಯ ಸಂಪರ್ಕ ಇರಬಹುದು ಎಂದು!






ಇದೆಲ್ಲಕ್ಕಿಂತ ಗಾಬರಿಗೊಳಿಸುವ ಬೆಳವಣಿಗೆ ಪಶ್ಚಿಮ ಬಂಗಾಳದಲ್ಲಿ ಆಗಿದೆ. ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಜೊತೆಗೂ ರೆಡ್ಡಿಗಳ ರಾಜಕೀಯ ನಡೆದಿದೆ. ಮುಂದಿನ ಡಿಸೆಂಬರ್‌ನಲ್ಲಿ ಪಶ್ಚಿಮ ಬಂಗಾಳದಲ್ಲಿ ಅಸೆಂಬ್ಲಿ ಎಲೆಕ್ಷನ್ ನಡೆಯಬೇಕಿದೆ. ಮಮತಾಗೆ ಇದು ನಿರ್ಣಾಯಕವಾದ ಯುದ್ಧ. ಇದನ್ನರಿತಿರುವ ರೆಡ್ಡಿ ಗ್ಯಾಂಗ್ ತೃಣಮೂಲ ಕಾಂಗ್ರೆಸ್‌ನ ಎಲೆಕ್ಷನ್ ಖರ್ಚಿನ ಬಾಬ್ತು 300 ಕೋಟಿ ಕೊಡುವುದಾಗಿ ಆಮಿಷ ಒಡ್ಡಿದ್ದಾರಂತೆ. ಅವರ ಷರತ್ತು ಒಂದೇ!

ಕಾಂಗ್ರೆಸ್ ಮುಗಿಸಲು ಮಮತಾ ಕೈಜೋಡಿಸಬೇಕೆಂಬುದು.

ಈ ಮಧ್ಯೆ ಆಂಧ್ರ ಪ್ರದೇಶದಲ್ಲೂ ರೆಡ್ಡಿ ಗ್ಯಾಂಗ್ ಕಾಂಗ್ರೆಸ್‌ನ ಉಸಿರುಗಟ್ಟಿಸಲು ಹೊರಟಿದೆ. ಅದು ರಾಜಕೀಯ ಬಾಲಕ ಜಗನ್ ಮೋಹನ್ ರೆಡ್ಡಿಯ ಒದಿರ್ಪ ಯಾತ್ರಾ ಮೂಲಕ ವ್ಯಕ್ತಗೊಂಡಿದೆ. ಆಂಧ್ರದಲ್ಲೀಗ ಕಾಂಗ್ರೆಸ್‌ನ ಕಷ್ಟವೇನೆಂದರೆ ತೆಲಂಗಾಣ ಪ್ರಾಂತ್ಯದಲ್ಲಿ ಕಾಂಗ್ರೆಸ್‌ಗೆ ಈಗ ಹೇಳಿಕೊಳ್ಳುವಂಥ ಜನಬೆಂಬಲ ಇಲ್ಲ. ಕೋಸ್ಟಲ್ ಆಂಧ್ರದಲ್ಲಂತೂ ತೆಲುಗುದೇಶಂ ಹಾಗೂ ಚಿರಂಜೀವಿಯ ಪ್ರಜಾ ರಾಜ್ಯಂ ಪ್ರಭಾವ ಹೆಚ್ಚಿದೆ. ಇನ್ನುಳಿದ ರಾಯಲಸೀಮಾ ಮಾತ್ರ ಕಾಂಗ್ರೆಸ್‌ನ ಭದ್ರಕೋಟೆ. ಆದರೆ ಅದೇ ರಾಯಲಸೀಮಾದಲ್ಲೇ ರೆಡ್ಡಿ ಗ್ಯಾಂಗ್ ಹಾಗೂ ಜಗನ್‌ನ ಪ್ರಭಾವ ಹೆಚ್ಚಿದೆ. ಜಾತಿ, ಹಣ, ತೋಳ್ಬಲಗಳ ರಾಯಲಸೀಮಾದಲ್ಲಿ ಕಾಂಗ್ರೆಸ್‌ಅನ್ನು ಉಳಿಸಿ ಬೆಳೆಸಿದ್ದೇ ವೈ.ಎಸ್. ರಾಜಶೇಖರ ರೆಡ್ಡಿ. ವಿಷಯ ಹೀಗಿರುವಾಗ ಕಾಂಗ್ರೆಸ್‌ಗೆ ಜಗನ್ ಬಂಡಾಯದ ವಿರುದ್ಧ ತಕ್ಷಣ ಕದನಕ್ಕಿಳಿಯುವ ಮನಸ್ಸಿಲ್ಲ. ಹಾಗಾಗಿ ಹೈಕಮಾಂಡ್ ಆದೇಶ ಧಿಕ್ಕರಿಸಿ ಸಾಂತ್ವಾನ ಯಾತ್ರೆಗೆ ಹೊರಟಿರುವ ಜಗನ್ ತಂಟೆಗೆ ಹೋಗದೆ ಅವನ ಬೆಂಬಲಿಗರಲ್ಲಿ ಕೆಲವರಿಗೆ ಒದೆ ಕೊಟ್ಟು ದೂರವಿಡುವ ಕೆಲಸ ಮಾಡಿದೆ ಕಾಂಗ್ರೆಸ್. ಜಗನ್ ಮೂಲಕ ಈ ರೆಡ್ಡಿ ಗ್ಯಾಂಗ್ ಕಾಂಗ್ರೆಸ್ ಹೈಕಮಾಂಡಿಗೆ ಹಾಕಿರುವ ನೇರ ಸವಾಲು ಇದೆಂಬುದು ಸೋನಿಯಾಗೂ ಗೊತ್ತಿದೆ. ಜೊತೆಗೆ ರೆಡ್ಡಿಗಳು ಕರುಣಾನಿಧಿ, ಶರದ್ ಪವಾರ್, ಮಮತಾ ಬ್ಯಾನರ್ಜಿ ಜೊತೆ ಏನೇನೆಲ್ಲಾ ಸ್ಕೆಚ್ ಹಾಕಲು ಹೊರಟಿದ್ದಾರೆಂಬುದೂ ಸೋನಿಯಾಗೆ ಅರ್ಥವಾಗಿದೆ.

ಸೋನಿಯಾ ಶಕ್ತಿಗೆ ಹೋಲಿಸಿದರೆ ಈ ರೆಡ್ಡಿ ಗುಂಪು ಆನೆಯ ಮುಂದೆ ಆಡಿನ ಗಾತ್ರದ್ದು. ಆದರೆ ಸೋನಿಯಾಗೆ ಇರುವ ಆತಂಕ ಎನ್‌ಡಿಎ ಏನಾದರೂ ಮತ್ತೆ ಚಿಗುರಿಕೊಂಡರೆ ಹೇಗಪ್ಪಾ ಎಂಬುದಾಗಿದೆ. ಹಾಗೆ ನೋಡಿದರೆ ರಾಷ್ಟ್ರಮಟ್ಟದಲ್ಲೂ ಬಿಜೆಪಿ ಈಗ ಅರೆ ಸತ್ತ




ಪಕ್ಷದಂತಿವೆ. ಈಗ ಬಿಜೆಪಿಯ ಗುಡಾರ ಪೂರ್ತಿ ಕುಸಿದು ಬೀಳದಂತೆ ಶಕ್ತಿ ಸರಬರಾಜು ಆಗುತ್ತಿರುವುದೇ ರೆಡ್ಡಿಗಳಿಂದ. ಹಾಗಾಗಿ ರೆಡ್ಡಿ ಸಾಮ್ರಾಜ್ಯದ ಮೇಲೆ ದಾಳಿ ಮಾಡಿ ಅದನ್ನು ಮುರಿದಿಡಬೇಕಿರುವುದು ಕಾಂಗ್ರೆಸ್ ಪಾಲಿಗೆ ಅರ್ಜೆಂಟ್ ಕೆಲಸವಾಗಿದೆ.

ಕರುಣಾನಿಧಿ, ಮಮತಾ, ಮಾಯಾವತಿ ಅಥವಾ ಶರದ್ ಪವಾರ್‌ರಿಂದ ತಕ್ಷಣದಲ್ಲಿ ಯಾವುದೇ ಅಪಾಯವಿಲ್ಲವಾದ್ದರಿಂದ ಕಾಂಗ್ರೆಸ್ ಹೈಕಮಾಂಡ್ ಈಗ ತನ್ನ ಪೂರ್ಣ ಗಮನವನ್ನು ಕರ್ನಾಟಕ-ಆಂಧ್ರ ರಾಜಕಾರಣದತ್ತ ಹರಿಸಿದೆ. ರೆಡ್ಡಿ ಸಾಮ್ರಾಜ್ಯದ ವಿರುದ್ಧ ಏರಿ ಹೋಗುವಂತೆ ಕರ್ನಾಟಕದ ಕಾಂಗ್ರೆಸ್ ನಾಯಕರಿಗೆ ಸ್ಪಷ್ಟ ಸಂದೇಶ ಬಂದಿದೆ.

ಈ ಮಹಾನ್ ಸಂಗ್ರಾಮದಲ್ಲಿ ಯಡ್ಡಿ ಪಡ್ಡಿಗಳೆಲ್ಲ ಕೇವಲ ದಾಳಗಳಷ್ಟೆ. ಧನಮದ, ಗೂಂಡಾಗಿರಿಯ ಭಾಷೆ ಬಿಟ್ಟರೆ ಬೇರೇನೂ ಗೊತ್ತಿರದ ರೆಡ್ಡಿಗಳಿಗೆ ಚಿಲ್ಲರೆ ಕಾಸಿಗೆ ಜೊಲ್ಲು ಸುರಿಸುವ ಶಾಸಕರನ್ನಷ್ಟೇ ಖರೀದಿಸಿ ಗೊತ್ತಿದೆ. ರಾಷ್ಟ್ರ ರಾಜಕಾರಣವೆಂಬ ದೊಡ್ಡ ಸಮುದ್ರದಲ್ಲಿ ಅಂತವರೆಲ್ಲ ಕನಿಷ್ಠ ಬಿಲ್ಲೆಗಳು ಮಾತ್ರ. ಕಾಂಗ್ರೆಸ್ ಹೈಕಮಾಂಡಿಗೆ ರೆಡ್ಡಿಗಳ ತರದ ಹುಂಬ ಸಾಹಸಿಗರನ್ನು ಪಳಗಿಸುವ, ಸದೆಬಡಿಯುವ ವಿದ್ಯೆ ಗೊತ್ತಿದೆ. ಕಳ್ಳತನವನ್ನೇ ಕಸುಬಾಗಿಸಿಕೊಂಡಿರುವ ಬಳ್ಳಾರಿಯ ಖದೀಮರಿಗೆ ಕಳ್ಳರ ಸರ್ಕಾರವನ್ನೇ ಸ್ಥಾಪಿಸುವ ಬಯಕೆ ಇದೆ. ಆದರೆ ಕರ್ನಾಟಕದ ಲೆವೆಲ್‌ನಲ್ಲಿ ಅವರ ಯೋಜನೆ ಕೆಲಕಾಲ ನಡೆಯಿತಾದರೂ ರಾಷ್ಟ್ರಮಟ್ಟದಲ್ಲಿ ಅವರಿಗೆ ಒದೆ ಬೀಳುವುದು ಗ್ಯಾರಂಟಿ. ಜುಲೈ 25 ರಂದು ಸಿದ್ದರಾಮಯ್ಯ ನಾಯಕತ್ವದಲ್ಲಿ ಹೊರಡುತ್ತಿರುವ ಕಾಂಗ್ರೆಸ್ಸಿಗರ ಪಾದಯಾತ್ರೆ ರೆಡ್ಡಿಗಳ ಸಾಮ್ರಾಜ್ಯ ಪತನದ ಮುನ್ನುಡಿ ಮಾತ್ರ. ಈ ನೀಚರ ಕೊಬ್ಬು ಕರಗಿಸಲು ಸೋನಿಯಾ ಹತ್ತಿರ ಇನ್ನೂ ಹತ್ತಾರು ಬಾಣಗಳಿರುವಂತಿದೆ.

ಸಿದ್ದರಾಮಯ್ಯಗೆ Break Through!

ರಾಜ್ಯ ಕಾಂಗ್ರೆಸ್‌ನ ಈ ಯುದ್ಧ ಘೋಷಣೆ ಸಿದ್ದರಾಮಯ್ಯನವರ ನಾಯಕತ್ವದಲ್ಲಿ ನಡೆಯುತ್ತಿರುವುದು ಒಂದು ಉತ್ತಮ ಬೆಳವಣಿಗೆಯಾಗಿದೆ. ಹಾಲಿ ಕಾಂಗ್ರೆಸ್ ಲೀಡರ್‌ಗಳ ಪೈಕಿ ಸಿದ್ದರಾಮಯ್ಯ ಒಬ್ಬರೇ ಮಾಸ್ ಲೀಡರ್. ದೇಶಪಾಂಡೆ, ಡಿ.ಕೆ. ಮುಂತಾದವರಿಗೆ ಸಿದ್ದುಗಿರುವಷ್ಟು ವರ್ಚಸ್ಸಾಗಲಿ, ವ್ಯಕ್ತಿತ್ವವಾಗಲಿ ಇಲ್ಲದಿರುವುದು ಈಗ ಸಿದ್ದುಗೆ ಅನುಕೂಲಕರವಾಗಿದೆ. ಇನ್ನು ಮಿಗಿಲಾಗಿ ರೆಡ್ಡಿಗಳ ಭ್ರಷ್ಟಾಚಾರದ ವಿರುದ್ಧ ಮಾತನಾಡಬೇಕೆಂದರೆ ಕಾಂಗ್ರೆಸ್‌ಗೂ ಕಳಂಕರಹಿತ ನಾಯಕರೇ ಬೇಕಲ್ಲ, ಇದೆಲ್ಲಾ ಮೇಳೈಸಿ ಈಗ ಸಿದ್ದರಾಮಯ್ಯ ಮುಂಚೂಣಿಗೆ ಬಂದಿದ್ದಾರೆ. ಇದು ಕಾಂಗ್ರೆಸ್ ಪಾರ್ಟಿ ಸೇರಿದ ನಂತರ ಸಿದ್ದರಾಮಯ್ಯ ಪಾಲಿಗೆ ಒಂದು **break through** ನಂತಿದೆ. ಸಿದ್ದರಾಮಯ್ಯ ತಮ್ಮ ಹೆಗಲ ಮೇಲೆ ಬೀಳಲಿರುವ ಈ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ ರೆಡ್ಡಿಗಳ ಕಾಟದಿಂದ ರಾಜ್ಯ ರಾಜಕಾರಣಕ್ಕೆ ಬಿಡುಗಡೆ ಕೊಡಿಸಿದರೊ, ಬಿಜೆಪಿಯ ದುಷ್ಟ ಸರ್ಕಾರದ ವಿರುದ್ಧ ಜನಾಂದೋಲನ ರೂಪಿಸಲು ಸಾಧ್ಯವಾಗುವುದಾದರೆ ಮುಂದಿನ ದಿನಗಳೆಲ್ಲಾ ಅವರ ಪಾಲಿನ ಶುಭ ದಿನಗಳೇ ಆಗಲಿವೆ.




ಮಂಡ್ಯದ ನಡುರಸ್ತೆಯಲ್ಲಿ ಹೆಣವಾದ ...ವಿನ್ಯೂ ಇನ್ಸ್‌ಪೆಕ್ಟರ್ ಸತೀಶ್ ಹತ್ಯೆಯ ಮರ್ಮ

...ಂಗಳೂರಿನ ರೆವಿನ್ಯೂ ಇನ್ಸ್‌ಪೆಕ್ಟರ್ ಸತೀಶ್ ಮಂಡದಲ್ಲಿ ಹೆಣವಾಗಿದ್ದು ...ಲ್ ಎಸ್ಟೇಟ್ ಕಾರಣಕ್ಕಾ ಅಥವಾ ಪರಸ್ತ್ರೀ ಸಂಗಕ್ಕಾ? ...ಪೊಲೀಸರಷ್ಟೇ ಅಲ್ಲ, ಇಡೀ ಕಂದಾಯ ಇಲಾಖೆಯೇ ...ಡಿಸಿಕೊಂಡರೂ ಸತೀಶ್ ಹತ್ಯೆಯ ಮರ್ಮ ಬಯಲಾಗುತ್ತಿಲ್ಲ.

...ಜುಲೈ 17ರ ರಾತ್ರಿ ಏಳೂವರೆ ಹೊತ್ತಿಗೆ ಮಂಡ್ಯದ ಮೈಸೂರು ...ಮಾಂಡವ್ಯ ಕಾಲೇಜು ಎದುರು ನಿಲ್ಲಿಸಿದ್ದ ಮಾರುತಿ 800 ...ಲ್ಲಿ ಹೆಣವಾಗಿ ಬಿದ್ದಿದ್ದ ಎನ್.ಸತೀಶ್ ನೆಲಮಂಗಲ ರಸ್ತೆಯ ಮಾದಾವರ ...ಲ್ಲಿನಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್. ದಾಸನಪುರದ ಪಂಚಾಯ್ತಿ ಕಚೇರಿಗೆ ...ತ್ನ ಬಂದು ಕಾರ್ಯನಿರ್ವಹಿಸುತ್ತಿದ್ದವನು ತನ್ನ ಎಂ.ಸಿ. ಲೇಔಟ್ ...ಯಿಂದ ಜುಲೈ 16ರ ರಾತ್ರಿ ಒಂದು ಗಂಟೆಗೆ ಮನೆ ಬಿಟ್ಟಿದ್ದೇ...

...ಆ ರಾತ್ರಿ ಆತನನ್ನು ಕೊನೇ ಬಾರಿ ನೋಡಿದ್ದು ಆತನ ಪತ್ನಿ ಸುಗುಣಾ ...!

...ನಂತರ ಆತ ಪತ್ತೆಯಾಗಿದ್ದು ಮಂಡ್ಯದಲ್ಲಿ KA-02-ME 558 ...ರಿನ ಬಿಳೀ ಮಾರುತಿ ಕಾರಿನಲ್ಲಿ ಹೆಣವಾಗಿ. ಆತನ ಎರಡೂ ...ಗಳನ್ನು ವೈರೊಂದರಿಂದ ಕಟ್ಟಿಹಾಕಲಾಗಿತ್ತು. ಕೈಗಳೆರಡನ್ನೂ ಮತ್ತದೇ ...ಂದ ಬಿಗಿದು ಅದೇ ವೈರಿನಿಂದ ಆತನ ಕುತ್ತಿಗೆಗೆ ಸುತ್ತಿ ಕೊಲ್ಲಲಾಗಿತ್ತು. ...ಹಿಂಬದಿಯ ಸೀಟಿನಲ್ಲಿ ಮುದುರಿ ಮಲಗಿದ್ದಂತೆ ಸತೀಶ ಶವವಾಗಿದ್ದ.



ಸತೀಶ್

... ರೆವಿನ್ಯೂ ಇನ್ಸ್ ಪೆಕ್ಟರ್ ಅದೂ ಬೆಂಗಳೂರಿನ ...ಮಂಗಲ ರಸ್ತೆಯ ದಾಸನಪುರದ ಇಂದ್ರ ರಿಯಲ್ ...ಟ್ ಪ್ರಭಾವದ ಏರಿಯಾ ಒಂದರ ಆಯಕಟ್ಟಿನ ...ಯಲ್ಲಿರುವ ಸತೀಶ್ ಕೊಲೆಯಾಗುತ್ತಾನೆಂದರೆ ...ೋ ಅದು ರಿಯಲ್ ಎಸ್ಟೇಟ್ ಸಂಬಂಧಿ ...ಟ್ ಮಾಫಿಯಾದ ಕೈವಾಡವಿರಲೇಬೇಕು ...ಾ ಆಸ್ತಿ ವಿಷಯಕ್ಕೇ ಸತೀಶ್ ಹತ್ಯೆಯಾಗಿರಬೇಕು- ...ಂಥದೊಂದು ಗುಮಾನಿ ಸತೀಶ್ ಹತ್ಯೆಯ ...ಹೊಗೆಯಾಡಿದ್ದು ಕೂಡ ಸಹಜವಾಗೇ ಇತ್ತು. ...ವರೆ ಸತೀಶ್ ಈ ಹಿಂದೆ ಚಿಕ್ಕಜಾಲದಲ್ಲಿ ಆರ್.ಐ. ...ನ್ನಾಗಲೇ ಸರ್ಕಾರಿ ಭೂಮಿ ನುಂಗಿದ ...ಷದಲ್ಲಿ ಯಲಹಂಕ ಶಾಸಕ ವಿಶ್ವನಾಥ್ ರೆಡ್ಡಿಯ ...ಣ್ಣಿಗೆ ಗುರಿಯಾಗಿದ್ದ. ಎಮ್ಮೆಲ್ಲೆ ವಿಶ್ವನಾಥ್ ...ಟ್ಟಾಗಿ ನಿಂತು ಆತನನ್ನು ಎತ್ತಂಗಡಿ ಮಾಡಿಸಿದ್ದರು. ಏಕೆಂದರೆ ಶಾಸಕ ...ನಾಥ್‌ಗೆ ಚಿಕ್ಕಜಾಲದಲ್ಲಿ ಸರ್ಕಾರಿ ಗೋಮಾಳವೊಂದನ್ನು ಆಂಧ್ರದ ...ಎಂಬಾತನ ಜೊತೆ ದೋಚುವುದಕ್ಕೆ ಇದೇ ಸತೀಶ್ ಅಡ್ಡಗಾಲಿಟ್ಟಿದ್ದ. ...ಶಃ ಎತ್ತಂಗಡಿಯಾಗಿ ಬಂದನಂತರವೂ ಅಡ್ಡಗಾಲಿಡುತ್ತಲೇ ಇದ್ದನಾ? ...ದಾಸನಪುರಕ್ಕೆ ಬಂದ ಸತೀಶ್‌ಗೆ ಅನಿವಾರ್ಯವಾಗಿ ಕಡಬಗೆರೆಯ ...ನ್ ರಾಮನ ಜೊತೆ ಸಖ್ಯ ಕುದುರಿತ್ತು. ಸದ್ಯ ಮಾಚೋಹಳ್ಳಿ ...ಯತಿಗೆ ಕಡಬಗೆರೆ ರಾಮನೇ ಅಧ್ಯಕ್ಷ. ಯಾವ ಡೀಲಿಗೆ ಕೈಯಿಟ್ಟನೋ ...ಾ ಬೇರೆ ಯಾರೋ ಬಿಲ್ಡರ್ ಒಬ್ಬನಿಗೆ ದಾಖಲೆ ಮಾಡಿಕೊಡುತ್ತೇನೆಂದು ...ಖಾ ಮಾಡಿದ್ದನಾ ಬಲ್ಲವರ್‍ಯಾರು?

...ರೆವಿನ್ಯೂ ಇನ್ಸ್‌ಪೆಕ್ಟರ್ ಸತೀಶ್‌ಗಿನ್ನೂ 31ರ ಹರೆಯ. ಅದೂ ತಂದೆಯ ...ಮರಣದಿಂದ ಅನುಕಂಪದ ಆಧಾರದ ಮೇಲೆ ಕಂದಾಯ ...ಖೆಯ ನೌಕರಿ ಸಿಕ್ಕಿತ್ತಲ್ಲ; ಸತೀಶ್ ವಿಪರೀತ ಶೋಕಿಗೆ ಬಿದ್ದ. ...ಅತಃ ಕಾಮಾಕ್ಷಿಪಾಳ್ಯದ ಸಣ್ಣಕ್ಕಿ ಬಯಲಿನವನಾದರೂ ಬಸವೇಶ್ವರನಗರದ ...ಯಾ ಆಸ್ಪತ್ರೆ ಹಿಂದೊಂದು ಮನೆ ಕಟ್ಟಿಸಿ ಅಲ್ಲಿ ತನ್ನ ತಾಯಿಯನ್ನು ...ರಿಸಿದ್ದ. ಆದರೆ ಸತೀಶ್ ವಾಸಿಸುತ್ತಿದ್ದದ್ದು ಎಂ.ಸಿ. ಲೇಔಟಿನ 10ನೇ ...ಲ್ಲಿ. ಆತನ ಪತ್ನಿಯ ಹೆಸರು ಸುಗುಣ. ನಿಸರ್ಗ ಎಂಬ ಆರು ...ದ ಮಗಳಿದ್ದಳು. ಪ್ರತಿನಿತ್ಯ ಎಂ.ಸಿ. ಲೇಔಟಿನ ಮನೆಯಿಂದಲೇ ...ಸಪುರಕ್ಕೆ ಹೋಗಿಬರುತ್ತಿದ್ದ ಸತೀಶ್ ಇತ್ತೀಚೆಗಷ್ಟೇ ಇಲಾಖಾ ಪರೀಕ್ಷೆಗೆ ...ದ್ದ. ಒಂದಲ್ಲ ಎರಡು ಕಾರುಗಳನ್ನಿಟ್ಟುಕೊಂಡಿದ್ದ.

...ಜುಲೈ 16ರ ಶುಕ್ರವಾರ ನಡುರಾತ್ರಿ ಒಂದರ ಹೊತ್ತಿಗೆ ಯಾರದೋ ...ನ್ ಬಂತೆಂದು ತಾನೇ ಕಾರನ್ನು ಡ್ರೈವ್ ಮಾಡಿಕೊಂಡು ಮನೆಯಿಂದ ...ಟ ಸತೀಶ್ ಮತ್ತೆ ಪತ್ತೆಯಾದದ್ದು ಮರುದಿನ ರಾತ್ರಿಗೇ. ಅದು ...ಲ್ಲಿ ಹೆಣವಾಗಿ.

...ಸತೀಶ್ ಯಾವತ್ತೂ ಕಾರನ್ನು ಡ್ರೈವ್ ಮಾಡುತ್ತಿರಲಿಲ್ಲ. ...ಕ್ಕಂದೇ ಡ್ರೈವರ್‌ನನ್ನು ನೇಮಿಸಿಕೊಂಡಿದ್ದ. ಅಂಥಾ ...ರಾತ್ರಿಯಲ್ಲಿ ತಾನೇ ಡ್ರೈವ್ ಮಾಡಿಕೊಂಡು ಹೋಗುವಂಥ ...ವ ತುರ್ತಾದ, ಗಂಭೀರವಾದ ಹೆಂಡತಿಗೂ ...ಕೊಳ್ಳಲಾಗದ ಸಂಕಷ್ಟಕ್ಕೆ ಸತೀಶ್ ಸಿಲುಕಿದ್ದ? ಅದೇ ...ಬರ ರಹಸ್ಯವಾಗಿ ಪೊಲೀಸರನ್ನು ಕಾಡುತ್ತಿದೆ. ಈ ರೀತಿ ...ೀಸರಿಗೆ ಹೇಳಿಕೆ ಕೊಟ್ಟಿದ್ದು ಸ್ವತಃ ಸತೀಶನ ಪತ್ನಿ ಸುಗುಣ. ...ಕೂಡ ಬಸವೇಶ್ವರ ನಗರದ ವ್ಯಾಪ್ತಿಯ ದಾಸರಹಳ್ಳಿಯ ಜೈಮುನಿರಾಜ್ ಸರ್ಕಲ್ಲಿನವಳು. ಆರು ವರ್ಷದ ಹಿಂದೆ ಸತೀಶ್ ಆಕೆಯನ್ನು ಪ್ರೇಮಿಸಿ ಮದುವೆಯಾಗಿದ್ದ.

ರಾತ್ರಿ ಒಂದಕ್ಕೆ ಮನೆಯಿಂದ ಏಕಾಂಗಿಯಾಗಿ ಕಾರೆತ್ತಿಕೊಂಡು ಹೋದ ಸತೀಶ್ ತನ್ನ ಹೆಂಡತಿಗಾದರೂ ತಾನೆಲ್ಲಿಗೆ ಹೋಗುತ್ತಿದ್ದೇನೆಂದು ಹೇಳಲೇಬೇಕಿತ್ತು. ಏಕೆ ಹೇಳದೇ ಹೋದ ಎಂಬ ಒಂದೇ ಪ್ರಶ್ನೆಯಿಂದ ತನಿಖೆ ಆರಂಭಿಸಿದ್ದಾರೆ ಮಂಡ್ಯದ ಡಿವೈಎಸ್‌ಪಿ ಹನುಮಂತಪ್ಪ. ಈ ಹಿಂದೆ ಬೆಂಗಳೂರಿನ ಬ್ಯಾಟರಾಯನಪುರ, ಮಾಗಡಿ ರಸ್ತೆ, ಮಹಾಲಕ್ಷ್ಮಿ ಲೇಔಟ್ ಇತ್ಯಾದಿ ಪೊಲೀಸ್ ಠಾಣೆಗಳಲ್ಲಿ ಇನ್ಸ್ ಪೆಕ್ಟರ್ ಆಗಿದ್ದ ಹನುಮಂತಪ್ಪನವರಿಗೆ ಸತೀಶ್ ಹತ್ಯೆಯ ಮರ್ಮ ಬೇಧಿಸುವುದು ಹೆಚ್ಚು ಕಷ್ಟವಾಗಲಿಲ್ಲ.

ರಾತ್ರಿ ಒಂದಕ್ಕೆ ಹೊರಟ ಗಂಡ ತನಗೆ ಹೇಳದೆ ಹೋದ ಎಂಬ ಸುಗುಣಾಳ ಹೇಳಿಕೆಯೇ ಹಲವಾರು ಪ್ರಶ್ನೆಗಳನ್ನು ಸೃಷ್ಟಿಸಿತ್ತು. ಆಕೆಯ ಮೊಬೈಲ್ ಫೋನಿನ ಡಿಟೇಲ್ಸ್ ತರಿಸಿಕೊಂಡರೆ ಅದೇ ಅನೇಕ ರಹಸ್ಯಗಳನ್ನು ಬಿಡಿಸಿಟ್ಟಿತ್ತು. ಆಕೆಗೊಬ್ಬ ಅಣ್ಣನಿದ್ದ. ಆತನ ಹೆಸರು ರಾಜಣ್ಣ. ಇದೇ ದಾಸರಹಳ್ಳಿಯ ವಾಸಿ. ಸುಗುಣಾಳ ಮೊಬೈಲಿನಿಂದ ರಾಜಣ್ಣನ ಮೊಬೈಲಿಗಷ್ಟೇ ಅಲ್ಲ, ಕೊಳ್ಳೇಗಾಲದ ಆತನ ಸ್ನೇಹಿತರಿಗೂ, ಇನ್ನಾರೋ ಓರ್ವ ಪೊಲೀಸ್ ಪೇದೆಗೂ ಆವತ್ತು ರಾತ್ರಿ ಫೋನ್ ಕರೆಗಳು ಹೋಗಿದ್ದವು.

ಇದನ್ನೇ ಕೆದಕುತ್ತಾ ಹೋದಂತೆಲ್ಲ ಸತೀಶ್ ಹತ್ಯೆಯ ಒಂದೊಂದೇ ಬೇರುಗಳು ಗೋಚರಿಸತೊಡಗಿದವು. ಜುಲೈ 16ರ ಶುಕ್ರವಾರ ರಾತ್ರಿ ಜಯನಗರದ ಪಾಲಿಕೆ ರೆವಿನ್ಯೂ ಇನ್ಸ್‌ಪೆಕ್ಟರ್ ರಮೇಶ್ ಎಂಬಾತನ ಜೊತೆ ಕೂತು ಸತೀಶ್ ತನ್ನ ಮನೆಯಲ್ಲೇ ಗುಂಡು ಹಾಕಿದ್ದ. ಅದೇ ಹೊತ್ತಿಗೆ ನೆಲಮಂಗಲದ ಬೇಗೂರು ಸರ್ಕಲ್ಲಿನ ರೆವಿನ್ಯೂ ಇನ್ಸ್‌ಪೆಕ್ಟರ್ ರವಿಕುಮಾರ್ ಕೂಡ ಸತೀಶನ ಮನೆಗೆ ಬಂದಿದ್ದ. ರಾತ್ರಿ 11ರ ಹೊತ್ತಿಗೆ ತನ್ನ ಗೆಳೆಯರಿಬ್ಬರನ್ನೂ ಬೀಳ್ಕೊಟ್ಟ ಸತೀಶ್‌ಗೆ ಇನ್ನು ಕೆಲ ಹೊತ್ತಿನಲ್ಲೇ ತನ್ನ ಪ್ರಾಣಕ್ಕೆ ಕುತ್ತಾಗಲಿದೆ ಎಂಬುದು ಎಲ್ಲಿ ಗೊತ್ತಿತ್ತು?

ಸತೀಶ್ ಶೋಕಿಲಾಲ. ರೆವಿನ್ಯೂ ಇನ್ಸ್‌ಪೆಕ್ಟರ್ ಓರ್ವನಿಗೆ ಸಹಜವಾಗೇ ರಿಯಲ್ ಎಸ್ಟೇಟ್ ಲಿಂಕುಗಳೂ, ತನ್ಮೂಲಕ ಅಂಡರ್‌ವರ್ಲ್ಡ್ ನಂಟೂ ಕೂಡಿ ಬರುವಂತೆ ಶೋಕಿಯೂ ಮೈಗಂಟಿತ್ತು. ದಾಸನಪುರಕ್ಕೆ ಬಂದಿದ್ದೇ ಅದು ಅತಿರೇಕಕ್ಕೆ ಹೋಗಿದೆ. ಪೀಣ್ಯ ದಾಸರಹಳ್ಳಿಗೆ ಹೊಂದಿಕೊಂಡಂತೆ ಇರುವ ಬಗಲಗುಂಟೆ ಏರಿಯಾದ ಯಾವುದೋ ಹೆಂಗಸೊಬ್ಬಳು ಸತೀಶನಿಗೆ ಗಂಟು ಬಿದ್ದಿದ್ದಳು. ಇದಕ್ಕೂ ಮುನ್ನ ಯಾರ್‍ಯಾರೋ ಹೆಂಗಸರ ಜೊತೆ ಹೊತ್ತುಗೊತ್ತಿಲ್ಲದೇ ಸತೀಶ್ ಅಂಡಲೆಯುತ್ತಿದ್ದ ಮಾಹಿತಿ ಪತ್ನಿ ಸುಗುಣಳಿಗೆ ಸಿಕ್ಕಿತ್ತು. ಯಾವತ್ತು ಬಗಲಗುಂಟೆಯಲ್ಲಿ ಹೆಂಗಸೊಬ್ಬಳಿಗೆ ಮನೆ ಮಾಡಿ ಕೊಟ್ಟನೋ ಆತನ ವರ್ತನೆಗಳೇ ಬದಲಾದವು.

ಮನೆಗೆ ಬರುವುದೇ ಅಪರೂಪವಾಯ್ತು. ಬಂದರೂ ವಿಪರೀತ ಕುಡಿಯುತ್ತಿದ್ದ. ಸುಮ್ಮನೇ ಕುಡಿದು ಮಲಗಿದರೆ ಆ ಮಾತು ಬೇರೆ. ಸುಗುಣಳನ್ನು ವಿಪರೀತ ಹಿಂಸಿಸುತ್ತಿದ್ದ. ಬರುಬರುತ್ತ ಇದು ಅತಿರೇಕಕ್ಕೆ ಹೋಗಿದೆ. ಹಿಂಸೆ ತಾಳದೇ ತನ್ನ ಅಣ್ಣಂದಿರತ್ರ ದುಃಖ ತೋಡಿಕೊಂಡಿದ್ದಾಳೆ. ಒಂದು ಹಂತದಲ್ಲಿ ಸತೀಶ್ ತನಗೆ ಡೈವೋರ್ಸ್ ಕೊಡುವಂತೆ ಸುಗುಣಳನ್ನು ಪೀಡಿಸಲಾರಂಭಿಸಿದ್ದಾನೆ. ತನಗೆ ಡೈವೋರ್ಸ್ ಕೊಟ್ಟು ಇನ್ನಾರನ್ನೋ ಸತೀಶ್ ಮದುವೆಯಾಗಲು ಯತ್ನಿಸುತ್ತಿದ್ದುದರ ಮಾಹಿತಿಯೂ ಸಿಕ್ಕಿದೆ. ಇದೆಲ್ಲವನ್ನೂ ತನಗೆ ಪರಿಚಿತನಾದ ಪೊಲೀಸ್ ಪೇದೆಯೊಬ್ಬನ ಬಳಿ ಹೇಳಿಕೊಂಡು ಸುಗುಣ ಕಣ್ಣೀರಿಟ್ಟಿದ್ದಾಳೆ. ಮೂಲತಃ ಕೊಳ್ಳೇಗಾಲದವನಾದ ಆ ಪೊಲೀಸ್ ಪೇದೆ ಸುಗುಣಳನ ಅಣ್ಣನಿಗೆ ಅತ್ಯಂತ ಆತ್ಮೀಯ.

ಹಾಗೇನಾದರೂ ಸತೀಶ್ ಸುಗುಣಳಿಗೆ ಡೈವೋರ್ಸ್ ಕೊಟ್ಟು ಬೇರೆ ಯಾರನ್ನೋ ಮದುವೆಯಾದನೆಂದರೆ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿ ಆತ ದುಡಿದಿದ್ದ ಕೋಟಿಗಟ್ಟಲೇ ಆಸ್ತಿ ಯಾರ್‍ಯಾರದೋ ಪಾಲಾಗುತ್ತದೆ. ಆಸ್ತಿ ಉಳಿಯುವುದಾದರೆ ಅದು ತನಗೇ ಉಳಿಯಲಿ ಎಂದು ಲೆಕ್ಕಹಾಕಿದ್ದಾಳೆ ಸುಗುಣ. ಏಕೆಂದರೆ ಸತೀಶನ ಬೇನಾಮಿ ಆಸ್ತಿಯ ಬಗ್ಗೆ ಸಮಗ್ರ ಮಾಹಿತಿಯಿದ್ದದ್ದು ಆಕೆಯೊಬ್ಬಳಿಗೇ. ಆಕೆಗೆ ಪರಿಚಿತ ಪೊಲೀಸ್ ಪೇದೆಯೇ ಐಡಿಯಾ ಕೊಟ್ಟನೋ ಅಥವಾ ಅಣ್ಣಂದಿರೇ ತಲೆ ಓಡಿಸಿದರೋ ಗೊತ್ತಿಲ್ಲ, ಜುಲೈ 17ರ ರಾತ್ರಿಗೇ ಮುಹೂರ್ತ ನಿಗದಿಯಾಗಿದೆ. ಕುಡಿತು ಚಿತ್ತಾಗಿದ್ದ ಸತೀಶ್ ಮಾಮೂಲಿನಂತೆ ನಡುರಾತ್ರಿ ಹೊತ್ತಿಗೆ ಸುಗುಣಳನ್ನು ಹಿಡಿದು ಬಡಿಯಲಾರಂಭಿಸಿದ್ದಾನೆ. ಮೊದಲೇ ನಿಗದಿಯಾಗಿತ್ತಲ್ಲ; ಸುಗುಣಳ ಹಂತಕ ಪಡೆ ಸತೀಶನ ಕೈಕಾಲು ಕಟ್ಟಿದ್ದೇ ಮುಗಿಸಿಹಾಕಿದೆ.




ಡಿವೈಎಸ್ಪಿ ಹನುಮಂತಪ್ಪ

ಸದ್ಯ ಸುಗುಣ ಮತ್ತು ಆಕೆಯ ಹಂತಕ ಪಡೆ ಮಂಡ್ಯದ ಡಿವೈಎಸ್‌ಪಿ ಹನುಮಂತಪ್ಪನವರ ಲಾಕಪ್ಪಿನಲ್ಲಿ ಕಂಬಿ ಎಣಿಸುತ್ತಿದ್ದಾರೆ. ಬೇಕಾಬಿಟ್ಟಿ ಹುಟ್ಟುವ ಲಂಚ, ಸಿಕ್ಕಾಪಟ್ಟೆ ಕುಡಿತ, ಲಂಪಟ ಶೋಕಿ ಮತ್ತು ದೌಲತ್ತಿನ ವಿಕೃತಿ ಹೇಗೆ ಬೆಂಗಳೂರು ಪಾಸಲೆಯ ರೆವಿನ್ಯೂ ಇನ್ಸ್‌ಪೆಕ್ಟರ್ ಓರ್ವನನ್ನು ಸರ್ವನಾಶಕ್ಕೆ ಕೊಂಡೊಯ್ಯುತ್ತದೆಯಲ್ಲವೆ?

...ಹೆಣವಿದ್ದ ...ಕಾರಲ್ಲಿ ...ಕಾಂಡೋಮ್ಸ್?

ಮಂಡ್ಯದ ಮೈಸೂರು ರಸ್ತೆಯ ಮಾಂಡವ್ಯ ಕಾಲೇಜಿನ ಎದುರು ಅನಾಥವಾಗಿ ನಿಂತಿದ್ದ ಮಾರುತಿ ಕಾರಲ್ಲಿ ಸಿಕ್ಕಿದ್ದು ಕೇವಲ ಸತೀಶನ ಹೆಣವಷ್ಟೇ ಅಲ್ಲ; ಒಂದು ಡಜನ್ ಕಾಂಡೋಮಿನ ಪ್ಯಾಕೆಟ್ಟು ಕೂಡ ಇತ್ತು. ಇದರರ್ಥ ಸತೀಶ್ ಯಾವತ್ತೂ ಕಾರಲ್ಲಿ ಕಾಂಡೋಮುಗಳನ್ನು ಇಟ್ಟಿರುತ್ತಿದ್ದ. ಅದು ಆತನ ಹೆಣ್ಣುಬಾಕತನ ಮತ್ತು ವಿಕೃತಿಗೆ ಮೂಕ ಸಾಕ್ಷಿಯಂತಿತ್ತು. ಸತೀಶ ಬಗಲಗುಂಟೆಯಲ್ಲಿ ಮನೆ ಮಾಡಿ ಇಟ್ಟಿದ್ದ ಹೆಂಗಸಷ್ಟೇ ಅಲ್ಲದೇ ಯಶವಂತಪುರದ ಕಲಾವತಿ ಎಂಬಾಕೆಯ ಮನೆಗೂ ಆಗಾಗ ಹೋಗಿಬರುತ್ತಿದ್ದ. ಹೆಗ್ಗನಹಳ್ಳಿಯಲ್ಲೂ ಯಾರೋ ಆಂಟಿಯೊಬ್ಬಳ ಮನೆಯಲ್ಲಿ ಅಡ್ಡೆ ಹಾಕುತ್ತಿದ್ದ. ಇಷ್ಟಲ್ಲದೇ ಯಾರ್‍ಯಾರೋ ಯುವತಿಯರಿಂದ ಹೊತ್ತಲ್ಲದ ಹೊತ್ತಲ್ಲಿ ಆತನಿಗೆ ಫೋನ್‌ಗಳು ಬರುತ್ತಿದ್ದವು. ಈ ಬಗ್ಗೆ ಪತ್ನಿ ಸುಗುಣ ಪ್ರಶ್ನಿಸಿದರ ಕುಡಿದು ಬಂದು ಹೀನಾಮಾನ ಹೊಡೆಯುತ್ತಿದ್ದ. ಸಾವು ತನ್ನ ಹರೆಯದಲ್ಲೇ, ಹೆಣ್ಣಿನ ರೂಪದಲ್ಲಿ ವಕ್ಕರಿಸಲಿದೆಯೆಂಬುದನ್ನು ಮಾತ್ರ ಅರಿಯದೇ ಹೋದ ಸತೀಶ್ ತನ್ನ ಕೈಯಾರೇ ದುರಂತವನ್ನು ಬರಮಾಡಿಕೊಂಡಿದ್ದ.

ಆತನ ಕಾರಿನಲ್ಲಿದ್ದ ಕಾಂಡೋಮು ಈ ಎಲ್ಲದರ ಸಂಕೇತವಷ್ಟೇ.



ದೇಶಕಾಲಕ್ಕೂ ಬಳಪಕ್ಕೂ ಏನು ಸಂಬಂಧ!

ಎಡಿಯೂರಪ್ಪನ ಮಾತಿನ ವೈಖರಿಯನ್ನು ಗಮನಿಸಿದ ಶಿಕಾರಿಪುರದ ಶಾಂತವೀರಪ್ಪ "ಈತನಿಗೆ ಸತ್ತ ಮೈತ್ರಾದೇವಿಯ ಭೂತ ಬಡಿದುಕೊಂಡಿರುವುದು ಗ್ಯಾರಂಟಿ. ಏಕೆಂದರೆ ಈತನ ಮಾತಿನಲ್ಲಿ ಸುಳ್ಳಿಗೂ ಸತ್ಯಕ್ಕೂ ಅಂತಹ ವ್ಯತ್ಯಾಸವೇ ಇಲ್ಲ, ನಗುವಿನಲ್ಲಿ ಸಹಜತೆಯಿಲ್ಲ, ನಡವಳಿಕೆಯಲ್ಲಿ ನಿಖರತೆಯಿಲ್ಲ. ಒಟ್ಟಿನಲ್ಲಿ ಆ ಎಡಿಯೂರಪ್ಪನೇ ಬೇರೆ, ಈ ಎಡಿಯೂರಪ್ಪನೇ ಬೇರೆ. ಆದ್ದರಿಂದಲೇ ನಾನು ಬಿಜೆಪಿ ಬಿಟ್ಟು ತೆರಳುತ್ತಿರುವ ಬಂಗಾರಿ ಕಾಂಗ್ರೆಸ್ ಸೇರಿಕೊಂಡೆ" ಎಂದು ಗಿರ್ಲುಮೀಸೆ ಮೇಲೆ ಕೈಹಾಕಿ ತಿರುವುದರಂತಲ್ಲಾ, ಆಗ ಕಾಂಗ್ರೆಸ್ಸಿನ ಉಗ್ರವಾದಿ ಉಗ್ರಪ್ಪ "ಬೇಲೆಕೇರಿ ಬಂದರಿನ ಅದಿರು ಕಳ್ಳತನ ಎಡೂರಪ್ಪನ ಸಂಬಂಧಿಗಳ ಉಸ್ತುವಾರಿಯಲ್ಲೇ ನಡೆದಿದೆ" ಎಂಬ ಕೈಬಾಂಬನ್ನ ಎಸೆದರಲ್ಲಾ, ಈ ಬಗ್ಗೆ ಪತ್ರಿಕೆಗಳು ಎಡೂರಪ್ಪನನ್ನೇ ಕೇಳಿದರೆ "ನಾನು ಇನ್ನು ಮುಂದೆ ಗಣಿ ವಿಷಯವನ್ನು ಮನಸ್ಸಿನಲ್ಲೂ ಗುಣಿಸುವುದಿಲ್ಲ" ಎಂದರಂತಲ್ಲಾ, ಥೂತ್ತೇರಿ!

* * * * * * *

ಎಡೂರಪ್ಪನ ಆಡಳಿತ ಆಂಕೆಯಿಲ್ಲದ ನೌಕೆಯಂತೆ ದಿಕ್ಕುದೆಸೆಯಿಲ್ಲದೆ ಹೋಗುತ್ತಿರುವಾಗ ಅದರಿಂದ ಹೊರಜಿಗಿದ ಹರತಾಳು ಮಿಲ್ಕಪ್ಪ ಜಾಮೀನು ಸಿಕ್ಕಕೂಡಲೇ ಹಾಸಿಗೆಯಿಂದ ಜಿಗಿದವನು ಮತ್ತೆ ಕಾಣಿಸಿಕೊಂಡಿದ್ದು ಕೊಲ್ಲೂರು ಮೂಕಾಂಬಿಕೆ ಸನ್ನಿಧಿಯಲ್ಲಂತಲ್ಲಾ. "ಹೆಣ್ಣು ದೇವತೆಯ ಬಲವೊಂದಿದ್ದರೆ ಸಾಕು, ಅತ್ಯಾಚಾರಗಳೂ ಕೂಡ ಅಕ್ಕರೆಯ ಆಲಿಂಗನವಾಗುತ್ತವೆ" ಎಂದು ಮನೆಮುರುಕ ಜ್ಯೋತಿಷಿಗಳು ಹೇಳಿದ ಫಲವಾಗಿ, ಮಿಲ್ಕಪ್ಪ ಹೆಣ್ಣುದೇವರಿಗೆಲ್ಲಾ ಹರಕೆ ಹೊತ್ತು ತಿರುಗುತ್ತಿದ್ದಾನಂತಲ್ಲಾ, ಅತ್ತ ಜನಾರ್ದನ ರೆಡ್ಡಿ ಎಂಬ ಹುಟ್ಟು ಖದೀಮ "ಹರಕೆ ಹೊರುವುದಷ್ಟೇ ಅಲ್ಲ ಹಾಲಪ್ಪ, ಕೂಡಲೇ ಹರಕೆ ತೀರಿಸಬೇಕು. ನಾನು ನೋಡು, ತಿರುಪತಿ ತಿಮ್ಮಪ್ಪನಿಗೆ ನಲವತ್ತೈದು ಕೋಟಿ ರೂಪಾಯಿಗಳ ಕಿರೀಟ ಮಾಡಿಸಿ ಆತನ ತಲೆಯ ಮೇಲಿಟ್ಟೆ. ಅಂದಿನಿಂದ ಇಂದಿನವರೆಗೂ ತಿಮ್ಮಪ್ಪ ಹೇಗೆ ನನ್ನ ತಲೆಕಾಯುತ್ತಿದ್ದಾನೆಂದರೆ, ಕರ್ನಾಟಕದ ಮುಖ್ಯಮಂತ್ರಿ, ರಾಜ್ಯಪಾಲ, ಲೋಕಾಯುಕ್ತ ಕೇಂದ್ರ ಸರ್ಕಾರ ಕೂಡಾ ನನ್ನನ್ನು ಏನೂ ಮಾಡಲಾಗುತ್ತಿಲ್ಲ" ಎಂಬ ಧೈರ್ಯದ ಸಂದೇಶವನ್ನ ರವಾನಿಸಿದನಂತಲ್ಲಾ, "ಅಯ್ಯೋ, ನನಗೆ ನಲವತ್ತೈದು ಕೋಟಿ ಬೇಡ. ಯಯಾತಿಯಂತಹ ಬಂಗಾರಿಯ ಸಹವಾಸಕ್ಕೆ ಹೋದರೆ ಸಾಕು, ನಾನು ಎಲ್ಲಾ ರಗಳೆಯಿಂದ ಬಿಡುಗಡೆಯಾದಂತೆಯೇ ಸರಿ" ಎಂದು ಮಿಲ್ಕಪ್ಪ ಗೋಳಾಡಿದನಂತಲ್ಲಾ, ಥೂತ್ತೇರಿ!!

* * * * * * *

ಥೂತ್ತೇರಿ


ಇತ್ತ ಸಾಹಿತ್ಯ ಲೋಕದ ಚರ್ಚೆಗಳು ಶ್ಯಾನೆ ಸ್ವಾರಸ್ಯಕರವಾಗಿ ನಡೆಯುತ್ತಿದ್ದು ಒಂದಿಷ್ಟು ಮನೋರಂಜನೆಯನ್ನು ಒದಗಿಸಿದೆಯಂತಲ್ಲಾ, ಯಾವುದೋ ದೇಶಕಾಲ ಎಂಬ ಪುಸ್ತಕ ಕಂ ನಿಯತಕಾಲಿಕ ಪ್ರಕಟವಾಗುತ್ತ, ಅದು ನಿಂತಿರಲಿ ಅಥವಾ ಬರುತ್ತಿರಲಿ, ಆ ಬಗ್ಗೆ ಕರ್ನಾಟಕ ಜನಸ್ತೋಮ ಕಿಂಚಿತ್ತೂ ತಲೆಕೆಡಿಸಿಕೊಳ್ಳದೆ, ಕೈತುಂಬ ಕಾಸು ತೆಗೆದುಕೊಂಡು ಕಮಲಕ್ಕೆ ಓಟು ಮಾಡಿ ಮಲದಲ್ಲಿ ಬಿದ್ದು ಒದ್ದಾಡುತ್ತಿರಬೇಕಾದರೆ, ಐಜೂರು-ಲತಾ ಎಂಬ ಲೇಖಕದ್ವಯರು "ಈ ದೇಶಕಾಲ ನಮ್ಮನ್ನು ಹೊರಗಿಟ್ಟು ಅದ್ಹೇಗೆ ಹೊರಬರುತ್ತದೋ ನಾವು ನೋಡುತ್ತೇವೆ" ಎಂದು ಪೆನ್ನನ್ನ ಚಾಕುವಿನಂತೆ ಝಳಪಿಸುತ್ತಿದ್ದಾರಂತಲ್ಲಾ, ಅವರ ಕೈಲಿದ್ದ ಪೆನ್ನ ಥೇಟ್ ಹೊಳೆಯುವ ಚಾಕುವಿನಂತೆ ಕಂಡಿದ್ದರಿಂದ ಫಣಿರಾಜ್ ಚೀರಿಕೊಂಡಿದ್ದಲ್ಲದೆ, ಯಾರೇ ಚೀರಿಕೊಂಡರೂ ಅವರ ಆಮೂಲಾಗ್ರ ಕಾರಣವನ್ನು ಪತ್ತೆಹಚ್ಚಿ ಒಂದು ಪೋಸ್ಟ್‌ಮಾರ್ಟಂ ನಡೆಸಿ ನ್ಯಾಯ ಕೇಳುವ ಜಿ.ರಾಜಶೇಖರ, ಸದರೀ ಮಂಜುನಾಥ್-ಲತಾರಿಗೆ "ಇದೆಲ್ಲ ಸರಿಯಲ್ಲ, ನಾನೀಗಾಗಲೇ ಹಿಂದೂ ಫ್ಯಾಸಿಸ್ಟರ ವಿರುದ್ಧ ಹೋರಾಡಿ ಸುಸ್ತಾಗಿದ್ದೇನೆ. ಆದ್ದರಿಂದ ನೀವು ಪೆನ್ನನ್ನು ಪೆನ್ನಿನಂತೆಯೇ ಬಳಸಿದರೆ ಸರಿ. ಇಲ್ಲವಾದರೆ ವಯಸ್ಕರ ಶಿಕ್ಷಣಕ್ಕೆ ಸೇರಿಸಿ ಬಳಪ ಕೊಡಬೇಕಾಗುತ್ತದೆ" ಎಂದರಂತಲ್ಲಾ, ಥೂತ್ತೇರಿ!!

* * * * * * *

ವಿವೇಕ ಶ್ಯಾನುಭೋಗ್ ಮತ್ತು ಜಯಂತ ಕಾಯ್ಕಿಣಿ ಒಂದು ರೀತಿ ಭಾವ ಭಾವಮೈದುನ ಇದ್ದಂತೆ. ಅವರ ಚಟುವಟಿಕೆ ಬೇರಿನ ಮೂಲ ಇರುವುದು ಹೆಗ್ಗೋಡಿನಲ್ಲಿ. ಆದ್ದರಿಂದ ಅವರು ತರಬಹುದಾದ ನಿಯತಕಾಲಿಕೆ 'ಸಾಕ್ಷಿ' 'ರುಜುವಾತ'ನ್ನು ಸೇರಿಸಿ ವಿಶೇಷ ಸಂಚಿಕೆ ತಂದಂತಿರುತ್ತವೆ. ಆ ಶ್ರಮದ ಮೂಲದಲ್ಲಿ ಪೂರ್ವಗ್ರಹಗಳು ಇಲ್ಲದಿದ್ದರೂ ಸಾದ ಲಿಂಗವಂತರನ್ನು ಮೀಸಲಾತಿಗೆ ಸೇರಿಸಿಬಿಡುವ ಯಡ್ಡಿಯ ದಡ್ಡತನದಂತಹ ಕ್ರಿಯೆಗಳು ಅತ್ಯಂತ ಸಹಜವಾಗಿ ಜರುಗಬಹುದು. ಅದಕ್ಕೇ ಉಗ್ರರೂಪ ತಾಳಿ ಅಮಾಯಕ ಶ್ಯಾನುಭೋಗರು ಮತ್ತು ಅಬ್ಕಾರಿ ಕಾಯ್ಕಿಣಿಯನ್ನು ರೆಡ್ಡಿಗಳು ಕಾಂಗ್ರೆಸ್ಸಿಗರನ್ನ ಬೈದಂತೆ ಬೈದುಬಿಡುವುದೇ?

ಥೂತ್ತೇರಿ!!!

ರೌಡಿ ಶ್ರೀರಾಮುಲು ಜೈಲು ಪಾಲಿಟಿಕ್ಸ್



ಆ ಇಂಟರ್‌ನ್ಯಾಷನಲ್ ಅದಿರು ವಂಚಕ ಯಾರು?

ಶ್ರೀರಾಮುಲು ಜೈಲು ರಾಜಕೀಯಕ್ಕೂ ಬಳ್ಳಾರಿ ಗಣಿಲೂಟಿಯ ವಿರುದ್ಧ ಕಾಂಗ್ರೆಸ್ ಪಾದಯಾತ್ರೆಗೂ ಏನಾದರೂ ಸಂಬಂಧವುಂಟೆ? ಅಥವಾ ಮುಂಬರುವ ಚುನಾವಣೆಯಲ್ಲಿ ತಮ್ಮ ಪರ ಪಾತಕಿಗಳದ್ದೇ ಸಿಂಡಿಕೇಟ್ ಒಂದನ್ನು ಕಟ್ಟುವುದು ಆತನ ಹುನ್ನಾರವೆ?

ಗುಮಾನಿಗಳು ಒಂದಾ ಎರಡಾ? ಒಂದು ಮೂಲದ ಪ್ರಕಾರ ಗಣಿ ಲೂಟಿ ಕೇಸನ್ನು ಸಿಬಿಐ ಕೈಗೆತ್ತಿಕೊಂಡಿದ್ದೇ ಆದರೆ ಶ್ರೀರಾಮುಲು ಜೊತೆ ಬಳ್ಳಾರಿಯ ರೆಡ್ಡಿ ಗ್ಯಾಂಗ್ ಪೂರ್ತಿ ಜೈಲು ಸೇರುವುದು ಗ್ಯಾರಂಟಿ. ಆಗ ಜೈಲಲ್ಲಿ ತಮ್ಮ ಪರ ರೌಡಿಗಳಿರಲಿ ಎಂಬ ದುರಾಲೋಚನೆಯಲ್ಲೇ ಈಗ ಪಾತಕಿಗಳನ್ನು ಓಲೈಸುವುದು ಶ್ರೀರಾಮುಲು ತಂತ್ರವಂತೆ!

ಕಾಂಗ್ರೆಸ್‌ನ ಬಳ್ಳಾರಿ ಯಾತ್ರೆ ನೆಲಮಂಗಲದಿಂದ ಶುರುವಾಗುತ್ತದೆಯಾದ್ದರಿಂದ ಪ್ರಾರಂಭದಲ್ಲೇ ಬೆತ್ತನಗೆರೆ ಹಂತಕರನ್ನು ಛೂಬಿಟ್ಟು ಕಿರಿಕ್ ಮಾಡಿಸಿ ಕಾಂಗ್ರೆಸ್ಸಿಗೆ ಮುಖಭಂಗ ಮಾಡುವ ಹುನ್ನಾರವೂ ಇದೆಯಂತೆ.

ಇದಲ್ಲದೇ ಮತ್ತೂ ಒಂದು ನಿಗೂಢ ಉದ್ದೇಶ ಶ್ರೀರಾಮುಲುಗಿತ್ತಂತೆ. ಅದು ಕುಖ್ಯಾತ ಅದಿರು ವಂಚಕನೊಬ್ಬನಿಗೆ ಜೈಲಿನಲ್ಲಿ ಐಷಾರಾಮಿ ಸೌಲಭ್ಯ ಕಲ್ಪಿಸುವಂತೆ ಜೈಲಧಿಕಾರಿಗಳನ್ನು ಆಮಿಷಕ್ಕೊಡ್ಡುವುದು. ಚೈನಾ ಮತ್ತು ಇಂಡೋನೇಷಿಯಾದ ಕೆಲ ಮೈನಿಂಗ್ ಕಂಪೆನಿಗಳಿಗೆ ಕಳಪೆ ಅದಿರು ಸಾಗಿಸಿ ಯಾಮಾರಿಸಿದ ಮುಂಬಯಿ ಮೂಲದ ವಂಚಕನೊಬ್ಬ ಸದ್ಯ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾನಂತೆ. ಈತನಿಗೂ ಶ್ರೀ ರಾಮುಲುಗೂ ಯಾವ ರೀತಿಯ ನಂಟೋ ಗೊತ್ತಿಲ್ಲ, ಹೀಗೆ ವಿದೇಶಿ ಮೈನಿಂಗ್ ಏಜೆನ್ಸಿಗಳಿಗೆ ಸಾವಿರ ಕೋಟಿಗೂ ದೊಡ್ಡ ಮೊತ್ತದ ಟೋಪಿ ಹಾಕಿದ ಇದೇ ವಂಚಕನನ್ನು ಮುಂದಿಟ್ಟುಕೊಂಡು ಜನಾರ್ದನ ರೆಡ್ಡಿ ಮುಂಡಾಯಿಸಿರಲಿಕ್ಕೂ ಸಾಕು. ಸಾಲದ್ದಕ್ಕೆ ಸರ್ಕಾರಕ್ಕೂ ಈತ ನೂರಾರು ಕೋಟಿಯ ನಾಮ ಹಾಕಿದ್ದಾನಂತೆ. ಇಂಥವನಿಗೆ ಜೈಲಲ್ಲಿ ರಾಜಾತಿಥ್ಯ ಕಲ್ಪಿಸಬೇಕಲ್ಲ; ಅದಕ್ಕೆಂದು ಪರಪ್ಪನ ಅಗ್ರಹಾರ ಜೈಲಿನ ಮೂರು ಕೋಣೆಗಳನ್ನು ಒಡೆದು ಹಾಕಿಸಿ ಒಂದೇ ಕೋಣೆ ಮಾಡಿ ಅದಕ್ಕೆ ಐಷಾರಾಮಿ ಗ್ರಾನೈಟುಗಳನ್ನು ಹಾಕಿಸಿ, ಟೀವಿ, ಫ್ರಿಜ್ಜು ಎಲ್ಲಾ ಕಲ್ಪಿಸಿ ಕೊಟ್ಟು ನೆರವಾಗುವುದು ಶ್ರೀರಾಮುಲು ಉದ್ದೇಶವಂತೆ!


ಜೈಲಿಗೆ ಬಂದ ಶ್ರೀರಾಮುಲು ತನಗೆ ಬೇಕಾದ ಉನ್ನತ ಜೈಲಧಿಕಾರಿಯೊಬ್ಬನಿಗೆ ಹತ್ತು ಲಕ್ಷ ರೂಪಾಯಿಯ ಲಂಚ ಕೊಟ್ಟು ಮುಂಬಯಿ ಮೂಲದ ಅದಿರು ವಂಚಕನಿಗೆ ನೆರವಾಗಿದ್ದಾರೆಂಬುದು ಒಂದು ಸುದ್ದಿ. ಸದರಿ ವಂಚಕ ಎಲ್ಲಿ ತಮ್ಮ ಪಾತ್ರವನ್ನು ಬಾಯಿಬಿಟ್ಟಾನೋ ಎಂದು ಭೀತಿಗೆ ಬಿದ್ದ ಜನಾರ್ದನ ರೆಡ್ಡಿಯೇ ಶ್ರೀರಾಮುಲುನ ಕಳಿಸಿ ಈ ಮೂಲಕ ತೇಪೆ ಹಾಕಿಸಿದ್ದಾನೆಂಬುದು ಮತ್ತೊಂದು ಸುದ್ದಿ.

ಆ ಇಂಟರ್ ನ್ಯಾಷನಲ್ ಚೀಟರ್ ಯಾರು? ಆತನಿಗೂ ಗಣಿ ರೆಡ್ಡಿಗಳಿಗೂ ಏನು ಸಂಬಂಧ? ಮಂತ್ರಿಯೊಬ್ಬ ಜೈಲಧಿಕಾರಿಗೆ ಹತ್ತು ಲಕ್ಷ ರೂ.ಲಂಚ ಕೊಟ್ಟು ಆತನಿಗೆ ಐಷಾರಾಮಿ ಸೌಲಭ್ಯ ಒದಗಿಸಿದ್ದೂ ಅಲ್ಲದೇ ಆತನ ತಂಟೆಗೆ ಹೋಗದಂತೆ ಜೈಲಿನ ಇತರೇ ಕೈದಿಗಳಿಗೆ ಪ್ರೂಸಿ ಹೊಡೆಯುತ್ತಾನೆಂದರೆ ಬಳ್ಳಾರಿಯ ಗಣಿ ರೆಡ್ಡಿಗಳ ಕೈ ಅಂತರರಾಷ್ಟ್ರೀಯ ಅದಿರು ವಂಚಕ ಜಾಲಕ್ಕೂ ಚಾಚಿಕೊಂಡಿದೆಯೇ?

ಸಿಬಿಐ ತನಿಖೆಯೊಂದೇ ಉತ್ತರಿಸಬೇಕು. ●

ಯಾವ ರೌಡಿ-ಕೇಡಿಗಳಿಗೂ ಕಮ್ಮಿಯಿಲ್ಲದಂತೆ ಗಣಿ ದೈತ್ಯ ಶಾಸಕರು ಕಾಂಗ್ರೆಸ್ ನಾಯಕರನ್ನು ಅಮ್ಮನ್, ಅಕ್ಕನ್ ಎಂದು ಅಸೆಂಬ್ಲಿಯಲ್ಲೇ ಬಡಿದಾಟಕ್ಕೆ ಇಳಿದ ಸಂದರ್ಭದಲ್ಲಿ ಮಂತ್ರಿ ಶ್ರೀರಾಮುಲು ಏನು ಮಾಡುತ್ತಿದ್ದರು? ಏಕೆ ಅಸೆಂಬ್ಲಿ ಫೈಟಿಂಗಿಗೆ ಗೈರುಹಾಜರಾದರು? ಅಂಥಾ ಯಾವ ಘನಂದಾರಿ ಕೆಲಸದಲ್ಲಿ ಶ್ರೀರಾಮುಲು ಬಿಜಿಯಾಗಿದ್ದರು? ಜುಲೈ 14ರ ಅಪರಾಹ್ನ 2ಕ್ಕೆ ಏಕಾಏಕಿ ಪರಪ್ಪನ ಅಗ್ರಹಾರ ಜೈಲಿಗೆ ನುಗ್ಗಿದ ಶ್ರೀರಾಮುಲು ಮೊದಲು ಮಾಡಿದ್ದು ಅಲ್ಲಿದ್ದ ಖತರ್‌ನಾಕ್ ರೌಡಿಗಳ ಜೊತೆ ರಹಸ್ಯ ಮಾತುಕತೆ!

● ರಾ. ಸೋಮನಾಥ್
ra.somanath2010@gmail.com



ಜುಲೈ ಒಂಭತ್ತರ ಶುಕ್ರವಾರ ವಿಧಾನಸಭೆಯೊಳಗೆ ಕಾಂಗ್ರೆಸ್ ನಾಯಕರನ್ನು ಅಟ್ಟಾಡಿಸಿದ ಬಳ್ಳಾರಿ ಶಾಸಕ ಪಡೆಯ ಜನಾರೆಡ್ಡಿ, ಕರುಣಾಕರ ರೆಡ್ಡಿ, ಸೋಮಶೇಖರ ರೆಡ್ಡಿ ಕಂಪ್ಲಿ ಸುರೇಶ್ ಬಾಬು ಮತ್ತು ಕೂಡ್ಲಿಗಿಯ ನಾಗೇಂದ್ರರ ಮಧ್ಯೆ ಇರಲೇಬೇಕಿದ್ದ ಒಂದು ಮುಖ ಮಾತ್ರ ಕಾಣಲೇ ಇಲ್ಲ.

ಅದು ಆರೋಗ್ಯ ಮಂತ್ರಿ ಶ್ರೀರಾಮುಲು!

ಯಾವ ರೌಡಿ-ಕೇಡಿಗಳಿಗೂ ಕಮ್ಮಿಯಿಲ್ಲದಂತೆ ಗಣಿ ದೈತ್ಯ ಶಾಸಕರು ಕಾಂಗ್ರೆಸ್ ನಾಯಕರನ್ನು ಅಮ್ಮನ್, ಅಕ್ಕನ್ ಎಂದು ಅಸೆಂಬ್ಲಿಯಲ್ಲೇ ಬಡಿದಾಟಕ್ಕೆ ಇಳಿದ ಸಂದರ್ಭದಲ್ಲಿ ಮಂತ್ರಿ ಶ್ರೀರಾಮುಲು ಏನು ಮಾಡುತ್ತಿದ್ದರು? ಏಕೆ ಅಸೆಂಬ್ಲಿ ಫೈಟಿಂಗಿಗೆ ಗೈರುಹಾಜರಾದರು? ಅಂಥಾ ಯಾವ ಘನಂದಾರಿ ಕೆಲಸದಲ್ಲಿ ಶ್ರೀರಾಮುಲು ಬಿಜಿಯಾಗಿದ್ದರು?

ಈ ಹಕೀಕತ್ತು ಬಯಲಾದದ್ದು ಇದಾಗಿ ಮೂರನೇ ದಿನಕ್ಕೆ ಅಂದರೆ ಜುಲೈ 14 ರಂದು. ಶ್ರೀರಾಮುಲು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಏಕಾಏಕಿ ಪ್ರತ್ಯಕ್ಷರಾಗಿ ಕಂಬಿ ಎಣಿಸುತ್ತಿದ್ದ ಒಂದು ಡಜನ್ ರೌಡಿಗಳನ್ನು ಮುಖಾಮುಖಿ ಯಾದಾಗಲೇ. ಶ್ರೀರಾಮುಲು ಆರೋಗ್ಯ ಮಂತ್ರಿ. ಕರ್ನಾಟಕದ ಯಾವುದೇ ಕಾರಾಗೃಹಕ್ಕಾದರೂ ಭೇಟಿಕೊಟ್ಟು ಅಲ್ಲಿನ ಕೈದಿಗಳ ಆರೋಗ್ಯ ವಿಚಾರಿಸಬಹುದು. ಜೈಲೊಳಗೇ ಇರುವ ಆಸ್ಪತ್ರೆಗಳನ್ನೂ ಪರೀಕ್ಷಿಸಬಹುದು. ಓರ್ವ ಆರೋಗ್ಯ ಮಂತ್ರಿಯಾಗಿ ಶ್ರೀರಾಮುಲು ನಿಜಕ್ಕೂ ಜೈಲುಗಳ ಆಸ್ಪತ್ರೆಗಳನ್ನು ತಪಾಸಿಸಲೆಂದೇ ಹೋಗಿದ್ದರೆ ಅದನ್ನು ಯಾರಾದರೂ ಒಪ್ಪಬಹುದಿತ್ತು.

ಆದರೆ ಜುಲೈ 14ರ ಅಪರಾಹ್ನ 2ಕ್ಕೆ ಏಕಾಏಕಿ ಪರಪ್ಪನ ಅಗ್ರಹಾರ ಜೈಲಿಗೆ ನುಗ್ಗಿದ ಶ್ರೀರಾಮುಲು ಮೊದಲು ಮಾಡಿದ್ದು ಅಲ್ಲಿದ್ದ ಖತರ್‌ನಾಕ್ ರೌಡಿಗಳ ಜೊತೆ ರಹಸ್ಯ ಮಾತುಕತೆ!

ಶ್ರೀರಾಮುಲು ಜೈಲು ಹೊಕ್ಕು ಗಪ್‌ಚುಪ್ಪಾಗಿ ಸಮಾಲೋಚಿಸಿದ ಪಾತಕಿಗಳಾದರೂ ಎಂಥವರು? ಬೆಂಗಳೂರಿನ ಅತ್ಯಂತ ಭಯಾನಕ ಸುಪಾರಿ ಕಿಲ್ಲರ್ ಸೈಕಲ್ ರವಿ, ಕೆಂಗೇರಿ ಡಬ್ಬಲ್ ಮರ್ಡರ್ ಕೇಸಿನ ತಿಮ್ಮೇನಹಳ್ಳಿಯ ಸೂರಿ ಹಂತಕ ಪೆದ್ದುಗುಂಡ, ಕಿರಾತಕ ರೌಡಿ ಕೊರಂಗು, ನಿನ್ನೆ ಮೊನ್ನೆಯಷ್ಟೇ ಬಾಂಬ್ ದಾಳಿ ನಡೆಸಿ ನೆಲಮಂಗಲದ ವಕೀಲ ರವಿಕುಮಾರ್‌ನನ್ನು ಅನ್ಯಾಯವಾಗಿ ಕೊಂದು ಹಾಕಿದ ಬೆತ್ತನಗೆರೆ ಮಂಜ, ಬಳ್ಳಾರಿಯ ನಟೋರಿಯಸ್ ರೌಡಿ ಕತ್ತೆ ನಾಗ, ಬೆಂಗಳೂರು ಅಂಡರ್‌ವರ್ಲ್ಡ್‌ನ ಕುಖ್ಯಾತ ಸುಪಾರಿ ಕಿಲ್ಲರ್ ಹೆಬ್ಬೆಟ್ಟು ಮಂಜ ಮತ್ತು ಬಳ್ಳಾರಿಯ ಮತ್ತೊಬ್ಬ ಮುದಿ ಪಾತಕಿ ಚಂದ್ರೇಗೌಡ!

ಅವಕಾಶ ಸಿಕ್ಕಿದ್ದರೆ ಶ್ರೀರಾಮುಲು ಇನ್ನೂ ಎಂತೆಂಥಾ ಕ್ರಿಮಿನಲ್‌ಗಳ ಜೊತೆ ಕುಶಲೋಪರಿ ನಡೆಸುತ್ತಿದ್ದರೋ ಗೊತ್ತಿಲ್ಲ. ಅಂತೂ ಸಿಕ್ಕ ಅತ್ಯಲ್ಪ ಕಾಲಾವಕಾಶ ಅಂದರೆ ಕೇವಲ ಎರಡೂವರೆ ಗಂಟೆಯೊಳಗೇ ಇಂಥ ಖತರ್‌ನಾಕ್ ಪಾತಕಿಗಳ ಜೊತೆ ಕೂತು ಹರಟೆ ಹೊಡೆದಿದ್ದಾರೆ. ದುರಂತವೆಂದರೆ ಶ್ರೀರಾಮುಲು ಓರ್ವ ಆರೋಗ್ಯ ಮಂತ್ರಿಯಾಗಿ ಯಾವ ಕ್ಷಣದಲ್ಲೂ ವರ್ತಿಸಲೇ ಇಲ್ಲ. ಬದಲಾಗಿ ಪಕ್ಕಾ ಕ್ರಿಮಿನಲ್‌ನಂತೆ ರೌಡಿಗಳ ಜೊತೆ ಕೂತು ಅದೆಂಥದೋ ಡೀಲು ಕುದುರಿಸಿದ್ದಾರೆ.

ಘಟನೆಯ ವಿವರಗಳೇ ಶ್ರೀರಾಮುಲು ಕೇಡಿಬುದ್ಧಿಗೆ ಪುರಾವೆ ಒದಗಿಸುತ್ತವೆ. ಜುಲೈ 14ರ ಮಧ್ಯಾಹ್ನ ಎರಡು ಗಂಟೆಗೆ ಸರಿಯಾಗಿ ಪರಪ್ಪನ ಅಗ್ರಹಾರ ಜೈಲಿಗೆ ನುಗ್ಗಿದ ಶ್ರೀರಾಮುಲು ಪೂರ್ವಭಾವಿಯಾಗಿ ಜೈಲು ಮಂತ್ರಿ ಉಮೇಶ್ ಕತ್ತಿಯ ಅನುಮತಿ ಪಡೆಯಬೇಕಿತ್ತು, ಜೈಲು ಮಂತ್ರಿ ಕಚೇರಿಯಿಂದ ಪರಪ್ಪನ ಅಗ್ರಹಾರ ಜೈಲಿನ ಅಧಿಕಾರಿಗಳಿಗೆ ಮಾಹಿತಿ ರವಾನೆಯಾಗಬೇಕಿತ್ತು, ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳ ತಂಡ ಅವರ ಜೊತೆ ಇರಬೇಕಿತ್ತು, ಇದ್ಯಾವುದೂ ಇಲ್ಲದೇ ಹೊಸಪೇಟೆ ಶಾಸಕ ಆನಂದ್ ಸಿಂಗ್, ಕೂಡ್ಲಿಗಿ ಶಾಸಕ ನಾಗೇಂದ್ರ ಮತ್ತು ಕಂಪ್ಲಿಯ ಶಾಸಕ ಸುರೇಶ್ ಬಾಬುರಂಥ ಕ್ರಿಮಿನಲ್ ಹಿನ್ನೆಲೆಯ ಶಾಸಕರನ್ನು ಜೊತೆ ಹಾಕಿಕೊಂಡು ಏಕಾಏಕಿ ಜೈಲಿಗೆ ನುಗ್ಗಿದ ಶ್ರೀರಾಮುಲು ವರ್ತನೆ ಆವತ್ತು ಯಾವ ಕ್ರಿಮಿನಲ್‌ಗಿಂತಲೂ ಕಮ್ಮಿಯಿರಲಿಲ್ಲ.

ಏಕಾಏಕಿ ಪರಪ್ಪನ ಅಗ್ರಹಾರ ಜೈಲಿನ ಮುಖ್ಯದ್ವಾರಕ್ಕೆ ನುಗ್ಗಿದ ಶ್ರೀರಾಮುಲು ಕೂಡ ಯಾರೋ ರೌಡಿಯಿರಬೇಕೆಂದು ಅದ್ದಗಟ್ಟಿದ ಜೈಲು ಸಿಬ್ಬಂದಿಗೆ ಕ್ರಮೇಣ ಆತ ಮಂತ್ರಿಯೆಂದು ಗ್ಯಾರಂಟಿಯಾಗಿದೆ. ಕಕ್ಕಾಬಿಕ್ಕಿಯಾಗಿ ಸೆಲ್ಯೂಟ್ ಹೊಡೆದಿದ್ದಾರೆ. ತಕ್ಷಣವೇ ಒಳನುಗ್ಗಿದ ಶ್ರೀರಾಮುಲು ತಮ್ಮ ಜೊತೆ ಬಂದಿದ್ದ ಶಾಸಕರನ್ನಷ್ಟೇ ಕರಕೊಂಡು ಜೈ... ಸೂಪರಿಂಟೆಂಡೆಂಡ್ ಲಕ್ಷ್ಮಿನಾರಾಯಣರ ಛೇಂಬರ್ ಪ... ಸಂದರ್ಶನ ಕೊಠಡಿಗೆ ನುಗ್ಗಿದ್ದೇ ಅಸಿಸ್ಟೆಂಟ್ ಸೂ... ರಿಂಟೆಂಡೆಂಟ್ ಆನಂದ ರೆಡ್ಡಿಯ ಕಿವಿಗೆ ಅದೇನೋ ಪಿಸುಗು... ದ್ದಾರೆ. ಅಷ್ಟರಲ್ಲೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗಳ... ಹಟ್ಟಿ ಮತ್ತು ತನ್ವೀರ್ ಅಹ್ಮದ್ ಓಡೋಡಿ ಬಂ... ಸೆಲ್ಯೂಟ್ ಹೊಡೆಯುತ್ತಿದ್ದಂತೆ ಜೈಲು ಡಿಐಜಿ ವಿಶ್ವನಾಥ... ಕೂಡ ಗಾಬರಿಗೊಂಡು ಧಾವಿಸಿ ಬಂದಿದ್ದಾರೆ. ಏಕಾಏಕಿ... ಮಂತ್ರಿ ಭೇಟಿಯಿಂದ ಗಾಬರಿಗೊಂಡ ಜೈಲಧಿಕಾರಿಗಳ... ತೆಲುಗು ಸಿನಿಮಾದ ರೌಡಿಯ ಗತ್ತಿನಲ್ಲಿ ಗುರಾಯಿ... ಶ್ರೀರಾಮುಲು "ನೀವೇ ಏನ್ರೀ ಇನ್‌ಚಾರ್ಜು? ನ... ಬಳ್ಳಾರಿಯವ್ರು ಯಾರ್‍ಯಾರಿದ್ದಾರ್ರೀ? ಕರಕೊಂಡ್ ಬನ್ರೀ... ಎಂದುಬಿಟ್ಟ.


ಎಷ್ಟೆಂದರೂ ಆರೋಗ್ಯ ಮಂತ್ರಿ ತಾನೆ?

ತಕ್ಷಣವೇ ಜೈಲಿನ ಡಾಕ್ಟರ್‌ಗಳಾದ ಕುಮಾರ್, ರ... ಶಶಿಕಲಾ ಮತ್ತು ವಿಜಯ್‌ಕುಮಾರ್‌ರನ್ನು ಕರೆ... ವಿಶ್ವನಾಥಯ್ಯ ಬಳ್ಳಾರಿಯ ಕೈದಿಗಳನ್ನು ಕರೆತಂ... ಶ್ರೀರಾಮುಲು ಮುಂದೆ ಹಾಜರುಪಡಿಸುವ... ಜೈಲರ್‌ಗಳನ್ನು ಅಟ್ಟಿದ್ದಾರೆ. ಕೆಲವೇ ಕ್ಷಣಕ್ಕೆ ಜೈಲು ಸಿಬ್... ಕರೆತಂದದ್ದು ಬಳ್ಳಾರಿಯ ಹೀನ ಪಾತಕಿಗಳಾದ ಕತ್ತೆ ನ... ಮತ್ತು ಮುದಿರೌಡಿ ಚಂದ್ರೇಗೌಡನನ್ನು.

ಆ ಇಬ್ಬರು ಪಾತಕಿಗಳನ್ನು ಕಂಡಿದ್ದೇ ಪಕ್ಕಾ ರೌಡಿಗತ್ತಿ... ಶ್ರೀರಾಮುಲು ಕತ್ತೆ ನಾಗನನ್ನುದ್ದೇಶಿಸಿ 'ಏಮನ್ನಾ? ಏ... ಸಮಾಚಾರಮು? ಭಾಗುನ್ನಾವಾ?' ಎಂದು ಅಪ್ಪಿಕೊ... ಸರಿಸುಮಾರು 60ರ ಇಳಿವಯಸ್ಸಿನ ಚಂದ್ರೇಗೌ... ಕೈಹಿಡಿದು ಪಕ್ಕಕ್ಕೇ ಕೂರಿಸಿಕೊಂಡ. ಇದ್ದಕ್ಕಿದ್ದಂತೆ ತಾ... ಕತ್ತೆ ನಾಗನ ಜೊತೆ ಮಾತಾಡುವುದನ್ನು ಜೈಲಧಿಕಾರಿ... ಗಮನಿಸುತ್ತಿದ್ದಾರೆ ಎನ್ನಿಸಿ ಸುತ್ತ ನಿಂತಿದ್ದ ಅಧಿಕಾರಿಗಳ... ಗುರಾಯಿಸಿದ್ದೇ "ನೀವೆಲ್ಲ ಒಂದ್ನಿಮಿಷ ಹೊರಗೆ ನಿಂತ್ಕೋ... ಎಂದುಬಿಟ್ಟ.


ಜೈಲಧಿಕಾರಿಗಳಿಗಿದು ಜೀರ್ಣಿಸಿಕೊಳ್ಳಲಾಗದ ಮು... ಗರದ ಸಂಗತಿ. ಶ್ರೀರಾಮುಲು ಜೊತೆ ಕತ್ತೆ ನಾಗ ಮ... ಚಂದ್ರೇಗೌಡ ಇಬ್ಬರನ್ನೇ ಬಿಟ್ಟು ಹೊರಗೆ ನಿಂತು ತಲೆ... ಚಚ್ಚಿಕೊಂಡಿದ್ದಾರೆ ಡಿಐಜಿ ವಿಶ್ವನಾಥಯ್ಯ ಮತ್ತು ಸೂ... ರಿಂಟೆಂಡೆಂಟ್ ಲಕ್ಷ್ಮೀನಾರಾಯಣ. ಇಪ್ಪತ್ತು ನಿಮಿಷ... ಹೆಚ್ಚು ಕಾಲ ಕತ್ತೆ ನಾಗ ಮತ್ತು ಚಂದ್ರೇಗೌಡನ ಜೊ... ಏನೇನೋ ಸೀಕ್ರೆಟ್ ಸಮಾಲೋಚನೆ ನಡೆಸಿದ ಶ್ರೀರಾಮು... ಅವರಿಬ್ಬರನ್ನು ಹೊರಕಳಿಸಿದ್ದೇ ಭಯಾನಕ ಸುಪಾರಿ ಕಿ... ಸೈಕಲ್ ರವಿಯನ್ನು ಕರೆತರುವಂತೆ ಆದೇಶಿಸಿದ್ದಾನೆ.

ಮೊದಲೇ ದಂಗಾಗಿದ್ದ ಜೈಲಧಿಕಾರಿಗಳಿಗೆ ... ಆಘಾತವಾಗಿದ್ದು ಸೈಕಲ್ ರವಿ ಬೆನ್ನಲ್ಲೇ ಹೆಬ್ಬೆಟ್ ಮಂಜ... ಕರೆಸುವಂತೆ ಶ್ರೀರಾಮುಲು ಆದೇಶಿಸಿದಾಗಲೇ. ಸೈ... ರವಿ ಜೊತೆ ಕೂತು ಅರ್ಧಗಂಟೆ ಕಾಲ ರಹಸ್ಯ... ಮಾತಾಡಿದ ಶ್ರೀರಾಮುಲು ಆತನ ಜೊತೆಗೆ ಹೆ...




...ನ್ನು ಕೂರಿಸಿಕೊಂಡು ಹರಟೆ ... ನಂತರ ನೆಲಮಂಗಲದ ಚಿತ್ತನಗೆರೆ ...ಶಿಷ್ಯ ಚಿತ್ತನಗೆರೆ ಮಂಜನನ್ನು ...ದ. ಕೆಲಕಾಲ ಆತನ ಜೊತೆಗೂ ...ಗಿ ಮಾತಾಡಿದ್ದಾನೆ. ಇವರೆಲ್ಲ ...ಹಾಕಿದ ನಂತರ ಶ್ರೀರಾಮುಲು ...ಅಧಿಕಾರಿಗಳನ್ನು ಕರೆಸಿಕೊಂಡಿದ್ದೇ ... ಮತ್ತು ಪೆದ್ದಗುಂಡರನ್ನು ಕರೆತರು ...ಬಾಯಿಸಿದ್ದಾನೆ.

...ದೇ ಕ್ಷಣಗಳಲ್ಲಿ ಕೊರಂಗು ಹಾಜ... ಆತನ ಬೆನ್ನಲ್ಲೇ ಪೆದ್ದಗುಂಡ ...ನೆ. ಇಬ್ಬರನ್ನೂ ಕೂಡ್ರಿಸಿಕೊಂಡು ...ರ್ಧ ಗಂಟೆಕಾಲ ಹರಟೆ ಹೊಡೆದ ...ಮುಲು ನಂತರ ಯಾರ್‍ಯಾರೋ ...ನ್ನು ಕರೆಸಿಕೊಂಡು ಇನ್ನೇನೇನೋ ಚರ್ಚಿಸಿದ್ದಾನೆ. ...ನ್ನ ಆನಂದ್ ಸಿಂಗ್ ಕೂಡ ತನಗೆ ಬೇಕಾದ ...ನ್ನ ಹೆಸರಿಸಿ ಕರೆಸಿಕೊಂಡಿದ್ದಾನೆ. ಇದಾದ ನಂತರವೇ ...ಮುಲು ಜೈಲು ಆಸ್ಪತ್ರೆಯ ಡಾಕ್ಟರ್‌ಗಳೊಡನೆ ...ಲೋಚಿಸಿದ್ದು!



ಕೊರಂಗು


...ರ್ವ ಆರೋಗ್ಯ ಮಂತ್ರಿ ಜೈಲಿನ ... ಭೇಟಿ ಕೊಟ್ಟು ಪರಿಶೀಲಿಸುವು... ಅಲ್ಲಿನ ಕೈದಿಗಳ ಅಹವಾಲು ...ದಾಗಲಿ ಅಕ್ಷಮ್ಯವೇನಲ್ಲ. ಬೇರೆ ... ಆರೋಗ್ಯ ಮಂತ್ರಿ ಈ ರೀತಿ ... ಭೇಟಿ ಕೊಟ್ಟು ವೇಶ್ಯಾವಾಟಿಕೆ ... ದಾರುಣತೆಗೆ ಸಿಲುಕಿ ಜೈಲು ... ನತದೃಷ್ಟೆಯರನ್ನು ಸಂತೈಸಿದ್ದರೆ ... ಕ್ರಾಂತಿಕಾರಕವೆಂದು ಭಾವಿಸ...ತ್ತು, ರೈತ ಹೋರಾಟಗಾರರನ್ನೋ ...ಪ್ರತಿಭಟನಾಕಾರರನ್ನೋ ಭೇಟಿಯಾಗಿ ... ಆರೋಗ್ಯ ವಿಚಾರಿಸಿದ್ದರೆ ಅದು ...ೀಯ ಕಳಕಳಿಯಾಗುತ್ತಿತ್ತು. ಕನಿಷ್ಠ ...ಲ್ಲಿರುವ ನಕ್ಸಲೀಯರನ್ನು ಕಂಡು ... ಮನವೊಲಿಸಲು ಶ್ರೀರಾಮುಲು ಯತ್ನಿಸಿದ್ದರೂ ...ಂದು ಅರ್ಥವಿರುತ್ತಿತ್ತು.



ಸೈಕಲ್ ರವಿ

...ವರೆ ಶ್ರೀರಾಮುಲು ಕರೆಸಿ ಮಾತಾಡಿದ್ದು ಸಮಾಜ ...ಕೊಲೆಗಡುಕರನ್ನು. ಓಕೆ; ಅವರ ಮನಪರಿವರ್ತಿಸಲು ...ಲ್ ಕೃತ್ಯಗಳಿಂದ ಹೊರಬರುವಂತೆ ಓಲೈಸಲು ...ವರ್ಯರು ಈ ರೀತಿ ಮಾಡಿದ್ದಾರೆಂದೇ ಅರ್ಥೈಸ... ...ವರೆ ಶ್ರೀರಾಮುಲು ಏಕೆ ಜೈಲಧಿಕಾರಿಗಳನ್ನು ಹೊರಕ್ಕೆ ...ತಾನೊಬ್ಬನೇ ರಹಸ್ಯವಾಗಿ ಹಂತಕರ ಜೊತೆ ಹರಟೆ ...ಯುತ್ತಿದ್ದ? ಜೈಲಧಿಕಾರಿಗಳನ್ನು ಹೊರಗಿಟ್ಟು ...ದು ರಹಸ್ಯವಾಗಿ ಪಾತಕಿಗಳ ಜೊತೆ ಮಾತನಾಡುವ ... ಅನಿವಾರ್ಯತೆ ಶ್ರೀರಾಮುಲುಗಿತ್ತು?

...ಷ್ಟಕ್ಕೂ ಶ್ರೀರಾಮುಲುವೇ ಓರ್ವ ಪಾತಕಿ. ಸದ್ಯ ...ೂರು ಜೈಲಲ್ಲಿರುವ ಬೇರೆ ಯಾರೇ ...ು ಮೇಲಿರುವಷ್ಟು ಕ್ರಿಮಿನಲ್ ...ಳು ಆತನ ಮೇಲಿವೆ. ಈತನ ಅಕ್ಕನ ... ರೈಲ್ವೆ ಬಾಬು ಉರ್ಫ್ ಸ್ಟೇಷನ್ ... ಒಂದಾನೊಂದು ಕಾಲಕ್ಕೆ ಬಳ್ಳಾರಿ ...ಖತರ್‌ನಾಕ್ ರೌಡಿ ಯಾಗಿದ್ದ. ತನ್ನ ...ಾಳಿಗಳ ಕೈಯಲ್ಲಿ ನಡುರಸ್ತೆಯಲ್ಲಿ ...ಯಾದ. ರೈಲ್ವೆ ಬಾಬು ಹಂತಕರ ... ಪ್ರಮುಖನೊಬ್ಬನನ್ನು ನಡುರಸ್ತೆ... ರುಂಡ ಚೆಂಡಾಡಿದವನು ...ಮುಲು. ಒಂದಲ್ಲ ಹತ್ತು ಬಾರಿ ... ಜೈಲಲ್ಲಿ ಶ್ರೀರಾಮುಲು ಕಂಬಿ ... ಬಂದ. ಆ ಕಾಲದಲ್ಲೇ ...ಮುಲುಗೆ ಜೈಲಲ್ಲಿ ಗೆಳೆತನ ...ದ್ದು ಬೆಂಗಳೂರಿನ ಹಳೇ ರೌಡಿಗಳಾದ ಕಾಲಾಪತ್ಥರ್, ... ಭಾರತಿ, ಚಕ್ರಿ ಮತ್ತು ಚಿಕ್ಕಿನ ಕಣ್ ರಾಜೇಂದ್ರನ...



ಚಿತ್ತನಗೆರೆ ಮಂಜ

...ದೇ ಶ್ರೀರಾಮುಲು ಮತ್ತು ಜನಾರ್ದನ ರೆಡ್ಡಿ ಆ... ...ಗೆ ಬಳ್ಳಾರಿ ಮಟ್ಟಿಗೆ ಏನೇನೂ ಆಗಿರಲಿಲ್ಲ. ಹಾಗಿದ್ದೂ ... ಜೈಲಲ್ಲಿದ್ದ ಬೆಂಗಳೂರಿನ ರೌಡಿಗಳಿಗೆ ಪ್ರತಿನಿತ್ಯ ...ಾನಿ ಕಳಿಸುತ್ತಿದ್ದರು. ಅವರ ಐಷಾರಾಮಕ್ಕಾಗೇ ಬಳ್ಳಾರಿ ... ಕೆಲ ಕೋಣೆಗಳಿಗೆ ಸೀಲಿಂಗ್ ಫ್ಯಾನುಗಳನ್ನು ...ಸಿಕೊಟ್ಟರು. ಮುಂದೆ ಇದೇ ರೌಡಿಗಳನ್ನು ಬಳಸಿಕೊಂಡು ಬಳ್ಳಾರಿಯಲ್ಲಿ ಪೋಸ್ ಕೊಟ್ಟರು. ಇಂಥ ರೌಡಿಗಳ ಸಹವಾಸ ಸಾಲದೇ ಆಂಧ್ರದ ಕುಖ್ಯಾತ ಪರಿಟಾಲ ರವಿಯನ್ನು ಬಳ್ಳಾರಿಗೇ ಕರೆಸಿಕೊಂಡು ಪಾರ್ಟಿ ಕೊಟ್ಟರು. ಅನಂತಪುರಕ್ಕೇ ಹೋಗಿ ಪರಿಟಾಲ ರವಿ ಜೊತೆ ಚಮಚಾಗಿರಿ ಮಾಡಿಕೊಂಡಿದ್ದ ಶ್ರೀರಾಮುಲು ಮತ್ತು ಜನಾರ್ದನ ರೆಡ್ಡಿ ಎಂಥಾ ಪಾಖಂಡಿಗಳೆಂದರೆ; ಪರಿಟಾಲ ರವಿಯ ಹತ್ಯೆಯಾಗಿದ್ದೇ ಎದುರಾಳಿ ಜಗನ್ ಜೊತೆ ಗಣಿ ಲೂಟಿಯ ಪಾಲುದಾರಿಕೆಗಿಳಿದರು.

ಇಂಥ ಕ್ರಿಮಿನಲ್ ಹಿನ್ನೆಲೆ ಇಲ್ಲದೇ ಹೋಗಿದ್ದರೆ ಇವತ್ತು ರೆಡ್ಡಿ ಗ್ಯಾಂಗ್ ಈ ಮಟ್ಟದ ಅದಿರು ಲೂಟಿ ಮಾಡಲು ಸಾಧ್ಯವಾಗುತ್ತಿತ್ತೆ? ಹೋಗಲಿ ಆ ಪಾಟ ಅದಿರು ದೋಚಿ ಸಾವಿರಾರು ಕೋಟಿಯಷ್ಟು ಸಂಪತ್ತು ಗಳಿಸಿ ರಾಜಕೀಯ ಕ್ಕಿಳಿದು ಮಂತ್ರಿಗಳಾದ ನಂತರವೂ ಕ್ರಿಮಿನಲ್ ಬುದ್ಧಿ ಬಿಡಬೇಕಿತ್ತಲ್ಲವೇ? ಬದಲಾಗಿ ಶ್ರೀರಾಮುಲು ಬಳ್ಳಾರಿಯ ಪಾತಕಿಗಳನ್ನೇ ಆಂಧ್ರದ ಹಂತಕರ ಜೊತೆಹಾಕಿಕೊಂಡು ಬೇರೆ ಬೇರೆ ಗಣಿ ಮಾಲೀಕರನ್ನು ಸುಲಿಯಲಾರಂಭಿಸಿದ.

ಇವತ್ತು ಯಾವ ಕತ್ತೆ ನಾಗ ಎಂಬ ಹಂತಕನನ್ನು ಜೈಲಿಗೇ ಹೋಗಿ ಶ್ರೀರಾಮುಲು ಮುದ್ದು ಮಾಡಿ ಬಂದನೋ, ಅದೇ ಕತ್ತೆ ನಾಗ ಹಿಂದೆ ದಿವಾಕರ್ ಬಾಬು ಪಾಳೆಯದಲ್ಲಿದ್ದ. ಅಂಥವನನ್ನು ದಿವಾಕರ್ ಬಾಬು ವಿರುದ್ಧವೇ ಎತ್ತಿಕಟ್ಟಿ ತನ್ನ ತೆಕ್ಕೆಗೆ ಹಾಕಿಕೊಂಡವನು ಶ್ರೀರಾಮುಲು. ಇದ್ದೇ ಕತ್ತೆ ನಾಗ ಹಿಂದೆ ಬಿಜಾಪುರ ಜೈಲಿನಲ್ಲಿದ್ದ. ಅಲ್ಲಿದ್ದ ನೆಲಮಂಗಲದ ಚಿತ್ತನಗೆರೆ ಶಂಕ್ರ ಮತ್ತು ಚಿತ್ತನಗೆರೆ ಮಂಜ ಈ ಕತ್ತೆ ನಾಗನಿಗೆ ಆತ್ಮೀಯರಾಗಿದ್ದರು. ಅದೇ ಕತ್ತೆ ನಾಗ ತನ್ನಲ್ಲಿದ್ದ ರಹಸ್ಯ ಮೊಬೈಲಿನಿಂದ ಮಂತ್ರಿ ಶ್ರೀರಾಮುಲುಗೆ ಶಂಕ್ರ ಮತ್ತು ಮಂಜರನ್ನು ಪರಿಚಯಿಸಿಕೊಟ್ಟಿದ್ದ.


ಈಗ ಅದೇ ಕತ್ತೆ ನಾಗನನ್ನು ಪರಪ್ಪನ ಅಗ್ರಹಾರ ಜೈಲಿಗೇ ಬಂದು ಸಂತೈಸಿದ ಶ್ರೀರಾಮುಲು ಆತನ ದೋಸ್ತಿಯಾದ ಚಿತ್ತನಗೆರೆ ಮಂಜನನ್ನೂ ಕರೆಸಿಕೊಂಡು ಮೈಕೊಡವಿ ಕಳಿಸಿದ್ದಾನೆ. ಮಂಜ, ಕತ್ತೆ ನಾಗರ ಸಿಂಡಿಕೇಟಿನ ಸೈಕಲ್ ರವಿ, ಹೆಬ್ಬೆಟ್ ಮಂಜರನ್ನೂ ಕರೆಸಿಕೊಂಡು ಯಾವುದೋ ಫಿಟ್ಟಿಂಗ್ ಇಟ್ಟಿರಬೇಕು. ಎಲ್ಲಿ ಒಂದೇ ಗ್ಯಾಂಗಿನ ಜೊತೆ ತಾನು ಬ್ರಾಂಡ್ ಆಗುತ್ತೇನೋ ಎನ್ನಿಸಿ ವಿರೋಧಿ ಪಡೆಯ ಕೊರಂಗು, ಪೆದ್ದು ಗುಂಡರನ್ನೂ ಕಾಟಾಚಾರಕ್ಕೆ ಮಾತಾಡಿಸಿದ್ದಾನೆ.

ಇನ್ನೂ ವಿಶೇಷವೆಂದರೆ ಶ್ರೀರಾಮುಲು ಮತ್ತು ಕೊರಂಗು ಸಂಬಂಧ ಕೂಡ ಇಂದು ನಿನ್ನೆಯದೇನಲ್ಲ. ಈ ಹಿಂದೆ ಬಳ್ಳಾರಿ ಜೈಲಿನಲ್ಲಿದ್ದಾಗಲೇ ಶ್ರೀರಾಮುಲು ಕೊರಂಗು ಪಡೆಗೆ ನೆರವಾಗಿದ್ದ. ಯಾರೋ ಬಿಳಿ ಕಾಲರ್ ರಾಜಕಾರಣಿಯಾಗಿದ್ದರೆ, ಅಥವಾ ಸುರೇಶ್ ಕುಮಾರ್, ಕಾಗೇರಿ, ಕರಂದ್ಲಾಜೆಯಂಥ ಮಂತ್ರಿಗಳು ಜೈಲಿಗೆ ಹೋಗಿ ಪರಿಶೀಲಿಸಿದ್ದರೆ ಆ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಶ್ರೀರಾಮುಲು ಹೇಳಿಕೇಳಿ ಹಳೇ ರೌಡಿ. ಕೊಲೆ, ಸುಲಿಗೆಯ ಹುಟ್ಟುಗುಣ ಆತನಿಗೆ ಆನುವಂಶಿಕವಾಗೇ ರಕ್ತಗತವಾಗಿದೆ. ಓರ್ವ ಕ್ರಿಮಿನಲ್ ಮಂತ್ರಿಯಾದ ಮಾತ್ರಕ್ಕೆ ತನ್ನ ಬುದ್ಧಿ ಬಿಡುತ್ತಾನೆಂದಾಗಲಿ ಅಥವಾ ಆತನ ಹಳೇ ಲಿಂಕುಗಳು ನಶಿಸುತ್ತವೆಂದಾಗಲಿ ಅಲ್ಲವಲ್ಲ.

ಶ್ರೀರಾಮುಲು ಜೈಲಿಗೆ ನುಗ್ಗಿ ಖತರ್‌ನಾಕ್ ರೌಡಿಗಳನ್ನು ತಬ್ಬಾಡುವುದಕ್ಕೂ ಸುರೇಶ್ ಕುಮಾರ್ ಥರದ ಗೋಮುಖರು ಜೈಲಲ್ಲಿದ್ದ ಪತಿತೆಯರನ್ನು ಸಂತೈಸುವುದಕ್ಕೂ ವ್ಯತ್ಯಾಸವಿದೆ. ಮಂತ್ರಿಯಾದಾಗಿನಿಂದ ವಿಧಾನಸೌಧದ ತನ್ನ ಮಂತ್ರಿ ಛೇಂಬರಿಗೇ ನೆಟ್ಟಗೆ ಹಾಜರಾಗದ ಶ್ರೀರಾಮುಲು ಏಕಾಏಕಿ ಜೈಲಿಗೆ ನುಗ್ಗಿ ರೌಡಿಗಳನ್ನು ಮುದ್ದು ಮಾಡುತ್ತಾನೆಂದರೆ ಇನ್ನಾವುದೋ ದೊಡ್ಡ ಸ್ಕೆಚ್ಚು ರೆಡಿಯಾಗಿರಲೇಬೇಕು.

ಏನದು? ●


ಮಂತ್ರಿಯಾಗದೆ ಮರೆಯಾದ ಕೃಷ್ಣಮೂರ್ತಿ



ಜನತಾದಳ ಸಾಮೂಹಿಕ ನಾಯಕತ್ವದಲ್ಲಿ ಪೂರ್ಣಪ್ರಮಾಣದ ಮೆಜಾರಿಟಿ ಪಡೆದು ದೇವೇಗೌಡರ ನೇತೃತ್ವದಲ್ಲಿ ಅಧಿಕಾರ ಹಿಡಿಯುವುದರಲ್ಲಿತ್ತು, ಆಗ ಕಡೂರಿನ ಕೆ.ಎಂ. ಕೃಷ್ಣಮೂರ್ತಿ ಅಭಿಮಾನಿಗಳು 'ಕೃಷ್ಣಮೂರ್ತಿಯವರನ್ನು ಮಂತ್ರಿ ಮಾಡಿ' ಎಂಬ ಬ್ಯಾನರ್ ತಯಾರಿಸಿ, ಶಾಸಕರ ಭವನದ ಮೇಲೆ ಕಟ್ಟಿದ್ದರು. ನೋಡಿದವರಿಗೆ ಹಾಸ್ಯಾಸ್ಪದವಾಗಿ ಕಾಣುತ್ತಲಿದ್ದ ಆ ಬ್ಯಾನರ್ ಹಿಂದೆ ಒಂದು ಕತೆಯೇ ಇತ್ತು.

ಕಡೂರು ಮಾಜಿ ಜಿಲ್ಲೆಯಾದ ನಂತರ ಅದರ ಒಂದೊಂದೇ ಸವಲತ್ತುಗಳು ಚಿಕ್ಕಮಗಳೂರತ್ತ ಹೊರಟವು. ಕ್ರಮೇಣ ಈ ಊರು ಹೇಳುವವರು ಕೇಳುವವರಿಲ್ಲದಂತಾಗಿ ಮುಗ್ಧ ರಾಜಕಾರಣಿಗಳಾದ ತಮ್ಮಯ್ಯ, ಹುಚ್ಚಪ್ಪ ಇಂಥವರು ಗೆದ್ದು ಬರುತ್ತ ಇದೊಂದು ಕುರುಬರ ಮೀಸಲು ಕ್ಷೇತ್ರದಂತಾಯ್ತು, ಆ ಕಾರಣಕ್ಕೆ ಸ್ವಾತಂತ್ರ್ಯ ನಂತರದ ರಾಜಕಾರಣದಲ್ಲಿ ಇಲ್ಲಿಂದ ಗೆದ್ದವರಾರೂ ಮಂತ್ರಿಗಳಾಗಿಲ್ಲ. ಅದೇ ಚಿಕ್ಕಮಗಳೂರಿನ ಎಲ್ಲಾ ತಾಲ್ಲೂಕುಗಳು ಮಂತ್ರಿಗಿರಿ ತಮ್ಮ ಹಕ್ಕೆಂದು ಪಡೆದು ಸವಲತ್ತನ್ನು ಬಾಚಿಕೊಂಡಿವೆ.

ಬೀರೂರು ಕ್ಷೇತ್ರದಲ್ಲಿ ಮಾರ್ಗದ ಮಲ್ಲಪ್ಪ ಮಂತ್ರಿಯಾಗಿದ್ದರು. ತರೀಕೆರೆಯಿಂದ ಡಾ. ರಾಜು ಮಂತ್ರಿ. ಇನ್ನ ಶೃಂಗೇರಿಯ ಗೋವಿಂದೇಗೌಡ, ಚಂದ್ರೇಗೌಡ, ಬೇಗಾನೆ ರಾಮಯ್ಯ ಇಂಥವರನ್ನೆಲ್ಲಾ ಮಂತ್ರಿಯಾಗಿ ಪಡೆದಿತ್ತು. ಮೂಡಿಗೆರೆಯಿಂದ ಕೆ.ಎಚ್. ರಂಗನಾಥ್, ನಿಂಗಯ್ಯ, ಮೋಟಮ್ಮ ಇವರೆಲ್ಲಾ ಮಂತ್ರಿಗಳಾದರು. ಚಿಕ್ಕಮಗಳೂರಿಂದ ನಾರಾಯಣ ಗೌಡ, ಸಗೀರ್ ಅಹಮದ್, ಬಿ.ಎಲ್. ಶಂಕರ್-ಹೀಗೆ ಮಂತ್ರಿಗಿರಿ ಕೊಡುವುದಿದ್ದರೆ ಕಡೂರನ್ನು ಬಿಟ್ಟು ಇನ್ನೆಲ್ಲಾ ಕ್ಷೇತ್ರವನ್ನು ಪರಿಗಣಿಸಲಾಗುತ್ತಿತ್ತು, ಆದರೆ ನಾಲ್ಕು ಬಾರಿ ಗೆದ್ದರೂ ಕೃಷ್ಣಮೂರ್ತಿ ಮಂತ್ರಿಯಾಗಲಿಲ್ಲ. ದೇವೇಗೌಡರ ಬಳಿಗೋಗಿ ಕೇಳಿದರೆ "ಸಿದ್ಧರಾಮಯ್ಯನ ಹತ್ತಿರ ಹೋಗಿ" ಎಂದು ಹೇಳುತ್ತಿದ್ದರು. ಸಿದ್ಧರಾಮಯ್ಯನ ಹತ್ತಿರ ಸುಳಿದರೆ ಆತ ಜಾರಕಿಹೊಳಿ, ಡಾ. ಮಹದೇವಪ್ಪ ಇಂಥವರ ಬಗ್ಗೆ ಕಾಳಜಿ ತೋರುತ್ತ ಜಾತಿವಾದಿಯಲ್ಲದ ಅಭಿಪ್ರಾಯ ಮೂಡಿಸಲು ಹೆಣಗುತ್ತಿದ್ದರು. ಹಾಗಾಗಿ ಶಾಸಕರ ಭವನದ ಮೇಲಿದ್ದ ಆ ಬ್ಯಾನರ್ ಮಾಸಿ, ಹರಿದು, ಅಲ್ಲಿಯೇ ಜೀರ್ಣವಾಗಿ ಹೋಯ್ತು. ಮಂತ್ರಿಗಿರಿ ಆಸೆಬಿಟ್ಟ ಕೆ.ಎಂ. ಕೃಷ್ಣಮೂರ್ತಿ ಜನಸೇವೆಯಲ್ಲಿಯೇ ತೃಪ್ತಿ ಕಾಣುತ್ತ ಕಡೆಗೆ ಲಿವರ್ ಕ್ಯಾನ್ಸರ್‌ನಿಂದ ಬಳಲಿ ಖಾಸಗಿ ಆಸ್ಪತ್ರೆಯೊಂದರಲ್ಲಿ ಕಣ್ಮುಚ್ಚಿದರು.



ಚಿಕ್ಕಮಗಳೂರು ಜಿಲ್ಲೆಯ ರಾಜಕಾರಣಿಗಳ ಪೈಕಿ ಕೃಷ್ಣಮೂರ್ತಿ ಎದ್ದು ಕಾಣುವುದೇಕೆಂದರೆ, ಇಡೀ ಜಿಲ್ಲೆಯನ್ನು ಬಾಬಾಬುಡನ್‌ಗಿರಿ ರಾಜಕಾರಣ ನುಂಗಿ ನೀರು ಕುಡಿದರೆ, ಕಡೂರು ಕ್ಷೇತ್ರದಲ್ಲಿ ಮತೀಯವಾದಿಗಳ ರಾಜಕಾರಣ ಏನೇನೂ ನಡೆಯಲಿಲ್ಲ. ಕಡೂರು ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಸದಾ ಯೋಚಿಸುತ್ತಿದ್ದ ಕೃಷ್ಣಮೂರ್ತಿ ತನ್ನ ರಾಜಕೀಯ ವಿರೋಧಿಗಳನ್ನೂ ನಗುತ್ತ ವಿಶ್ವಾಸದಿಂದಲೇ ಮಾತನಾಡಿಸುತ್ತಿದ್ದರಿಂದ ಕೃಷ್ಣಮೂರ್ತಿ ಎದುರು ಓಂಕಾರಮೂರ್ತಿ, ವೀರಭದ್ರಪ್ಪ, ದತ್ತ ಇಂಥವರೂ ಬೆಳೆಯಲಾಗಲಿಲ್ಲ. ಇಡೀ ರಾಜ್ಯದಲ್ಲಿ ದಳ ಧೂಳೀಪಟವಾದರೂ ಯಾರ ಸಹಾಯವೂ ಇಲ್ಲದೆ ಕೃಷ್ಣಮೂರ್ತಿ ಗೆದ್ದು ಬರುತ್ತಿದ್ದರು.

ಕೃಷ್ಣಮೂರ್ತಿಯ ರಾಜಕಾರಣದ ಆರಂಭ ಅಷ್ಟು ಸರಳವಾಗಿರಲಿಲ್ಲ, ಅವರ ಸುತ್ತಲೂ ಇದ್ದ ಒಂದಿಷ್ಟು ತೋಳು ತಿಮಿರಿನ ಸಂಬಂಧಿಗಳಿಂದ ಕೃಷ್ಣಮೂರ್ತಿಯೂ ಅಂತಹವನೇ ಇರಬಹುದೆಂದು ಜನ ಭಾವಿಸಿ ಪ್ರಥಮ ಚುನಾವಣೆಯಲ್ಲಿ ಅವರು ಸೋಲಬೇಕಾಯ್ತು.

ತಮಾಷೆಯೆಂದರೆ ಆ ಚುನಾವಣೆಯಲ್ಲಿ ಅವರು ಗೆದ್ದಾಯ್ತು, ಎಣಿಕೆಗೆ ಇನ್ನು ಒಂದೇ ಒಂದು ಬೂತಿತ್ತು, ಅದೂ ಟೌನ್ ಬೂತು. ಅದರಲ್ಲಿ ಲೀಡೇ ಬಂದಿರುತ್ತದೆ. ಎಂದ ಅಭಿಮಾನಿಗಳು ಮೆರವಣಿಗೆ ಕರೆದುಕೊಂಡು ಹೊರಟರು. ಅಷ್ಟರಲ್ಲಿ ಓಡಿ ಬಂದ ಕೆಲವರು "ಇಪ್ಪತ್ತು ಓಟಲ್ಲಿ ಹೋಗಿಬುಟ್ಟೆ ಕಣಣ್ಣ" ಎಂದು ಅಳತೊಡಗಿದರು. ಆ ಕೂಡಲೇ ಅದು ಶೋಕ ಮೆರವಣಿಗೆಯಾಗಿ ಮಾರ್ಪಟ್ಟು ಮನೆ ತಲುಪಿತು.

ಆ ನಂತರ ನಡೆದ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಗೆದ್ದ ಕೃಷ್ಣಮೂರ್ತಿ ಪ್ರಥಮ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಾದರು. ಆಗ ದಲಿತ ಸಂಘರ್ಷ ಸಮಿತಿ ನಾಯಕ ಎಂ.ಡಿ. ಗಂಗಯ್ಯ, ಸಿಪಿಐನ ಬಿ.ಕೆ. ಸುಂದರೇಶ್‌ರಂತಹ ಹೋರಾಟಗಾರರನ್ನೆಲ್ಲಾ ವಿಶ್ವಾಸದಿಂದಲೇ ನಿಭಾಯಿಸಿದ ಕೃಷ್ಣಮೂರ್ತಿ ನಾವು ತಿಳಿದಂತಲ್ಲ, ಸ್ನೇಹಶೀಲ ರಾಜಕಾರಣಿ ಎಂಬುದು ಜನರಿಗೆ ಮನವರಿಕೆಯಾಯ್ತು. ಆನಂತರ ಒಂದು ಆಕಸ್ಮಿಕ ಸೋಲು ಬಿಟ್ಟರೆ ಸತತವಾಗಿ ಗೆದ್ದು ಬಂದ ಕೃಷ್ಣಮೂರ್ತಿ ಕಡೂರು ಕ್ಷೇತ್ರವನ್ನು ಅಭಿವೃದ್ಧಿಗೊಳಿಸಿದರು. ಮಂತ್ರಿಗಳನ್ನು ಹೊಗಳಿ ಕ್ಷೇತ್ರಕ್ಕೆ ಕರೆದು ಸನ್ಮಾನಿಸುವುದು, ಭೂತಾಕಾರದ ಮಂತ್ರಿಗಳನ್ನು ಕೂಡ ಸುರಸುಂದರಾಂಗ ಎಂದು ಹೊಗಳಿ ಒಳಗೇ ನಗುವ ಚೇಷ್ಟೆಗಳೆಲ್ಲಾ ಕೃಷ್ಣಮೂರ್ತಿಯಲ್ಲಿ ಹೇರಳವಾಗಿದ್ದವು. ಅವರು ತುಂಬ ದೈವಭಕ್ತರಾಗಿದ್ದರೂ ಮತೀಯವಾದಿಗಳನ್ನ ಕಂಡರಾಗುತ್ತಿರಲಿಲ್ಲ, ಆದರೂ ಅವರನ್ನು ಮೈಮೇಲೆ ಕೆಡವಿಕೊಳ್ಳದೆ ನಯವಾಗಿಯೇ ನಿಭಾಯಿಸುತ್ತಿದ್ದರು. "ಬ್ರಾಹ್ಮಣನೊಬ್ಬ ಆರೆಸೆಸ್ ಆದ್ರೆ ಅಂತ ತೊಂದ್ರೆಯಿಲ್ಲ ಕಣಣ್ಣ, ಆದರೆ ಒಬ್ಬ ಕುರುಬ ಆರೆಸ್ಸೆಸೊ, ಭಜರಂಗಿನೊ ಆದ್ರೆ ಭಾಳ ಡೈನ್‌ಜರ್ ಕಣಣ್ಣ" ಎನ್ನುತ್ತಿದ್ದರು. ಈ ಹಿಂದೆ ನಡೆದ ತಾರಾತಿಗಡಿ ರಾಜಕಾರಣದ ದೆಸೆಯಿಂದ ಕಾಂಗ್ರೆಸ್‌ಗೆ ಹೋದ ಕೃಷ್ಣಮೂರ್ತಿಯನ್ನು ಏನಾದರೂ ಮಾಡಿ ಮಂತ್ರಿ ಮಾಡಿ ನೋಡಬೇಕೆನ್ನುವ ಜನಗಳ ಆಸೆ ಕಮರಿ ಹೋದದಕ್ಕೇನೋ ಅವರ ಆಕ್ರಂದನ ಮುಗಿಲುಮುಟ್ಟಿತ್ತು.


ಸದ್ಯದ ಸರ್ಕಾರದಲ್ಲಿರುವ ಮಂತ್ರಿಗಳು ಮತ್ತವರ ಖ್ಯಾತಿಯನ್ನು ನೋಡಿದರೆ ಶಾಸಕನಾದವನು ಮಂತ್ರಿಗಳಾಗಬೇಕೆನ್ನುವ ಹಂಬಲವಿಟ್ಟುಕೊಳ್ಳುವುದು ಎಷ್ಟು ಹಾಸ್ಯಾಸ್ಪದ ಅಲ್ಲವೆ?

● ಬಿ. ಚಂದ್ರೇಗೌಡ

ಮಂಗಳೂರು: ಮರಳು ಮಾಫಿಯಾಕ್ಕೆ ಮಂತ್ರಿ ಪಾಲೇಮಾರನೇ ಡಾನ್


ಅಕ್ರಮ ಮರಳು ಸಂಗ್ರಹ...

ಸಾಕ್ಷಾತ್ ಜಿಲ್ಲಾ ಉಸ್ತುವಾರಿ ಮಂತ್ರಿಜೀಯೇ ಮರಳು ಮಾಫಿಯಾದ ಗಾಡ್‌ಫಾದರ್ ಆಗಿರುವಾಗ ಅಧಿಕಾರಿಗಳಾದರೂ ಏನು ಮಾಡಿಯಾರು? ಸಿಕ್ಕಷ್ಟು ಕಿಸೆಗೆ ತುಂಬಿಕೊಂಡು ಜನರ ಕಣ್ಣಿಗೆ ಮಣ್ಣೆರಚಲು ಆಗಾಗ ಮಂತ್ರಿ ಮಾಫಿಯಾದಲ್ಲಿಲ್ಲದ ಮರಳು ವ್ಯಾಪಾರಿಗಳ ಅಡ್ಡೆ ಮೇಲೆ ರೇಡು ಹಾಕುತ್ತಾರೆ ಈ ಸರ್ಕಾರಿ ಅಧಿಕಾರಿಗಳು. ಗಣಿ ಇಲಾಖೆಯ ಉಪ ನಿರ್ದೇಶಕ ರವೀಂದ್ರ ಮಂತ್ರಿ ಮಾಫಿಯಾದವರು ತೋರಿಸುವ ಅಕ್ರಮ ಮರಳು ಲಾರಿಗಳನ್ನಷ್ಟೇ ಹಿಡಿಯುವ ಡ್ಯೂಟಿ ಹವ್ಯಾಸ ಬೆಳೆಸಿಕೊಂಡುಬಿಟ್ಟಿದ್ದಾರೆ.


ಪಾಲೇಮಾರ್

ಮಂಗಳೂರು ಮರಳು ಮಾಫಿಯಾಕ್ಕೆ ಅಪ್ಪ ಯಾರು? ಈ ಕೋಟ್ಯಂತರ ರೂಪಾಯಿಗಳ ಅಕ್ರಮ ಮರಳುಗಾರಿಕೆ ಹಿಂದೆ 'ದೇಶಭಕ್ತ' ಸಿಎಂ ಯಡ್ಡಿಯ ಹೀನ ಸುಳಿಯ ಮಂತ್ರಿಯೊಬ್ಬ ಇದ್ದಾನಾ? ಮಂತ್ರಿಯಂಥ ಸರ್ವಶಕ್ತನ ಕೃಪೆಯಿಲ್ಲದೆ ರಾಜ್ಯದ ಸಂಪತ್ತು ಲೂಟಿ ಹೊಡೆವ, ತೆರಿಗೆ ವಂಚಿಸುವ ಧೈರ್ಯ ಮರಳು ಸಾಗಾಣಿಕೆದಾರರಿಗೆ ಬರಲು ಸಾಧ್ಯವಾ? ಅಂತರ್ ರಾಜ್ಯ ಮರಳು ಸಾಗಾಣಿಕೆ ನಿಷೇಧ ಧಿಕ್ಕರಿಸಿ ದಿನವೂ ಕೋಟಿ-ಕೋಟಿ ಎಣಿಸುವ ತಾಕತ್ತು ಈ ತಿರುಬೋಕಿಗಳಿಗೆಲ್ಲ ಬಂದಿದ್ದಾದರೂ ಹೇಗೆ?

ಇಂಥ ಪ್ರಶ್ನೆಗಳು ಕಳೆದೆರಡು ವರ್ಷದಿಂದ ಕರಾವಳಿಗರ ತಲೆ ತಿನ್ನುತ್ತಲೇ ಇತ್ತು, ಮೊನ್ನೆ ಜುಲೈ 16 ರಂದು ಈ ಅನುಮಾನಗಳಿಗೊಂದು ಸ್ಪಷ್ಟ ಉತ್ತರ ಸಿಕ್ಕಿದೆ! ದಕ್ಷಿಣ ಕನ್ನಡದ ಉಸ್ತುವಾರಿ ಮಂತ್ರಿ ಕೃಷ್ಣ ಪಾಲೇಮಾರ್ ಎಂಬ ದಗಲುಬಾಜಿ ದಂಧೆ ಧೀರನೇ ಮಂಗಳೂರು ಮರಳು ಮಾಫಿಯಾದ 'ಡಾನ್' ಎಂಬುದು ಸಂಶಯಾತೀತವಾಗಿ ಸಾಬೀತಾಗಿದೆ!! ಬಳ್ಳಾರಿ ಕಬ್ಬಿಣದ ಅದಿರು ಮಾಫಿಯಾದಷ್ಟೇ ಅನಾಹುತಕಾರಿಯಾಗಿ ಬೆಳೆಯುತ್ತಿರುವ ಮಂಗಳೂರು ಮರಳು ಮಾಫಿಯಾದ ಮಹಾ ಪೋಷಕನೇ ಈ ಮಿನಿಸ್ಟರ್ ಪಾಲೇಮಾರ್ ಎಂಬುದೀಗ ಸಾಕ್ಷ್ಯಾಧಾರ ಸಮೇತ ಬಯಲಾಗುತ್ತಿವೆ....

ದೋ ನಂಬರ್ ದಂಧೆ

ಮಂಗಳೂರಿನ ಆಸುಪಾಸಿನ ನೇತ್ರಾವತಿ, ಫಲ್ಗುಣಿ ಮುಂತಾದ ನದಿಗಳಿಂದ ಅವ್ಯಾಹತವಾಗಿ ಅಪಾರ ಮರಳು ಎತ್ತಲಾಗುತ್ತಿದೆ. ಪ್ರೋಕ್ ಲೇನ್, ಜೆಸಿಬಿಗಳಂಥ ಯಮ ಯಂತ್ರಗಳ ಬಳಸಿ ಭರ್ಜರಿ-ಭಯಾನಕವಾಗಿ ಮರಳುಗಾರಿಕೆ ನಡೆಸಲಾಗುತ್ತಿದೆ. ಹೀಗೆ ನದಿಗಳಿಂದ ತೆಗೆಯಲಾಗುತ್ತಿರುವ ಮರಳು ಅವಳಿ ಜಿಲ್ಲೆಗಳ ಬೇಡಿಕೆಗಿಂತಲೂ ಹೆಚ್ಚು! ಜೊತೆಗೆ ಬೇರೆ ರಾಜ್ಯಗಳಿಗೆ ಮರಳು ಸಾಗಿಸದಂತೆ ರಾಜ್ಯ ಸರ್ಕಾರದ ಬ್ಯಾನ್ ಬೇರೆಯಿದೆ. ಆದರೂ ಜನಸಾಮಾನ್ಯರ ಮನೆ-ಶಾಲೆ-ಆಸ್ಪತ್ರೆ ಇತ್ಯಾದಿ ಕಟ್ಟಡ ನಿರ್ಮಾಣಕ್ಕೆ ಮಾತ್ರ ಮರಳು ಸಿಗುತ್ತಿಲ್ಲ!!

ಈ ಮರಳು ಅಭಾವ ಮಂಗಳೂರು ಭಾಗದಲ್ಲಿ ದೊಡ್ಡ ಹಾಹಾಕಾರವನ್ನೇ ಸೃಷ್ಟಿಸಿಬಿಟ್ಟಿದೆ. ಬಿಲ್ಡರ್ ಮಾಫಿಯಾದ ನಂಟಿನ ಮರಳು ಮಾಫಿಯಾ ತಲೆಯೆತ್ತಿರುವುದೇ ಈ ಕೃತಕ ಕೊರತೆಗೆ ಕಾರಣವೆಂಬ ಕೂಗೆದ್ದಿದೆ. ಮರಳು ಮಾಫಿಯಾ ಪಕ್ಕದ ಕೇರಳಕ್ಕೆ ಕಳ್ಳ ಸಾಗಾಣಿಕೆ ಮಾಡಲು ಮತ್ತು ಸ್ಥಳೀಯ ಬಿಲ್ಡರ್ಸ್ ಮಾಫಿಯಾಕ್ಕೆ ಮಾರಲೆಂದು ಲಕ್ಷಾಂತರ ಟನ್ ಮರಳು ಸ್ಟಾಕ್ ಮಾಡುತ್ತಿರುವುದೇ ಸಮಸ್ಯೆಗೆಲ್ಲ ಮೂಲವೆಂಬುದು ಎಲ್ಲರಿಗೂ ಗೊತ್ತಿರುವ ರಹಸ್ಯ.

ಸರ್ಕಾರದ ಅಧಿಕೃತ ಪರ್ಮಿಟ್ ಇಲ್ಲದ ಈ ದೋ ನಂಬರ್ ದಂಧೆ ಜಾಲದಲ್ಲಿ ಆಡಳಿತಾರೂಢ ಬಿಜೆಪಿಯ ಕಾರ್ಯಕರ್ತರು, ಜನಪ್ರತಿನಿಧಿಗಳೇ ಜಾಸ್ತಿ! ಈ ಮರಳು ಮಾಫಿಯಾ ಗ್ಯಾಂಗಿನಲ್ಲಿರುವವರೆಲ್ಲ ಮಂತ್ರಿ ಪಾಲೇಮಾರ್‌ನ ಅತ್ಯಾಪ್ತ ಸಹಚರರು. ಕೇರಳದಲ್ಲಿ ಮರಳುಗಾರಿಕೆ ನಿಷೇಧಿಸಲ್ಪಟ್ಟಿರುವುದು ಮತ್ತು ಕರ್ನಾಟಕ ಸರ್ಕಾರದ ಕಪಟ ಕಂಟ್ರೋಲ್ ವ್ಯವಸ್ಥೆಯನ್ನು ಹಗಲು ದರೋಡೆಗೆ ಅನುಕೂಲಕರವಾಗಿ ಬಳಸಿಕೊಳ್ಳುತ್ತಿದ್ದಾರೆ ಪಾಲೇಮಾರ್ ಪಟಾಲಮ್‌ನ ಮರಳು ಕಳ್ಳರು!

ಇದು ಕೋಟ್ಯಂತರ ರೂಪಾಯಿಗಳ ಕಳ್ಳ ವ್ಯವಹಾರ. ಪ್ರತಿ ದಿನ ಕಡಿಮೆಯೆಂದರೂ ಒಂದು ನೂರು ಮರಳು ತುಂಬಿದ ಲಾರಿಗಳು ಅಕ್ರಮವಾಗಿ ಕೇರಳಕ್ಕೆ, ರಾಜಾರೋಷವಾಗೇ ಹೋಗುತ್ತವೆ. ಸುಮಾರು ಹತ್ತು ಟನ್ ಹೊಯ್ಗೆಯ ಒಂದು ಲಾರಿ ಲೋಡಿಗೆ ಮಂಗಳೂರು ಸುತ್ತಮುತ್ತ ಹೆಚ್ಚೆಂದರೆ 2-2½ ಸಾವಿರ ರೇಟಿದೆ. ಅದೇ ಮರಳಿಗೆ ಕೇರಳದಲ್ಲಿ 12 ಸಾವಿರ ಸಿಗುತ್ತದೆ. ಬರೋಬ್ಬರಿ 10 ಸಾವಿರ ಲಾಭ!! ಹೀಗಾಗಿ ಈ ಮರಳು ಮಾಫಿಯಾದಲ್ಲಿ ಸಂಘ ಪರಿವಾರದ ದೇಶಭಕ್ತರು, ಮಂತ್ರಿಗಳು, ಶಾಸಕರು, ಸಂಸದರು, ಅವರ ನಿಷ್ಠಾವಂತ ಕಂದಾಯ, ಪೊಲೀಸ್ ಮತ್ತು ಗಣಿ-ಭೂವಿಜ್ಞಾನ ಇಲಾಖೆಯ ಅಧಿಕಾರಿ ಗಣ ಸೇರಿಕೊಂಡಿದೆ.

ಪಾಲೇಮಾರ್ ಮೇಲೇ ರೇಡು

ಸಾಕ್ಷಾತ್ ಜಿಲ್ಲಾ ಉಸ್ತುವಾರಿ ಮಂತ್ರಿಜೀಯೇ ಮರಳು ಮಾಫಿಯಾದ ಗಾಡ್‌ಫಾದರ್ ಆಗಿರುವಾಗ ಅಧಿಕಾರಿಗಳಾದರೂ ಏನು ಮಾಡಿಯಾರು? ಸಿಕ್ಕಷ್ಟು ಕಿಸೆಗೆ ತುಂಬಿಕೊಂಡು ಜನರ ಕಣ್ಣಿಗೆ ಮಣ್ಣೆರಚಲು ಆಗಾಗ ಮಂತ್ರಿ ಮಾಫಿಯಾದಲ್ಲಿಲ್ಲದ ಮರಳು ವ್ಯಾಪಾರಿಗಳ ಅಡ್ಡೆ



ಮೇಲೆ ರೇಡು ಹಾಕುತ್ತಾರೆ ಈ ಸರ್ಕಾರಿ ಅಧಿಕಾರಿಗಳು. ಗಣಿ ಇಲಾಖೆಯ ಉಪ ನಿರ್ದೇಶಕ ರವೀಂದ್ರ ಮಂತ್ರಿ ಮಾಫಿಯಾದವರು ತೋರಿಸುವ ಅಕ್ರಮ ಮರಳು ಲಾರಿಗಳನ್ನಷ್ಟೇ ಹಿಡಿಯುವ ಡ್ಯೂಟಿ ಹವ್ಯಾಸ ಬೆಳೆಸಿಕೊಂಡುಬಿಟ್ಟಿದ್ದಾರೆ.

ಇಂಥ ಮಂತ್ರಿ ಪಾಲೇಮಾರ್‌ನ ಗುಲಾಮನಂಥ ಗಣಿ ಅಧಿಕಾರಿ ರವೀಂದ್ರ ಗಡಿಬಿಡಿಯಲ್ಲಿ "ದಾರಿ" ತಪ್ಪಿಬಿಟ್ಟರು, ಪಾಪ! ಈ ರವೀಂದ್ರ ಮೊನ್ನೆ ಜುಲೈ 16 ರಂದು ಮಂಗಳೂರಿನ ಮೇರಿ ಹಿಲ್‌ನಲ್ಲಿರುವ ವಿಕಾಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಆವರಣದಲ್ಲಿದ್ದ ಮರಳು ಗು[illegible] ಮೇಲೆ ರೇಡು ಬಿದ್ದರು. ಯಾರೋ ಅಲ್ಲಿ ಅಕ್ರ[illegible] ಮರಳಿದೆಯೆಂದು ಕೊಟ್ಟ ಮಾಹಿತಿ ಹಿಡಿದುಕೊಂ[illegible] ದಾಳಿಗೆ ಹೋಗಿದ್ದ ರವೀಂದ್ರ ಹುಲಿ ಬೋನಿಗೆ ಹೋದಂತ[illegible] ತತ್ತರಿಸಿ ಹೋದರು!

ಆ ವಿಕಾಸ್ ಫಿಜಿಯೋ ಥೆರಪಿ ಕಾಲೇಜು ಸ್[illegible] ಬಿಲ್ಡರ್ ಆಗಿರುವ ಮಂತ್ರಿ ಪಾಲೇಮಾರ್‌ದು! ಕಾಲೇಜು-ಅಲ್ಲಿದ್ದ ಸುಮಾರು 4000 ಟನ್ ಮರ[illegible] ಮಂತ್ರಿಜೀದೆಂದು ಗೊತ್ತಾಗದ ರವೀಂದ್ರ ಮಾಧ್ಯಮದವ[illegible] ಜತೆಯಲ್ಲಿಟ್ಟುಕೊಂಡು ರೇಡು ಬಿದ್ದಾಗಿತ್ತು. ಈ ಅಕ್ರ[illegible] ಮರಳು ಸೀಜ್ ಮಾಡಬೇಕೆನ್ನುವಷ್ಟರಲ್ಲಿ ಅಲ್ಲಿಗೆ ಮ[illegible] ಪಾಲೇಮಾರ್‌ನ ಖಾಸಗಿ ಆಪ್ತ ಸಹಾಯಕ ಹರೀಶ್ ಮ[illegible] ಮಂತ್ರಿಗಳ ವ್ಯಾವಹಾರಿಕ ದೋಸ್ತಿ ಪ್ರಭಾಶ್ಚಂದ್ರ ಮಂ[illegible] ಕೃಷ್ಣಕುಮಾರ್ ಮಯ್ಯ ಒಂದಿಷ್ಟು ಪುಂಡರ ಕಟ್ಟಿಕೊಂ[illegible] ಮರಳು ಅಡ್ಡೆಗೆ ಧಾವಿಸಿದರು!!

ಮಂತ್ರಿಗಳ ಆಪ್ತರನ್ನು ಕಂಡದ್ದೇ ಮೈನ್ಸ್ ಇಲಾಖೆ[illegible] ರವೀಂದ್ರ ಕಂಗಾಲಾಗಿ ಹೋದರು. ದಾಳಿಗೆಂ[illegible] ಹೋಗಿದ್ದ ತಹಸೀಲ್ದಾರ್ ಮಂಜುನಾಥ್‌ಗಂತೂ ಏ[illegible] ಮಾಡಬೇಕೆಂದೇ ಗೊತ್ತಾಗಲಿಲ್ಲ. ಪ್ರಭಾಶ್ಚಂದ್ರ "[illegible] ನನ್ನ ಮರಳು... ಸುಮಾರು 2000 ಟನ್ ಇ[illegible] ಇದಕ್ಕೆಲ್ಲ ರಾಯಲ್ಟಿ ತುಂಬಿದ್ದೇನೆ... ಎಲ್ಲ ಸಕ್ರ[illegible] ಕಾನೂನುಬದ್ಧ" ಎಂದು ರೋಪು ಹಾಕುತ್ತಿ[illegible] ಅಧಿಕಾರಿಗಳು ಅಸಹಾಯಕರಾಗಿ ಕಣ್‌ಕ[illegible] ಬಿಡುತ್ತಿದ್ದರು. ಮಂತ್ರಿಗಳ ಆಪ್ತ ಸಹಾಯಕನ ಎದ[illegible] ಮಂತ್ರಿಗಳ ಮಿತ್ರರನ್ನು ಪ್ರಶ್ನಿಸುವುದು ಈ ಹೇತ್ಲ[illegible] ಅಧಿಕಾರಿಗಳಿಂದ ಆಗಲೇ ಇಲ್ಲ.

ಕಳ್ಳರ ರಕ್ಷಕ

ಮಂತ್ರಿಯ ಆಪ್ತ ಸಹಾಯಕನ ಸಮ್ಮುಖದಲ್ಲಿ ತ[illegible] ನಡೆಸಲಾಗದೇ ಚಡಪಡಿಸಿದ ಅಧಿಕಾರಿಗಳು ಮಾಧ[illegible] ಪ್ರತಿನಿಧಿಗಳಿರುವುದರಿಂದ ಅನಿವಾರ್ಯವಾಗಿ "ದಾಖ[illegible] ತೋರಿಸಿ ಎಂದು ಪ್ರಭಾಶ್ಚಂದ್ರನನ್ನು ಕೇಳಬೇಕಾಗಿ ಬಂ[illegible] ಆತ ತಾನು ಈ ಮರಳನ್ನು ಅಡ್ಯಾರಿನ ನೇತ್ರಾವತಿ ನದಿಯ[illegible] ತಂದಿದ್ದೇನೆ. ಇದಕ್ಕಾಗಿ 2009 ರಲ್ಲಿ 10 ಸಾವಿರ ರಾಯ[illegible] ತುಂಬಿದ್ದೇನೆ. ವಿಕಾಸ್ ಕಾಲೇಜಿನ ಮೇಲಂತಸ್ತು ಕಟ್[illegible] ಕಾಮಗಾರಿಗೆಂದು ಇಲ್ಲಿ ಮರಳು ಸಂಗ್ರಹಿಸಲಾಗಿದೆ ಎಂ[illegible] ತಡಬಡಿಸುತ್ತಾ ಒಂದು ದಾಖಲೆ ತೋರಿಸಿದ.

ಅಡ್ಡ ಕಸುಬಿಯ ಆಲಾಪ

ಸಿಎಂ ಯಡ್ಡಿಯ ಬಂದರು ಮಂತ್ರಿ ಕೃಷ್ಣ ಪಾಲೇಮಾರ್ ಕಾಸು ಸಿಗುತ್ತದೆಂದರೆ ಯಾವ ಕೊಳಕು ಕಾರ್ಯಾಚರಣೆಗೂ ಹೇಸದ ಹಿಕಮತ್ತುಗಾರ! ಅಕ್ರಮ-ಅನ್ಯಾಯ-ಅನಾಚಾರ ಮತ್ತು ಅನೈತಿಕ ದಂಧೆಗಳಿಂದ ಅಪಾರ ದುಡ್ಡು ಕೂಡಿಹಾಕಿರುವ ಈ ಅಸಡ್ಡಾಳ ಆ ಪಾಪದ ಐಶ್ವರ್ಯದಿಂದ ಬಿಜೆಪಿಯ ಎಮ್ಮೆಲ್ಲೆ ಟಿಕೆಟ್, ಮಂತ್ರಿಗಿರಿ ಕೊಂಡುಕೊಂಡಿದ್ದಾನೆ. ಧನಾಧಾರಿತ ರಾಜಕಾರಣವನ್ನೇ ಜನಪರ ಎಂದು ಬಿಂಬಿಸುವ ಈ ನಾಲಾಯಕ್ ಇವತ್ತು ತನ್ನ ಜಾಯಮಾನಕ್ಕೆ ತಕ್ಕಂತೆ ಹಲವು ಹಗರಣ ಸೃಷ್ಟಿಸಿಕೊಂಡು "ಭಾನ್ಗಡಿ ಭೂಪ"ನೆಂದು ಕುಖ್ಯಾತನಾಗಿ ಹೋಗಿದ್ದಾನೆ.

ಮಂತ್ರಿಯಾದ ಮೇಲೂ ಪಾಲೇಮಾರ್ ಪೂರ್ವಾಶ್ರಮದ ಧಣಿ ದಗಲುಬಾಜಿ ದಂಧೆ ಬಿಟ್ಟಿಲ್ಲ, ಈಗಂತೂ ಅಧಿಕಾರ ಬಲದಿಂದ ಆತನ ಅಡ್ಡಕಸುಬಗಳಿಗೆ ಹೊಸ ಖದರು ಬಂದುಬಿಟ್ಟಿದೆ! ಕೆಎಸ್‌ಆರ್‌ಟಿಸಿ ಹಾಸನ ಘಟಕದ ಕಂಡಕ್ಟರ್ ಆಗಿದ್ದಾಗ ಪಾಲೇಮಾರ್ 12 ಪ್ರಯಾಣಿಕರಿಂದ ಹಣ ಪಡೆದು ಟಿಕೆಟ್ ಕೊಡದೆ ಡಿಸ್‌ಮಿಸ್ ಆಗಿದ್ದ! ಆ ಬಳಿಕ ಸೈಟೋದ್ಯಮ-ಚರ್ಮೋದ್ಯಮಗಳನ್ನೆಲ್ಲ ಶುರುಹಚ್ಚಿಕೊಂಡಿದ್ದ, ಅಧಿಕಾರಸ್ಥರ ದೌರ್ಬಲ್ಯ ಸ್ಟಡಿ ಮಾಡಿ ಅವರವರ ಟೇಸ್ಟಿಗೆ ತಕ್ಕಂತೆ ಸರಕು ಸಪ್ಲೈ ಮಾಡಿದ ಪಾಲೇಮಾರ್ ಹಣದ ಚೀಲ ಹಿಡಿದುಕೊಂಡು ಆರೆಸ್ಸೆಸ್ ಅಡ್ಡೆಗೆ ಪ್ರವೇಶ ಪಡೆದುಕೊಂಡುಬಿಟ್ಟ! ಸಮಯಕ್ಕೆ ತಕ್ಕಂತೆ ಬಣ್ಣ ಬದಲಿಸುವ ಈ ಊಸರವಳ್ಳಿಗೆ ಚಡ್ಡಿ ಡಾನ್ ಕಲ್ಲಡ್ಕ ಭಟ್ರಿಗೆ ಮಂಕುಬೂದಿ ಎರಚಲು ಹೆಚ್ಚು ಹೊತ್ತೇನೂ ಹಿಡಿಯಲಿಲ್ಲ.

ಮೊನ್ನೆ ಬೇಲೇಕೇರಿ ಬಂದರಿನಲ್ಲಾದ ಕಬ್ಬಿಣದ ಅದಿರು ಕಳ್ಳಸಾಗಾಣಿಕೆ ಪ್ರಕರಣದಲ್ಲಿ ಬಂದರು ಮಂತ್ರಿ ಪ್ರೋಟೋಕಾಲ್ ಬಳಸಿ ಪ್ರಾಮಾಣಿಕ-ಅಧಿಕಾರಿ ಗೋಕುಲ್‌ರ ಕಾಡಿದ್ದಕ್ಕೆ ಈತನ ತಲೆದಂಡ ಪಡೆದು ತನ್ನ ತಲೆ ಉಳಿಸಿಕೊಳ್ಳಲು ಯಡ್ಡಿ ಯತ್ನಿಸಿದ್ದರು. ಆತನನ್ನು ಬಚಾಯಿಸಿದ್ದೇ ಈ ಆರೆಸ್ಸೆಸ್ ರಿಂಗ್‌ಮಾಸ್ಟರ್‌ಗಳು. ಅದರ ಬೆನ್ನಿಗೇ ಪಾಲೇಮಾರ್ ಅಕ್ರಮ ಮರಳು ಕಳ್ಳ ಸಾಗಾಣಿಕೆ ಪ್ರಕರಣದಲ್ಲಿ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾನೆ. ಸ್ವತಃ ಬಿಲ್ಡರ್ ಆಗಿರುವ ಪಾಲೇಮಾರ್ ತನ್ನ ಒಡೆತನದ ವಿಕಾಸ್ ಎಜುಕೇಷನ್ ಟ್ರಸ್ಟ್ ಕಾಲೇಜಿನ ಆವರಣದಲ್ಲಿ ಸಾವಿರಾರು ಟನ್ ಅಕ್ರಮ ಮರಳು ಸ್ಟಾಕ್ ಮಾಡಿಕೊಂಡಿದ್ದು ಎಕ್ಸ್‌ಪ್ರೋಸ್ ಆಗುತ್ತಿದ್ದಂತೆಯೇ ಕಂಗಾಲುಬಿದ್ದು ತಾನು ಶುದ್ಧ ಸಂಭಾವಿತನೆಂದು ಆಲಾಪ ಶುರು ಮಾಡಿದ್ದಾನೆ.

ಆದರಾತ ಅದೆಷ್ಟೇ ಅರಚಾಡಿದರೂ ಸೀಜ್ ಮಾಡಲಾದ ಆತನ ಮರಳಿನ ಬಗ್ಗೆ ಸೂಕ್ತ ಸಮಜಾಯಿಷಿ ಕೊಡಲಾಗುತ್ತಿಲ್ಲ ಪಾಪ! ಪಕ್ಕಾ ಕಳ್ಳನಂತಾಡುತ್ತಿರುವ ಪಾಲೇಮಾರ್ ಈಗಂತೂ ಹಲವು "ಹಗರಣ ಪುರುಷ"ನಂತಾಗಿ ಹೋಗಿದ್ದಾ[illegible] ಭಯಂಕರ ಬಿಲ್ಡರ್ ಆಗಿದ್ದೂ ಸಚಿವನಾಗಿರುವ ಪಾಲೇಮಾರ್ ಶಾಸಕ ಸ್ಥಾ[illegible] ಅನರ್ಹತೆಗೆ ಯೋಗ್ಯನಾಗಿದ್ದಾನೆ! ಇದು ರೆಡ್ಡಿಗಳ 'ಆಫೀಸ್ ಆಫ್ ಪ್ರಾಫಿಟ[illegible] ಪ್ರಕರಣಕ್ಕೆ ಸಾಮ್ಯತೆಯಿರುವ ಕೇಸು!

ಪಾಲೇಮಾರ್ ಸಚಿವನಾಗಿ ತನ್ನ ಖಾಸಗಿ ಬಿಲ್ಡರ್ ಚಟುವಟಿಕೆ[illegible] ಅನುಕೂಲವಾಗುವಂತೆ ಸರ್ಕಾರಿ ಏಜೆನ್ಸಿಗಳ ಮೇಲೆ ಪ್ರಭಾವ ಬೀರು[illegible] ಸಾಧ್ಯತೆಗಳೇ ಹೆಚ್ಚು! ಆತನ ಸಾರ್ವಜನಿಕ ಹುದ್ದೆ (ಮಂತ್ರಿಗಿರಿ) ಮತ್[illegible] ಖಾಸಗಿ ಬಿಲ್ಡರ್ ಮಾಫಿಯಾ ದಂಧೆಗಳ ಧ್ಯೇಯೋದ್ದೇಶಗಳು ಸಮ[illegible] ತದ್ವಿರುದ್ಧ!! ಅಲ್ಲದೆ ಅಕ್ರಮ ಮರಳು ಮಾಫಿಯಾದ ದೊರೆಯಂ[illegible] ಸಂಶಯಕ್ಕೀಡಾಗಿ ನಂತರವೂ ಆತ ಮಂತ್ರಿಯಾಗಿ ಮುಂದುವರೆಯುವು[illegible] ನೈತಿಕತೆ ಮತ್ತು ಕಾನೂನಿನನ್ವಯ ಅಕ್ಷಮ್ಯ ಅಪರಾಧ!

ಈತನ 'ಶಾಸಕತ್ವ ಅರ್ಹತೆ' ಬಗ್ಗೆ ರಾಜ್ಯಪಾಲರು ಗಮನಹರಿಸಬೇಕ[illegible] ಹಾಗೆಯೇ ಮಾನ-ಮರ್ಯಾದೆ ಎಂಬುದೇನಾದರೂ ಸಿಎಂ ಯಡ್ಡಿಗಿದ್[illegible] ಈ ಕಳಂಕಿತನನ್ನು ಕ್ಯಾಬಿನೆಟ್‌ನಿಂದ ಒದ್ದೋಡಿಸಬೇಕು!

ಆದರಲ್ಲಿ ಬರೀ 330 ಟನ್ ಮರಳುಗಾರಿಕೆಗಷ್ಟೇ ಪರ್ಮಿಷನ್ ಇತ್ತು! ಅಲ್ಲದೆ ಕಾಲೇಜಿನ ಆವರಣದಲ್ಲಿದ್ದ ರಾಶಿರಾಶಿ ಮರಳಿಗೆ ಸಂಬಂಧಿಸಿದ ಯಾವ ದಾಖಲೆಯೂ ಆತನ ಬಳಿಯಿರಲಿಲ್ಲ. ತಮಾಷೆಯೆಂದರೆ, ವಿಕಾಸ್ ಕಾಲೇಜಿನ ಮೇಲಂತಸ್ತಿನ ಕಾಮಗಾರಿ ನಡೆಯುತ್ತಿಲ್ಲ. ತನ್ನ ಎಡವಟ್ಟು ಮಾತಿಂದ ತಾನೇ ಕಕ್ಕಾಬಿಕ್ಕಿಯಾದ ಪ್ರಭಾಶ್ಚಂದ್ರ ಮಯ್ಯ ಮತ್ತೆ ಮಾತಿಗೆ ತಿದ್ದು ಮಾಡಿದ. ನಗರದ ಬೇರೆ-ಬೇರೆ ಕಡೆ ನಡೆಯುತ್ತಿರುವ ತನ್ನ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಈ ಮರಳು ಎಂದೆಲ್ಲಾ ಆ ದಗಲುಬಾಜಿ ಬಿಲ್ಡರ್ಸ್ ಕಲುಬಿದ! ಅಷ್ಟೇ ಅಲ್ಲ ಈ ಮರಳಿನ ಪರ್ಮಿಟ್, ಇನ್ನಿತರ ದಾಖಲೆ ಕಳೆದುಕೊಂಡಿದ್ದೇನೆಂದು ಸುಳ್ಳು ಸುಬೂಬು ಹೇಳಿದ.

ಅಕ್ರಮ ಮರಳು ಸಂಗ್ರಹಿಸಿ ಸಿಕ್ಕಿಬಿದ್ದಿದ್ದ ಕಳ್ಳ ಮಯ್ಯನನ್ನು ಬಚಾವಾಗಿಸಲು ಗಣಿ-ಭೂವಿಜ್ಞಾನ ಇಲಾಖೆಯ ಎಡಿ ಮೇಂದ್ರನೇ ಬರಬೇಕಾಯ್ತು. ಕಳ್ಳನ ಹಿಡಿಯಲು ಬಂದಿದ್ದ ಈ ಅಧಿಕಾರಿ ಆ ಕಳ್ಳನನ್ನೇ ರಕ್ಷಿಸಲು ನಿಂತುಬಿಟ್ಟ! ಮಂತ್ರಿ ಪಾಲೇಮಾರ್‌ಗೆ ನಿಷ್ಠೆ ತೋರಿಸುವ ಭರದಲ್ಲಿ ಈ ಅಧಿಕಪ್ರಸಂಗಿ ಅಧಿಕಾರಿ ಮಾಡಿದ ಕರ್ತವ್ಯಲೋಕ ಅಕ್ಷಮ್ಯವೇ ಸರಿ! "ಮಯ್ಯ ಸಂಗ್ರಹಿಸಿರುವ ಮರಳಿನ ಅಧಿಕೃತ ದಾಖಲೆ ನಾನೇ ಮೂರು ದಿನದಲ್ಲಿ ಕೊಡುತ್ತೇನೆ. 330 ಟನ್ ಮರಳು ಸಾಗಣೆಯ ಟ್ರಿಪ್‌ಶೀಟ್ ನನ್ನ ಕಚೇರಿಯಿಂದ ಕೊಡುತ್ತೇನೆ. ಮರಳು ಗುತ್ತಿಗೆದಾರರು ಕೆಲವೊಮ್ಮೆ ಹೆಚ್ಚಿಗೆ ಮರಳು ಸಂಗ್ರಹಿಸುವುದು ಅಪರಾಧವಲ್ಲ... ಸಂಗ್ರಹದ ನಂತರ ರಾಯಲ್ಟಿ ತುಂಬಬಹುದು... ಹೀಗಾಗಿ ಕೆಲವೊಮ್ಮೆ ನಿಯಮ ಪಾಲನೆ ಸಾಧ್ಯವಾಗುವುದಿಲ್ಲ... ಆದರೆ ಮಯ್ಯ ಪ್ರತಿ ವರ್ಷ ಲಕ್ಷಾಂತರ ರೂ. ಮರಳುಗಾರಿಕೆ-ರಾಜಧಾನ ತಪ್ಪದೇ ತುಂಬುತ್ತ ಬಂದಿದ್ದಾರೆ..." ಎಂದೆಲ್ಲ ಅಕ್ರಮ ಮರಳು ಉದ್ಯಮಿ ಪರ ವಕಾಲತ್ತು ನಡೆಸಿಬಿಟ್ಟರು ಮಹೇಂದ್ರ ಸಾಹೇಬರು.


ಮಂಗಳೂರಿನ ಮರಳು ಮಾಫಿಯಾದ ಅನಾಹುತಕಾರಿ ಮಸಲತ್ತುಗಳನ್ನೆಲ್ಲ ಮಂತ್ರಿ ಪಾಲೇಮಾರ್ ಕಾಲೇಜಿನ ಆವರಣದಲ್ಲಿದ್ದ ಮರಳು ಗುಡ್ಡ ಮೇಲಿನ ದಾಳಿ ಪ್ರಕರಣ ಅನಾವರಣಗೊಳಿಸಿಬಿಟ್ಟಿದೆ. ದಾಳಿ ಹೊತ್ತಲ್ಲಿ ಕಾಣೆಯಾಗಿದ್ದ ದಾಖಲೆಗಳು ರಾತ್ರಿಯಾಗುತ್ತಿದ್ದಂತೆ ಸಿಕ್ಕಿವೆ! ವಿಕಾಸ್ ಕಾಲೇಜ್ ಕಾಂಪೌಂಡ್‌ನಲ್ಲಿದ್ದ ಮರಳು ಬರೀ 1000 ಟನ್ ಎಂದು ನಿರ್ಧರಿಸಲಾಗಿದ್ದು, ಇದರಲ್ಲಿ 850 ಟನ್ ಸಕ್ರಮ ಸಂಗ್ರಹ ಎಂದು ಅಧಿಕಾರಿಗಳು ಹೇಳಿದ್ದಾರೆ. ಉಳಿದ 150 ಟನ್ ಮಾತ್ರ ತೋರಿಕೆಗಷ್ಟೇ ಸೀಜ್ ಮಾಡಿದ್ದಾರೆ. ಅಲ್ಲಿಗೆ ಮಂತ್ರಿ ಪಾಲೇಮಾರ್ ಅಕ್ರಮ ಮರಳುಗಾರಿಕೆಯ ಕಿಂಗ್‌ಪಿನ್ ಎಂಬುದು ಜಗಜ್ಜಾಹೀರಾಗಿ ಹೋಗಿದೆ!!


ಮರಳು ಮಾಫಿಯಾ


ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ಕನ್ನ ಹಾಕುತ್ತ ಮರಳು ಸಂಪತ್ತನ್ನು ಲೂಟಿ ಮಾಡಿ ಅಕ್ರಮ ಐಶ್ವರ್ಯವಂತನಾಗುತ್ತಿರುವ ಮಂತ್ರಿ ಪಾಲೇಮಾರ್‌ನ ಮರಳು ಕಳ್ಳ ಸಾಗಾಣಿಕಾ ಬಳಗ ತುಂಬ ವ್ಯವಸ್ಥಿತವಾಗಿ ಕಾರ್ಯಾಚರಣೆ ನಡೆಸುತ್ತಿವೆ. ಪಾಲೇಮಾರ್‌ರ ಎಡಗೈ-ಬಲಗೈ ಬಂಟರಾದ ಮಧುಕಿರಣ್, ವಿಜಯ್‌ಕುಮಾರ್ ಶೆಟ್ಟಿ, ತಿಲಕ್ ರಾಜ್ ಮತ್ತು ಸುಧೀರ್ ಶೆಟ್ಟಿ ಎಂಬ ಕಾರ್ಪೊರೇಟರ್‌ಗಳು ಇಡೀ ಮಾಫಿಯಾ ದಂಧೆ ನಿಭಾಯಿಸುತ್ತಿದ್ದಾರೆ. ಇವರ ಜತೆ ವಿನೋದ್ ಹೆಗಡೆ, ಹರೀಶ್, ಸುಜಿತ್ ಆಳ್ವರಂಥ ಅಕ್ರಮ ಮರಳು ವ್ಯಾಪಾರಿಗಳೂ ಸೇರಿಕೊಂಡಿದ್ದಾರೆ. ಕಾರ್ಪೊರೇಟರ್‌ಗಳಾದ ದುಷ್ಟ ಚತುಷ್ಟಯರಿಗೆ ಕೇರಳದ ಮರಳು ಮಾಫಿಯಾದೊಂದಿಗೆ ನೇರ ಲಿಂಕುಗಳಿವೆ. ಕೇರಳದಲ್ಲಿ ದಂಧೆ ಕುದುರಿಸುವ ಫಾರೂಕ್ ಮತ್ತು ಫ್ರಾನ್ಸಿಸ್‌ಗಳಿಗೆ ಈ ಮಂಗಳೂರು ಕಾರ್ಪೊರೇಷನ್‌ನ ಗೌರವಾನ್ವಿತ ಮೆಂಬರ್‌ಗಳು ಮರಳು ಸಪ್ಲೈ ಮಾಡುತ್ತಾರೆ.


ಮಂಗಳೂರಿನ ಕಣ್ಣೂರು ಮಸೀದಿ ಹತ್ತಿರದ ಅಡ್ಯಾರು ಈ ಚೋರ ಕಾರ್ಪೊರೇಟರ್‌ಗಳ ಮರಳು ದಂಧೆಯ ಕೇಂದ್ರ. ಇಲ್ಲಿಯ ನೇತ್ರಾವತಿ ನದಿಯಿಂದ ಜೆಸಿಬಿ, ಹಿಟಾಚಿ ಮೂಲಕ ಈ ಗ್ಯಾಂಗ್ ಪ್ರತಿದಿನ ಲಕ್ಷಾಂತರ ಟನ್ ಮರಳು ಎತ್ತಿ ಲಾರಿಗೇರಿಸಿ ಕೇರಳಕ್ಕೆ ಕಳಿಸುತ್ತದೆ. ಚೆಕ್‌ಪೋಸ್ಟ್‌ಗಳಲ್ಲಿ ಮಂತ್ರಿ ಪಾಲೇಮಾರ್ ಗ್ಯಾಂಗಿನ ಲಾರಿಗಳಿಗೆ ವಿಶೇಷ ಗೌರವಾದರ! ಕೋಟಿಗಳ ಲೆಕ್ಕದಲ್ಲೇ ಈ ಮಾಫಿಯಾದ ಸಂಪಾದನೆ.

ಒಂದು ಕಾಲದಲ್ಲಿ ತಿರುಬೋಕಿಯಂತಿದ್ದ ಈ ಮಹಾನಗರ ಪಾಲಿಕೆ ಸದಸ್ಯರು ಇವತ್ತು ಕೋಟಿಗೆ ತೂಗುತ್ತಾರೆ. ಇವರ ವ್ಯವಹಾರ ನೋಡಿಕೊಳ್ಳುವ ತಾರಾನಾಥನೆಂಬುವವನೇ ಬರೀ ಎರಡೇ ವರ್ಷದಲ್ಲಿ ಕುಬೇರನಂತಾಗಿದ್ದಾನೆ. ಒಂದು ಹೊತ್ತಿನ ಗಂಜಿಗೆ ಪರದಾಡುತ್ತಿದ್ದ ಈ ತಾರಾನಾಥ ಕೆಲದಿನಗಳ ಹಿಂದಷ್ಟೇ 80 ಲಕ್ಷದ ಮನೆ ಕಟ್ಟಿಸಿ ರಹಸ್ಯವಾಗಿ ಗೃಹ ಪ್ರವೇಶ ಮುಗಿಸಿದ್ದಾನೆ.




ತಿಲಕರಾಜ್


ಸುಧೀರ್‌ಶೆಟ್ಟಿ


ವಿಜಯಕುಮಾರ್

ನೇವಲ್ ಬೇಸ್ ನೆಪ

ದಗಾಕೋರ ದಂಧೆಯಲ್ಲಿ ನಿಸ್ಸೀಮನಾದ ಬಿಲ್ಡರ್, ರಿಯಲ್ ಎಸ್ಟೇಟ್ ಉದ್ಯಮಿ ಪಾಲೇಮಾರ್ ಮಂತ್ರಿಯಾಗುತ್ತಲೇ ಆರಂಭವಾದ ಈ ಮರಳು ಮಾಫಿಯಾ ಇವತ್ತು ಸರ್ಕಾರವನ್ನೇ ನಿಯಂತ್ರಿಸುವಷ್ಟು ಶಕ್ತಿಮಾನ್ ಆಗಿದೆ! ಈ ಎರಡು ವರ್ಷದಲ್ಲಿ ಪಾಲೇಮಾರ್ ಕೃಪಾಶೀರ್ವಾದದ ಮರಳು ಮಾಫಿಯಾ ಮಾಡಿರುವ ದರೋಡೆ ಲೋಕಾಯುಕ್ತಕ್ಕೊಂದು ಚಾಲೆಂಜಿಂಗ್ ತನಿಖೆ ಆಗುವಂತಿದೆ. ಬಳ್ಳಾರಿ ಅದಿರು ಲಫಡಾದ ಹಲವು ಗುಣಲಕ್ಷಣಗಳೂ ಈ ಮರಳು ಗೋಲ್‌ಮಾಲ್‌ಗಿದೆ! ಮಂಗಳೂರಿನ ಮರಳು ಮಾಫಿಯಾದ ಕಾನೂನುಬಾಹಿರ ಕರಾಮತ್ತುಗಳಿಗೆಲ್ಲ ಲಾಭದಾಯಕ ಬ್ರೇಕ್ ಸಿಕ್ಕಿದ್ದು 2008 ರಲ್ಲಿ, ಕೇರಳದ ಕಣ್ಣೂರಿನ ಎಕ್ಕಿಮಲಾ ಎಂಬಲ್ಲಿನ ನೌಕಾನೆಲೆ ಅಕಾಡೆಮಿ ಕಾಮಗಾರಿಗೆಂದು ಈ ಮಂತ್ರಿ ಮಾಫಿಯಾ ಕೋಟ್ಯಂತರ ರೂಪಾಯಿಗಳ ಅಕ್ರಮ ಮರಳು ಕಳ್ಳ ಸಾಗಾಣಿಕೆ ಮಾಡಿತ್ತು. ಕಳ್ಳ ಸಾಗಾಣಿಕೆಗಾಗಿ ನೌಕಾ ಅಕಾಡೆಮಿ ಹೆಸರಲ್ಲೇ ಖೋಟಾ ದಾಖಲೆ ಸೃಷ್ಟಿಸಿರುವ ಮರಳು ಮಾಫಿಯಾ ಕ್ರಿಮಿನಲ್ ಪಾತಕ ಮಾಡಿದೆ!

ಕೇರಳದ ಗಡಿಯಲ್ಲಿರುವ ಮಂಗಳೂರಿನ ಮರಳು ಮಾಫಿಯಾಕ್ಕೆ ಭರ್ಜರಿ ಮಾರುಕಟ್ಟೆಯಿರುವುದು ಕೇರಳದ ಕಣ್ಣೂರಿನಲ್ಲಿ. ಆದರೆ ಮರಳು ಸಾಗಾಣಿಕೆಗೆ ಅಂತರ್ ರಾಜ್ಯ ಬ್ಯಾನ್ ಇರುವುದರಿಂದ ಈ ಮಾಫಿಯಾಕ್ಕೆ ಕಿರಿಕಿರಿಯಾಗಿತ್ತು. ಈ ಬ್ಯಾನ್‌ನಿಂದ ತಪ್ಪಿಸಿಕೊಳ್ಳಲು ನೇವಲ್ ಬೇಸ್ ಹೆಸರನ್ನು ಕ್ರಿಮಿನಲ್ ಚಾಲಾಕಿತನದಿಂದ ಬಳಸಿಕೊಂಡಿದೆ ಮರಳು ಮಾಫಿಯಾ. ನೇವಲ್ ಬೇಸ್ ಅಕಾಡೆಮಿಯ ಕಾಮಗಾರಿಗೆ ಮರಳು ಅಗತ್ಯವಿರುವುದರಿಂದ ನಿರ್ಬಂಧ ಸಡಿಲಿಸಿ ಮರಳು ಕಳಿಸುವಂತೆ ಕೋರುವ ಪತ್ರವೊಂದು ಜಿಲ್ಲಾ ಉಸ್ತುವಾರಿ ಮಂತ್ರಿ ಪಾಲೇಮಾರ್‌ಗೆ ಅಕಾಡೆಮಿಯಿಂದ "ಬರುವಂತೆ" ಮಾಡಲಾಗಿದೆ.

3.9.2008 ರಂದು ಎಕ್ಕಿಮಲಾ ನೇವಲ್ ಅಕಾಡೆಮಿಯ ಡೆಪ್ಯೂಟಿ ಡೈರೆಕ್ಟರ್ (ಕಂಟ್ರಾಕ್ಟ್) ಫಾರ್ ಚೀಫ್ ಇಂಜಿನಿಯರ್ ರೇಜಿ ಅಶೋಕ್ ಎಂಬಾತ ಮಂತ್ರಿ ಪಾಲೇಮಾರ್‌ಗೆ ಅಕಾಡೆಮಿಗೆ ಮರಳು ಕಳಿಸುವಂತೆ ಕೋರಿ ಪತ್ರ ಬರೆದಿದ್ದಾರೆ. ಈ ಪತ್ರವೇ ಅನುಮಾನಾಸ್ಪದವಾಗಿದೆ. ಭದ್ರತೆಗೆ ಸಂಬಂಧಿಸಿದ ಅಕಾಡೆಮಿಯಿಂದ ಬಂದ ಪತ್ರಕ್ಕೊಂದು ಸರಿಯಾದ ಮುದ್ರೆ, ವಿಶ್ವಾಸಾರ್ಹ ಒಕ್ಕಣೆಯೇ ಇಲ್ಲ. ಅಲ್ಲದೆ ಹಾಗೆ ಜಿಲ್ಲಾ ಉಸ್ತುವಾರಿ ಮಂತ್ರಿಗೆ ಪತ್ರ ಬರೆಯುವುದಿದ್ದರೆ ನೇವಲ್ ಅಕಾಡೆಮಿಯವರು ವಿಧಾನ ಸೌಧಕ್ಕೆ ಬರೆಯಬೇಕೇ ವಿನಃ ಮಂತ್ರಿಗಳ ಮಂಗಳೂರು ವಿಳಾಸಕ್ಕಲ್ಲ. ಆದರೆ ಈ ಪತ್ರ ಬಂದಿರುವುದು ಮಂಗಳೂರು ಸಿಟಿ ಕಾರ್ಪೊರೇಷನ್ ಕಟ್ಟಡದಲ್ಲಿರುವ ಪಾಲೇಮಾರ್ ಆಫೀಸಿಗೆ!

ಈ ಪತ್ರ ಫ್ಯಾಕ್ಸ್ ಆಗಿರುವುದು ನೇವಲ್ ಅಕಾಡೆಮಿ ಇರುವ ಕಣ್ಣೂರಿನ ಎಕ್ಕಿಮಲಾದಿಂದಲ್ಲ, ಕಾಸರಗೋಡಿನಿಂದ! ಇದೊಂದು ಮರಳು ಮಾಫಿಯಾ ತನ್ನ ದೋನಂಬರ್ ದಂಧೆಗೆ ನೆರವಾಗಲು ಸೃಷ್ಟಿಸಿದ ಪತ್ರವೆಂಬ ಗುಮಾನಿ ಎಂಥವರಿಗೂ ಕಾಡುತ್ತದೆ. ಈ ಪತ್ರಕ್ಕೆ ಜಿಲ್ಲಾ ಮಂತ್ರಿ ಪಾಲೇಮಾರ್ 12.9.08 ರಂದು ಪರಿಶೀಲಿಸಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್‌ಗೆ ಮರಳು ಸಾಗಾಣಿಕೆ ಬ್ಯಾನ್ ಸಡಿಲಿಸುವಂತೆ ಸೂಚಿಸಿದ್ದಾರೆ. ಆಗ ಮಹೇಶ್ವರ ರಾವ್ ಜಿಲ್ಲಾಧಿಕಾರಿಯಾಗಿದ್ದರು. ಒಂದು ಜಾನಿವಾಕರ್ ಹೆಂಡದ ಬಾಟಲಿ ಡಿಸಿ ಸಾಹೇಬರಿಗೆ ಕೊಟ್ಟರೆ ಎಂಥ ಅಕ್ರಮವನ್ನೂ ಸಕ್ರಮ ಮಾಡಿಕೊಳ್ಳಬಹುದಾದ ದಿನಗಳವು. ಡಿಸಿ ಮಹೇಶ್ವರ ರಾವ್ ನೇವಲ್ ಅಕಾಡೆಮಿ ನೆಪದಿಂದ ಕೇರಳಕ್ಕೆ ಮರಳು ಸಾಗಿಸಲು ಅವಕಾಶ ಕೊಟ್ಟರು; ಮಂತ್ರಿ ಪಾಲೇಮಾರ್ ಮರಳು ಮಾಫಿಯಾದ ರೊಟ್ಟಿ ತುಪ್ಪಕ್ಕೆ ಜಾರಿ ಬಿದ್ದಂತಾಯ್ತು!!

ಇಲ್ಲಿ ಗಮನಿಸಬೇಕಾದ ಮಹತ್ವದ ಒಂದಂಶವಿದೆ! ನೇವಲ್ ಅಕಾಡೆಮಿಯ ಕಾಮಗಾರಿಗಳೆಲ್ಲ ಈ ಅನುಮಾನಾಸ್ಪದ ಪತ್ರ ಪಾಲೇಮಾರ್‌ಗೆ ಬರುವುದಕ್ಕೆ ಒಂದು ವರ್ಷ ಮೊದಲೇ- ಅಂದರೆ, 11.9.2007 ರಲ್ಲೇ- ಮುಗಿದು ಹೋಗಿತ್ತು. ಇದೆಲ್ಲ ಗಮನಿಸಿದರೆ ಮರಳು ಮಾಫಿಯಾದ ಕೇರಳದ ಕಳ್ಳರಾದ ಫಾರೂಕ್-ಫ್ರಾನ್ಸಿಸ್ ಮತ್ತು ಮಂಗಳೂರಿನ ಸುಧೀರ್ ಶೆಟ್ಟಿ ಎಂಬ ಚೋರ ಬಳಗ ತಮ್ಮ ಕಳ್ಳಸಾಗಾಣಿಕೆ ಅನುಕೂಲವಾಗುವಂತೆ ಈ ಖೋಟಾ ಲೆಟರ್ ಸೃಷ್ಟಿಸಿದ್ದಾರೆಂಬ ಸಂಶಯ ಕಾಡುತ್ತದೆ!

ಈ ಖೋಟಾ ಪತ್ರದ ಆಧಾರದಲ್ಲಿ ಮಂಗಳೂರಿನಿಂದ ಕೇರಳದ ಕಣ್ಣೂರಿಗೆ 60 ಸಾವಿರ ಟನ್ ಮರಳು ಕಳಿಸಲಾಗಿದೆ. ಇದರಲ್ಲಿ ಪರ್ಮಿಟ್ ಇರುವುದು ಬರೀ 6 ಸಾವಿರ ಟನ್‌ಗಷ್ಟೇ! ಮಂಗಳೂರಿನ ಕಂಕನಾಡಿ ರೈಲ್ವೆ ಜಂಕ್ಷನ್‌ನಿಂದ 17 ಬೋಗಿಗಳ ವ್ಯಾಗನ್‌ನಲ್ಲಿ 7 ಟ್ರಿಪ್ ಮರಳು ಕಳಿಸಲಾಗಿದೆ. ಎಲ್ಲವೂ ಓವರ್‌ಲೋಡಾಗಿ ಹೋಗಿದೆ. ಅಂದರೆ ರೈಲು ಅಧಿಕಾರಿಗಳೂ ಮಂಗಳೂರು ಮರಳು ಮಾಫಿಯಾದ ಜತೆ ಶಾಮೀಲಾಗಿದ್ದಾರೆಂದಾಯ್ತು! ಇದೊಂದೇ ಕೋಟ್ಯಂತರ ರೂ.ಗಳ ಸ್ಕ್ಯಾಂಡಲ್!! ಮಂತ್ರಿ ಮಾಫಿಯಾ ಆರಂಭದಲ್ಲೇ ಬಂಪರ್ ಲಾಭ ಹೊಡೆದ ಕಾರ್ಯಕಾಂಡ!!

ಅಕ್ರಮ ಮರಳು ಅಡ್ಡೆಗಳು

ಕಣ್ಣೂರಿಗೆ ಅಕ್ರಮ ಮರಳು ಕಳಿಸುವ ವ್ಯವಹಾರದಲ್ಲಿ ರೈಲ್ವೆಗೆ 1.70 ಲಕ್ಷ ಲಾಸ್ ಆಗಿದೆ ಎಂದು ರೈಲ್ವೆ ವಲಯದಲ್ಲೇ ಗುಸುಗುಸುಗಳಿವೆ. ಇವತ್ತಿಗೂ ಕಂಕನಾಡಿ ರೈಲ್ವೆ ಜಂಕ್ಷನ್‌ನಲ್ಲಿ ಸುಮಾರು 2-3 ಸಾವಿರ ಟನ್ ಅಕ್ರಮ ಮರಳು ಸಂಗ್ರಹವಿದೆ. ಹೀಗೆ ರೈಲ್ವೆ ಜಾಗದಲ್ಲಿ ಮರಳು ಸಂಗ್ರಹಿಸಿಟ್ಟಿರುವುದು ಕಾನೂನುಬಾಹಿರ. ಸರಕು ಸಾಗಾಣಿಕೆಯ 24 ತಾಸು ಮೊದಲಷ್ಟೇ ಜಂಕ್ಷನ್‌ಗೆ ಸರಕು ತರಬೇಕೆಂಬುದು ನಿಯಮ. ಆದರೆ ಕೆಲವು ತಿಂಗಳಿಂದ ಮರಳು ಮಾಫಿಯಾ ಇಲ್ಲೇ ತಮ್ಮ ಮರಳಿಟ್ಟಿದೆ. ಇದು ಸೇಫ್ ಎಂಬ ಕಾರಣಕ್ಕೆ!

ಪಾಲೇಮಾರ್‌ನ ವಿಕಾಸ್ ಕಾಲೇಜು ಆವರಣದಲ್ಲಿ ಸರಿಯಾಗಿ ಅಳತೆ ಮಾಡಿದರೆ ಕಮ್ಮಿಯೆಂದರೂ 4000 ಟನ್ ಅಕ್ರಮ ಮರಳಿದೆ! ಹಾಗೆಯೇ ಆತನ ಒಡೆತನದ ಹೊಯ್ಗೆಬೈಲ್‌ನ ಆರೇಳು ಎಕರೆ ಪ್ರದೇಶದಲ್ಲಿ 25-30 ಸಾವಿರ ಟನ್ ಮರಳಿದೆ. ಇದು ಮೀನುಗಾರರ ಒತ್ತಾಯದಿಂದ ಬಂದರು ಹೂಳೆತ್ತಿದಾಗ ಸಿಕ್ಕ ಬೆಲೆಬಾಳುವ ಮರಳು. ಬಂದರು ಮಂತ್ರಿ ಪಾಲೇಮಾರ್ ಈ ಮರಳನ್ನು ಅನಾಮತ್ತಾಗಿ ಕಬಳಿಸಿ ತನ್ನ ಸೈಟ್‌ನಲ್ಲಿ ಸ್ಟಾಕ್ ಮಾಡಿದ್ದಾನೆ. ಕೇರಳದ ಮಾರ್ಕೆಟ್ ರೇಟಿನಲ್ಲಿ ಈ ಮರಳಿನ ಬೆಲೆ 4 ಕೋಟಿ ರೂ.ಗಳು. ಪಾಲೇಮಾರ್ ಮಹಿಮೆಗೆ ಎಣೆಯುಂಟೇ?!


ಇಸ್ರೋ ಹೆಸರಿನಲ್ಲಿ ಕಳ್ಳಾಟ!

ಈಗ ಕೇರಳದ ಇಸ್ರೋಗೆ ಮರಳು ಸಾಗಿಸುವ ಸ್ಕೆಚ್ ಈ ಮಾಫಿಯಾ ಹಾಕಿಕೊಂಡಿದೆ. ಡಿಸಿ ಪೊನ್ನರಾಜ್ ಇದಕ್ಕೆ ತಡೆ ಹಾಕಿದ್ದರು. ಆದರಾತ ತರಬೇತಿಗೆಂದು ವಿದೇಶಕ್ಕೆ ಹೋದಾಗ ಪ್ರಭಾರ ಜಿಲ್ಲಾಧಿಕಾರಿ ಪ್ರಭಾಕರ ಶರ್ಮಾ (ಎಚ್‌ಕ್ಯೂಎ)ನಿಂದ ಗೋಲ್‌ಮಾಲ್‌ಗೆ ಗ್ರೀನ್‌ಸಿಗ್ನಲ್ ಅನ್ನು ಮರಳು ಮಾಫಿಯಾ ಪಡೆದುಕೊಂಡಿದೆ. ಇದಕ್ಕೆ ಮಂತ್ರಿ ಪಾಲೇಮಾರ್‌ರ ಪವಾಡವೇ ಕಾರಣ! ಈ ಮರಳು ಇಸ್ರೋನ ತಿರುವನಂತಪುರಕ್ಕೆ ಹೋಗದೆ ಬೇರೆ ಎಲ್ಲಿಗೋ ಹೋಗುತ್ತಿದೆ.

ಮೀನುಗಾರಿಕಾ ಬಂದರುಗಳ ಡ್ರೆಜ್ ಮಾಡಿದಾಗ ಪುಕ್ಕಟೆ ಸಿಕ್ಕ ಮರಳನ್ನು ವಿಕಾಸ್ ಕಾಲೇಜು, ಕಂಕನಾಡಿ ರೈಲ್ವೆ ಜಂಕ್ಷನ್ ಮತ್ತು ಅಶೋಕನಗರದ ಹೊಯ್ಗೆಬೈಲ್ ಸೈಟ್‌ಗಳಲ್ಲಿ ಸಂಗ್ರಹಿಸಿರುವ ಪಾಲೇಮಾರ್ ಮಾಫಿಯಾ ಅದನ್ನು ನದಿಯಿಂದ ರಾಯಲ್ಟಿ ತುಂಬಿ ತೆಗೆದ ಮರಳೆಂದು ಹೇಳುತ್ತಿದೆ. ಬಂದರು ಮಂತ್ರಿಯೂ ಆಗಿರುವುದರಿಂದ ಈ ದಗಾಕೋರ ದಂಧೆಗೆ ಪಾಲೇಮಾರ್‌ಗೆ ಅನುಕೂಲವಾಗಿದೆ. ಬಂದರು ಇಲಾಖೆಗೂ ಮೋಸ!

ಹಲಾಲುಕೋರ ಪಾಲೇಮಾರ್ ಅದೆಷ್ಟು ರೀತಿಯಲ್ಲಿ ಸರ್ಕಾರಕ್ಕೆ ಮೋಸ-ವಂಚನೆ ಮಾಡುತ್ತಿದ್ದಾನೆಂಬುದು ಆತನ ಸಿಎಂ ಯಡ್ಡಿಗೂ ಗೊತ್ತಿದೆ. ಕರಾವಳಿಯ ಚೆಡ್ಡಿ ದೊರೆಗಳ ಆಸ್ಥಾನ ಸೇವಕನಾದ ಪಾಲೇಮಾರ್‌ನನ್ನು ವಿಚಾರಿಸಿಕೊಳ್ಳಲಾಗದ ದಯನೀಯ ಸ್ಥಿತಿ ಯಡ್ಡಿಯದು, ಪಾಪ! ಕರ್ನಾಟಕದ ಜನರನ್ನು ಯಡ್ಡಿ ಮತ್ತವರ ಮಂತ್ರಿಗಳಿಂದ ಆ ಶ್ರೀರಾಮನೇ ಪಾರು ಮಾಡಬೇಕಷ್ಟೇ! ಪಾಲೇಮಾರ್‌ನ ಈ ಮೆಗಾ ದಂಧೆಯತ್ತ ಲೋಕಾಯುಕ್ತರು ಗಮನ ಹರಿಸುವರೇ?

• ನಹುಶ


ಅಕ್ರಮವಾಗಿ ಮರಳು ಸಂಗ್ರಹಿಸಿದ ದಾಖಲೆ...



ಅನಾಮತ್ತು 50 ಕೋಟಿ ರೂಪಾಯಿ ಬೆಲೆಬಾಳುವ ಜಾಗ ಹೀಗೆ ಯಾರದೋ ಪಾಲಾಯಿತಲ್ಲ ಎಂದು ರೊಚ್ಚಿಗೆದ್ದ ನಂದೀಶ್ ರೆಡ್ಡಿ ಜೂನ್ 16 ರ ಸಂಜೆ ಫೈಲ್ ಸಮೇತ ತನ್ನ ಅಡ್ಡಾಗೆ ಬರುವಂತೆ ಆಶಾರಿಗೆ ಹೇಳಿದ್ದಾನೆ. ಅದರಂತೆ ತೆರಳಿದ ಆಶಾರ ಕೈಲಿದ್ದ ಫೈಲ್ ಕಿತ್ತುಕೊಂಡು ತನ್ನ ಚೇಲಾ ಲೋಹಿತ್‌ಗೆ ಕೊಟ್ಟಿದ್ದಾನೆ. ಅದರಿಂದ ಆತಂಕಗೊಂಡ ಆಶಾ ಫೈಲ್ ವಾಪಸ್ ತೆಗೆದುಕೊಳ್ಳಲು ಯತ್ನಿಸಿದಾಗ ಲೋಹಿತ್ ಫೈಲ್ ಸಮೇತ ಓಡಿಹೋಗಿದ್ದಾನೆ. ರೂಪೇಶ್‌ನ ಬೆನ್ನಟ್ಟಿದ ಆಶಾರನ್ನು ಶಾಸಕ ನಂದೀಶ್ ರೆಡ್ಡಿಯೇ ಅಡ್ಡಹಾಕಿ ಆಕೆಯ ಎರಡೂ ಕೈಗಳನ್ನು ಹಿಡಿದು ಎಳೆದಾಡಿದ್ದಾನೆ.

ಮಹಿಳಾ ಸರ್ಕಾರಿ ಅಧಿಕಾರಿಯೊಬ್ಬರ ಮೇಲೆ ದೈಹಿಕ ದೌರ್ಜನ್ಯ ನಡೆಸಿ, ಪ್ರಾಣ ಬೆದರಿಕೆ ಹಾಕಿರುವ ಶಾಸಕ ನಂದೀಶ್ ರೆಡ್ಡಿಯನ್ನು ಪೊಲೀಸರೇಕೆ ಬಂಧಿಸುತ್ತಿಲ್ಲ?

ಸಂತ್ರಸ್ತರಿಗೆ ಕೆಲ ದಶಕಗಳ ಹಿಂದೆಯೇ ಮಂಜೂರು ಮಾಡಲಾಗಿತ್ತು ಆದರೆ 1960-70 ರ ದಶಕದಲ್ಲಿ ಈಗಿರು ವಂತೆ ಬೆಂಗಳೂರು ಸುತ್ತಮುತ್ತ ಭೂಮಿಗೆ ಬೇಡಿಕೆ ಇರಲಿಲ್ಲ. ಹಾಗಾಗಿ ಭೂಮಂಜೂರಾತಿಯಾಗಿದ್ದರೂ ಫಲಾನುಭವಿಗಳು ಅಲ್ಲಿಗೆ ಕಾಲಿಟ್ಟಿರಲಿಲ್ಲ. ಈಗ ಅವರೂ ಎಚ್ಚೆತ್ತುಕೊಂಡಿದ್ದಾರೆ. ಅಂಥವರಿಗೆ ಅವರ ನ್ಯಾಯಬದ್ಧ ಹಕ್ಕು ಕೊಡಿಸಿಕೊಡುವ ಬದಲಾಗಿ ಆ ಇಡೀ 12 ಎಕರೆ ಜಮೀನನ್ನೇ ಕಬಳಿಸಲು ಶಾಸಕ ನಂದೀಶ್ ರೆಡ್ಡಿ ಹೊರಟಿದ್ದ. ಮತ್ತೊಂದೆಡೆ ತಹಶೀಲ್ದಾರ್ ಆಶಾ ಪರ್ವಿನ್ ಈ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದವರ ಪರ ನಿಂತರು.

ಈ ಸಂಘರ್ಷವೇ ಇತ್ತೀಚಿನ ಗಲಾಟೆಗಳಿಗೆ ಕಾರಣ ವಾಗಿರುವುದು. ಶಾಸಕ ನಂದೀಶನಿಗೆ ಗೂಸ, ಆಶಾ ಸಸ್ಪೆಂಡ್ ಪೊಲೀಸ್ ದೂರು ಈ ಎಲ್ಲಾ ಸಿನಿಮೀಯ ಘಟನೆಗಳು ನಡೆಯುತ್ತಿರುವುದು.

ಜನರ ಪಾಲಿಗೆ ಆಶಾ-ಶಾಸಕನಿಗೆ ನಿರಾಶ

2010 ರ ಮಾರ್ಚ್ ಒಂದನೇ ತಾರೀಖು ಕೆ.ಆರ್. ಪುರಂ ತಹಶೀಲ್ದಾರ್ ಆಗಿ ಆಶಾ ಪರ್ವಿನ್ ಬಂದಾಗ ಶಾಸಕ ನಂದೀಶ್ ರೆಡ್ಡಿ ಬೇಡ ಅಂದಿರಲಿಲ್ಲ. ಅದಕ್ಕೂ ಮೊದಲು ದೇವನಹಳ್ಳಿ ತಹಶೀಲ್ದಾರ್ ಆಗಿದ್ದ ಆಶಾ ಕೆಲ ವಿವಾದಗಳ ಕೇಂದ್ರಬಿಂದುವಾಗಿದ್ದರು. ಕೆಲ ಪುರೋಹಿತಶಾಹಿ ಪತ್ರಿಕೆಗಳಂತೂ ಆಶಾಗೆ ಇನ್ನಿಲ್ಲದ ಕಿರುಕುಳ ನೀಡಿದ್ದವು. ಆದರೆ ಈ ಆಶಾ ಪರ್ವಿನ್ ಏನು ಕಡಿಮೆಯಲ್ಲ. ಇವತ್ತಿನ ರಾಜಕೀಯ, ವರ್ಗಾ ಡೀಲುಗಳ ಮರ್ಮ, ಪುಢಾರಿಗಳ ಲೋಫರ್‌ಗಿರಿಗಳನ್ನೆಲ್ಲಾ ಕಂಡು, ಅರಗಿಸಿಕೊಂಡೇ ಬಂದಿರುವ ಮಹಿಳಾ ಅಧಿಕಾರಿ. ಆದರೆ ವಿಪರೀತ ಅನ್ನಿಸುವಷ್ಟು ಸ್ವಾಭಿಮಾನ, ದುಡುಕು ಮಾತು, ಆವೇಶಗಳ ಮಹಿಳೆಯೀಕೆ. 'ನೀನು' ಅಂದವನು ಯಾರೇ ಆಗಿರಲಿ 'ನಿಮ್ಮಪ್ಪ' ಅಂತ ಎದುರುತ್ತರ ಕೊಡದೆ ಸುಮ್ಮನಿರುವ ಪೈಕಿಯಲ್ಲ ಈಕೆ.

ಆಶಾ ಅವನ ಮಾತನ್ನು ನಿಜ ಅಂದುಕೊಂಡರು. ಆದರೆ ಕೆಲವೇ ದಿನದಲ್ಲಿ ನಂದೀಶ್ ರೆಡ್ಡಿ ಎಂತಹ ಬಕಾಸುರ ಎಂದು ಆಕೆಗೆ ಗೊತ್ತಾಯಿತು. ನಂದೀಶ್ ರೆಡ್ಡಿ ಕ್ಯಾಲಸನಹಳ್ಳಿಯ ಸರ್ವೆ ನಂಬರ್ 11 ರ ವಿಚಾರ ಎತ್ತಿದ. ಸರ್ಕಾರಿ ಗೋಮಾಳವಾಗಿರುವ ಈ ಜಮೀನು ದೊಡ್ಡ ವಿಸ್ತೀರ್ಣದ್ದು. ನಂದೀಶ್‌ಗೆ ಅದನ್ನು ಗುಳುಂ ಮಾಡಿಬಿಡ ಬೇಕೆಂಬ ದುರಾಶೆ ಹುಟ್ಟಿಕೊಂಡಿತ್ತು. ಅವನು ಆ ಜಮೀನಿನ ಫೈಲ್‌ಗಾಗಿ ಆಶಾರನ್ನು ಪೀಡಿಸಲು ಶುರು ಮಾಡಿದ. ಫೈಲ್ ಸ್ಟಡಿ ಮಾಡಿದ ಆಶಾರಿಗೆ ಅದೇ ಸರ್ವೆ ನಂಬರ್‌ನಲ್ಲಿ ಒಟ್ಟು 13 ಜನರಿಗೆ 1966 ರಲ್ಲೇ ಅಂದಿನ ಮೈಸೂರು ಸರ್ಕಾರ ಭೂಮಂಜೂರಾತಿ ನೀಡಿದ್ದು ಕಂಡುಬಂತು. ಅವರ ಪೈಕಿ ಪುಟ್ಟಸಿದ್ದಣ್ಣನಿಗೆ 3 ಎಕರೆ, ವಿಠಲರಾವ್‌ಗೆ 2, ಹತ್ತಿಘಟ್ಟ ಕೃಷ್ಣಮೂರ್ತಿಗೆ 2, ವೆಂಕಟಾಚಲಮ್ಮ ಎಂಬಾಕೆಗೆ 2 ಎಕರೆ, ಸುಬ್ಬಾರಾವ್‌ಗೆ 2 ಹಾಗೂ ನಾಮಲಕ್ಷ್ಮಿ ಎಂಬುವವರಿಗೆ 2 ಎಕರೆ ಮಂಜೂರಾಗಿ ಅವರೆಲ್ಲಾ ಆ ಭೂಮಿಗೆ ಸರ್ಕಾರಿ ಕಿಮ್ಮತ್ತು ಪಾವತಿಸಿ ಮಾಲೀಕರಾಗಿ ಬಿಟ್ಟಿದ್ದರು. ಉಳಿದಂತೆ ಎಸ್.ಎಸ್. ಹೆಗ್ಡೆ, ಎಚ್.ಆರ್. ಹೆಗ್ಡೆ ಅಂಕೋಲ್‌ಕರ್, ಯಾಜಿ, ಜಿ.ಎನ್. ಹೆಗ್ಡೆ (ದಿವಂಗತ ರಾಮಕೃಷ್ಣ ಹೆಗಡೆಯ ಖಾಸಾ ಸೋದರ), ಗೋವಿಂದ್ ಶಾನ್‌ಭಾಗ್ ಎಂಬುವರಿಗೆ ತಲಾ 5,4,3 ಎಕರೆಯಂತೆ ಸರ್ಕಾರ ಭೂಮಿ ಮಂಜೂರು ಮಾಡಿತ್ತು.



ನಂದೀಶ್ ರೆಡ್ಡಿ

ಕೀಚಕ ಶಾಸಕ ನಂದೀಶ್ ರೆಡ್ಡಿಗೆ ತಹಶೀಲ್ದಾರ್ ಆಶಾ ಒದೆ!

ಬೆಂಗಳೂರಿನ ಕೆ.ಆರ್. ಪುರಂನ ಶಾಸಕ ನಂದೀಶ್ ರೆಡ್ಡಿಗೆ ಲಾತ ಬಿದ್ದಿದೆ. ಅಲ್ಲಿನ ತಹಶೀಲ್ದಾರ್ 'ಹೆಣ್ಣು ಹುಲಿ' ಆಶಾ ಪರ್ವಿನ್ ಮೊನ್ನೆ ಜೂನ್ 16 ರಂದು ನಂದೀಶ್ ರೆಡ್ಡಿಯ ಮನೆಯಲ್ಲೇ ತನ್ನನ್ನು ಹಿಡಿದು ಎಳೆದಾಡಿದ ಶಾಸಕನನ್ನೇ ಎಡಗಾಲಲ್ಲಿ ಒದ್ದು ತಪ್ಪಿಸಿಕೊಂಡು ಬಂದಿದ್ದಾರೆ. ಅಂದಹಾಗೆ ಬೆಂಗಳೂರಿನ ಭಯಾನಕ ಭೂಗಳ್ಳ ನಂದೀಶ್ ರೆಡ್ಡಿ ಯಾವ ಪಾರ್ಟಿಯ ಶಾಸಕ ಅಂದಿರಾ?

ಅನುಮಾನವೇ ಬೇಡ...


ಅವನು ಬಿಜೆಪಿ!

ಈಗ ಕೆ.ಆರ್. ಪುರಂ ಪೊಲೀಸ್ ಸ್ಟೇಷನ್ನಿನಲ್ಲಿ ನಂದೀಶ್ ರೆಡ್ಡಿ ವಿರುದ್ಧ ತಹಶೀಲ್ದಾರ್ ಆಶಾ ಪರ್ವಿನ್ ಒಂದು ಕಂಪ್ಲೆಂಟ್ ಕೊಟ್ಟಿದ್ದಾರೆ. ಪ್ರಾಣ ಬೆದರಿಕೆ, ದೌರ್ಜನ್ಯ ಕೈಹಿಡಿದು ಎಳೆದಾಡುವುದು...

ಇವೆಲ್ಲಾ ಬಿಜೆಪಿ ನಾಯಕರೆನಿಸಿಕೊಂಡವರಿಗಿರುವ ಕಲ್ಯಾಣಗುಣಗಳೆ ತಾನೆ?

ಕೆ.ಆರ್. ಪುರಂ ತಹಶೀಲ್ದಾರ್ ಆಗಿದ್ದ ಆಶಾರನ್ನು ಈಗ ಸರ್ಕಾರ ಸಸ್ಪೆಂಡ್ ಮಾಡಿದೆ. ಯಡ್ಡಿಯ ಸಸ್ಪೆಂಡ್ ಆರ್ಡರ್ ಹಾಗೂ ಅದರ ವಿರುದ್ಧ ಕರ್ನಾಟಕ ಆಡಳಿತ ನ್ಯಾಯಮಂಡಳಿ ನೀಡಿರುವ ತಡೆಯಾಜ್ಞೆಯ ವಿವರ ನೋಡಿದರೆ....

ಯಡಿಯೂರಪ್ಪನಂಥ ಅವಿವೇಕಿ ಸಿಎಂ ಇನ್ನೊಬ್ಬರಿಲ್ಲ ಎನಿಸಿಬಿಡುತ್ತದೆ. ನಂದೀಶ್ ರೆಡ್ಡಿಯಂತಹ ಕೀಚಕನಿಗೆ ಇದೆಂತಹ ಕಪಾಳಮೋಕ್ಷ ಎಂದು ಗೊತ್ತಾಗುತ್ತದೆ. ಇಷ್ಟಕ್ಕೂ ಇದೊಂದು ಜಮೀನಿನ ಜಗಳ. ಅದರ ವಿವರಗಳಂತೂ ಈ ದೇಶಭಕ್ತ ನಾಯಕರು ಎಂತಹ ದಗಲ್‌ಬಾಜಿಗಳೆಂಬುದಕ್ಕೆ ಪುರಾವೆಯಾಗಿದೆ.



ಸ್ವಾತಂತ್ರ್ಯ ಹೋರಾಟಗಾರರಾದ ಅಂಕೋಲ್‌ಕರ್, ಜಿ.ಎನ್.ಹೆಗ್ಡೆ, ಎಸ್.ಎಸ್.ಯಾಜಿ

ಕೆ.ಆರ್. ಪುರಂ ತಾಲ್ಲೂಕಿನ ಕ್ಯಾಲಸನಹಳ್ಳಿಯ ಸರ್ವೆ ನಂ.11ರಲ್ಲಿರುವ ಜಮೀನಿನ ಪೈಕಿ ಒಂದಷ್ಟನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಿಗೆ ಹಾಗೂ ರಾಜಕೀಯ

ಹೀಗಿದ್ದ ಆಶಾ ಸಚಿವ ಬಚ್ಚೇಗೌಡನ ಭೂಕಬಳಿಕೆ ದಂಧೆಯೊಂದರಲ್ಲಿ ಸಹಕರಿಸಲು ಒಪ್ಪಿರಲಿಲ್ಲ. ಬಿಜೆಪಿಯ 'ಕರ್ನಾಟಕ ರತ್ನ' ಸಿ.ಟಿ. ರವಿ ಇದೇ ದೇವನಹಳ್ಳಿಯಲ್ಲಿ ಹತ್ತಾರು ಎಕರೆ ಸರ್ಕಾರಿ ಭೂಮಿಯನ್ನು ತನ್ನ ಹೆಂಡತಿ ಹೆಸರಿನಲ್ಲಿ ಕಬಳಿಸಿ ಕೂತಿದ್ದಾನೆ. ಹೀಗೆ ಕಂಡಕಂಡಲ್ಲಿ 'ಭೂಮಿ' ಸೇವನೆ ಮಾಡುವ ಚಟವಿರುವ ಬಿಜೆಪಿಗಳಿಗೆ ಅನೇಕ ಸಾರಿ ಆಶಾ ಪರ್ವಿನ್ ಒಂದು ತೊಡಕಾಗಿದ್ದರು. ಹಾಗಾಗಿ ಅವರು ದೇವನಹಳ್ಳಿಯನ್ನು ಬಿಡಬೇಕಾಗಿ ಬಂದಿತ್ತು. ಈ ಮಧ್ಯೆ ಇತ್ತ ಕೆ.ಆರ್. ಪುರಂ ತಹಶೀಲ್ದಾರ್ ಆಗಿದ್ದ ವೆಂಕಟೇಶನಂತೂ ಶಾಸಕ ನಂದೀಶ್ ರೆಡ್ಡಿಯನ್ನು ಕೇರ್ ಮಾಡುತ್ತಿರಲಿಲ್ಲ. ಪಕ್ಕದ ಮಹದೇವಪುರ ಶಾಸಕ ಅರವಿಂದ ಲಿಂಬಾವಳಿ ಹೇಳಿದಂತೆ ಮಾತ್ರ ಕೇಳುತ್ತಿದ್ದ ವೆಂಕಟೇಶ್ ಕೊನೆಗೆ ಯಲಹಂಕ ತಹಶೀಲ್ದಾರ್ ಆಗಿ ಎತ್ತಂಗಡಿಯಾದ. ಹೀಗೆ ಖಾಲಿಯಾದ ಕೆ.ಆರ್. ಪುರಂಗೆ ತಹಶೀಲ್ದಾರ್ ಜಾಗಕ್ಕೆ ಆಶಾ ಪರ್ವಿನ್ ಕಾಲಿಟ್ಟರು. ಅವತ್ತು ಶಾಸಕ ನಂದೀಶ್ ರೆಡ್ಡಿ ಹಡಬೆ ದುಡ್ಡಿನಲ್ಲಿ ಕಟ್ಟಿಸಿರುವ ತನ್ನ ಅರಮನೆಗೆ ಆಶಾರನ್ನು ಕರೆಸಿಕೊಂಡು "ನೋಡಿ ಆಶಮ್ಮಾ, ನಾನು ಭಾಳ ಶ್ರೀಮಂತ. ನನಗೆ ದುಡ್ಡು ಬೇಡ. ಒಳ್ಳೆ ಕೆಲಸ ಮಾಡಿ, ನನಗೆ ಸಹಕಾರ ಕೊಡಿ ಅಷ್ಟೇ ಸಾಕು" ಅಂದಿದ್ದ.

ನೆನಪಿಡಿ, ಇವರೆಲ್ಲಾ ಸ್ವಾತಂತ್ರ್ಯ ಹೋರಾಟಗಾರರಾ[ಗಿ]ದ್ದವರು.

ಆದರೆ ಇವರೆಲ್ಲಾ ಉತ್ತರ ಕನ್ನಡ ಜಿಲ್ಲೆಯ ಸಿರಸಿ ಸಿದ್ದಾಪುರ ಕಡೆಯವರಾಗಿದ್ದು ತಮಗೆ ಮಂಜೂರಾಗಿ[ದ್ದ] ಭೂಮಿ ಪಡೆಯಲು ಮುಂದಿನ 30 ವರ್ಷ ಬರಲೇ ಇಲ್ಲ. ಆದರೂ ಕಾನೂನು ಏನು ಹೇಳುತ್ತದೆಂದ[ರೆ] ಫಲಾನುಭವಿಗಳು ತಾವಾಗೇ ಬರದೇ ಇದ್ದಾಗಲ[ೂ] ಸಂಬಂಧಿಸಿದ ತಹಶೀಲ್ದಾರ್ ಅಂತವರನ್ನು ಹುಡುಕಿ ಕರೆತಂದ[ು] ಭೂಮಿ ಅಳತೆ ಮಾಡಿಸಿ, ಬೆಲೆ ಕಟ್ಟಿಸಿಕೊಂಡು ಅವ[ರ] ವಶಕ್ಕೆ ಭೂಮಿ ನೀಡಲೇಬೇಕು. ಆದರೆ ಕೆ.ಆರ್. ಪುರಂ[ನ] ಯಾವ ಘನಂದಾರಿ ತಹಶೀಲ್ದಾರರೂ ಆ ಕೆಲಸ ಮಾಡಲಿ[ಲ್ಲ]. ಈ ಬಗ್ಗೆ ಗಮನಿಸಿದ ಆಗಿನ ರೆವಿನ್ಯೂ ವಿಭಾಗಾಧಿಕಾ[ರಿ]ಯಾಗಿದ್ದ ಗಂಗಾಧರಪ್ಪ 1989ರಲ್ಲಿ ಕೆ.ಆರ್. ಪು[ರಂ] ತಹಶೀಲ್ದಾರನಿಗೊಂದು ಪತ್ರ ಬರೆದು ಕಾನೂನನ್ನು ನೆನ[ಪಿ]ತರಾಟೆಗೆ ತೆಗೆದುಕೊಂಡಿದ್ದರು. ಇದರ ನಂತರ ಎಸ್.ಎ[ಸ್.] ಹೆಗಡೆ ಎಂಬುವರು ಬಂದು ತಮ್ಮ ಪಾಲಿನ 5 ಎಕರೆಯ[...]

ಮಿ. ಯಡಿಯೂರಪ್ಪ... ನಿಮಗೆ ಆಡಳಿತ ನಡೆಸಕ್ಕೆ ಬರುತ್ತೇನ್ರಿ?

the Government has passed the order of suspension stating that the Applicant had granted the land, prima facie, in contravention of the Rules.

We have no hesitation to say that the impugned order is passed without any application of mind and based on the complaint dated 16.6.2010 of the M.L.A., K.R.Puram, the letter of the Government dated 17.6.2010 and the Report of the Deputy Commissioner dated 17.6.2010. The impugned order is passed on the very day, i.e., on 17.6.2010. In our view, without collecting the ...

ಕೆಎಟಿ ಆದೇಶದಲ್ಲಿ ಯಡ್ಡಿಗೆ ಛೀಮಾರಿ

ಆಶಾ ಪರ್ವಿನ್ ಸಸ್ಪೆನ್ಷನ್ ಕೇಸಿನ ವಿಚಾರಣೆ ನಡೆಸಿ ತಡೆಯಾಜ್ಞೆ ನೀಡಿರುವ ಕೆಎಟಿ ಕೋರ್ಟ್ ಯಡ್ಡಿ ಸರ್ಕಾರಕ್ಕೆ ಛೀಮಾರಿ ಹಾಕಿದೆ.

ಕೀಚಕ ಶಾಸಕ ನಂದೀಶ್ ರೆಡ್ಡಿಯ ಚಾಡಿ ಮಾತು ಕೇಳಿದ ಯಡ್ಡಿ ಕ್ಷಣ ಮಾತ್ರವೂ ಯೋಚಿಸದೆ ಆಶಾರ ಅಮಾನತ್ತಿಗೆ ಆದೇಶ ನೀಡಿದ್ದಾರೆ. ಬೆಂಗಳೂರು ನಗರ ಜಿಲ್ಲಾ ರೆವಿನ್ಯೂ ಇಲಾಖೆಯ ಹಿರಿಯ ಅಧಿಕಾರಿಗಳಾಗಿರುವ ಆರ್.ಕೆ. ರಾಜು, ಅಯ್ಯಪ್ಪ, ನಾರಾಯಣ ಸ್ವಾಮಿ ಮುಂತಾದ ಗುಳ್ಳೇ ನರಿಗಳೂ ಆಶಾರ ವಿರುದ್ಧ ನಿಂತು ಸೇಡು ತೀರಿಸಿಕೊಳ್ಳಲು ಈ ಅವಕಾಶ ಬಳಸಿಕೊಂಡು ಅಮಾನತ್ತು ಶಿಕ್ಷೆ ಜಾರಿ ಮಾಡಿಬಿಟ್ಟಿದ್ದಾರೆ.

ಆದರೆ ಕರ್ನಾಟಕ ಆಡಳಿತ ನ್ಯಾಯಮಂಡಳಿ ಮಾತ್ರ ಈ ಅಯೋಗ್ಯರಿಗೆಲ್ಲಾ ಕೆನ್ನೆಗೆ ಬಾರಿಸುವಂತೆ ಉಗಿದು ಸಸ್ಪೆಂಡ್ ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ಒಬ್ಬ ಸರ್ಕಾರಿ ಅಧಿಕಾರಿಯನ್ನು ಅಮಾನತ್ತು ಮಾಡುವ ಮುನ್ನ ಅನುಸರಿಸಬೇಕಾದ ಯಾವ ಕ್ರಮವನ್ನು ವಹಿಸದೆ ಈ ಖದೀಮರು ಆಶಾರನ್ನು ಮುಗಿಸಲು ಹೋಗಿ ಈಗ ಕೋರ್ಟಿನಿಂದ ಉಗಿಸಿಕೊಂಡಿದ್ದಾರೆ.

ಇನ್ನು ಮುಖ್ಯಮಂತ್ರಿ ಯಡ್ಡಿಯ ಬಗ್ಗೆ ಹೇಳಬೇಕೆಂದರೆ ಕೋರ್ಟ್ ಆದೇಶದ ಸಾಲುಗಳನ್ನೇ ನೋಡಿ "ಸರ್ಕಾರದ ತಲೆಯಲ್ಲಿ ಬುದ್ಧಿ ಇದೆಯಾ" ಅಂತ ಕೇಳಿದೆ ಕೋರ್ಟ್.

ಮಿ. ಯಡ್ಡಿ, ಕೋರ್ಟ್ ಈ ಪ್ರಶ್ನೆ ಕೇಳಿರುವುದು ನಿಮಗೇನೆ!





ಸ್ವಾಧೀನಕ್ಕೆ ತೆಗೆದುಕೊಂಡರು. ಆಗಲೇ ಇನ್ನುಳಿದ ಫಲಾನುಭವಿಗಳು ಎಚ್ಚೆತ್ತುಕೊಂಡಿದ್ದು, ಈಗ್ಗೆ 2 ವರ್ಷಗಳಿಂದೀಚೆಗೆ ಕೆ.ಆರ್. ಪುರಂ ತಹಶೀಲ್ದಾರ್ ಆಫೀಸಿಗೆ ಅರ್ಜಿ ಹಿಡಿದು ಓಡಾಡತೊಡಗಿದರು.

ಶಾಸಕ ನಂದೀಶ್ ರೆಡ್ಡಿಗೆ ಆತಂಕವಾಗಿದ್ದು ಈ ಹಂತದಲ್ಲೇ.


ಈ ನಂದೀಶ್ ರೆಡ್ಡಿ ಏನು ಫ್ರೀಡಂ ಫೈಟರ್ ಅಲ್ಲ, ಈತ ಅಧಿಕಾರ, ಈತ ದುಡ್ಡಿಗಾಗಿ ಹೋರಾಡಿದ್ದಾನೆಯೇ ವಿನಃ ತನ್ನ ಜನ್ಮದಲ್ಲೇ ಜನರಿಗಾಗಿ ಏನನ್ನೂ ತ್ಯಾಗ ಮಾಡಿದವನಲ್ಲ, ಅಂತವನು ತಾನು ಕಬಳಿಸಬೇಕೆಂದಿದ್ದ ಹತ್ತಾರು ಜಾಗ ಫ್ರೀಡಂ ಫೈಟರುಗಳ ಪಾಲಾದರೆ ಸಹಿಸುತ್ತಾನಾ? ಹಾಗಾಗಿ ತಹಶೀಲ್ದಾರ್ ರ ಮೇಲೆ ಅವನ ಒತ್ತಡ ಜಾಸ್ತಿಯಾಯಿತು. ಕ್ಯಾಲಸನಹಳ್ಳಿಯಲ್ಲಿರುವ ಸರ್ಕಾರಿ ಜಮೀನು ಹೇಳಿದವರಿಗೆ ಕೊಡಲೇಬೇಕು ಎಂದು ಹಠ ಮಾಡಿದ್ದಾನೆ. ಈ ಗುಳುಂ ಕಾರ್ಯಾಚರಣೆಯ ಉಸ್ತುವಾರಿಗೆಂದು ತನ್ನ ಗೂಂಡಾ ಭಂಟ ಬಾಬು ರೆಡ್ಡಿಯನ್ನು ನೇಮಿಸಿದ್ದಾನೆ. ಆದರೆ ಆಶಾ ನಂದೀಶ್ ರೆಡ್ಡಿಯ ಮಾತಿಗೆ ಕೇರ್ ಮಾಡಲಿಲ್ಲ, ಬಹುಶಃ ಆಕೆಯ ಬೆನ್ನ ಹಿಂದೆಯೂ ಸಾಕಷ್ಟು ದೊಡ್ಡವರ ಬೆಂಬಲವಿದ್ದಿರಬೇಕು. ಆಕೆ ಈ ಸ್ವಾತಂತ್ರ್ಯ ಹೋರಾಟಗಾರರನ್ನು ಹುಡುಕಿಸಿದರು. ಆಗಲೇ ತೀರಿಕೊಂಡಿದ್ದವರ ಕುಟುಂಬದವರು ಬಂದಾಗ ಎಲ್ಲಾ ಡಾಕ್ಯುಮೆಂಟ್ ರೆಡಿ ಮಾಡಿ ಮ್ಯೂಟೇಷನ್ ಮಾಡಿ ಕೊಟ್ಟೇಬಿಟ್ಟಿದ್ದಾರೆ.

ಅಂದಿಗೆ ನಂದೀಶನ ರಾಕ್ಷಸ ಬುದ್ಧಿ ಹೊರಬಂತು.

ಜೂನ್ 16 ರ ರಾತ್ರಿ....!

ಅನಾಮತ್ತು 50 ಕೋಟಿ ರೂಪಾಯಿ ಬೆಲೆಬಾಳುವ ಜಾಗ ಹೀಗೆ ಯಾರದೋ ಪಾಲಾಯಿತಲ್ಲ ಎಂದು ರೊಚ್ಚಿಗೆದ್ದ ನಂದೀಶ್ ರೆಡ್ಡಿ ಜೂನ್ 16 ರ ಸಂಜೆ ಫೈಲ್ ಸಮೇತ ತನ್ನ ಅಡ್ಡಾಗೆ ಬರುವಂತೆ ಆಶಾರಿಗೆ ಹೇಳಿದ್ದಾನೆ. ಅದರಂತೆ ತೆರಳಿದ ಆಶಾರ ಕೈಲಿದ್ದ ಫೈಲ್ ಕಿತ್ತುಕೊಂಡು ಚೇಲಾ ಲೋಹಿತ್‌ಗೆ ಕೊಟ್ಟಿದ್ದಾನೆ. ಅದರಿಂದ ಆತಂಕಗೊಂಡ ಆಶಾರು ಫೈಲ್ ವಾಪಸ್ ಪಡೆದುಕೊಳ್ಳಲು ಯತ್ನಿಸಿದಾಗ ಲೋಹಿತ್ ಫೈಲ್ ಸಮೇತ ಓಡಿಹೋಗಿದ್ದಾನೆ. ಲೋಹಿತ್‌ನ ಬೆನ್ನಟ್ಟಿದ ಆಶಾರನ್ನು ಶಾಸಕ ನಂದೀಶ್ ರೆಡ್ಡಿಯೇ ಅಡ್ಡಹಾಕಿ ಆಕೆಯ ಎರಡೂ ಕೈಗಳನ್ನು ಹಿಡಿದು ಎಳೆದಾಡಿದ್ದಾನೆ.

ಆಗಲೇ ನಂದೀಶ್ ರೆಡ್ಡಿಗೆ ಗೂಸಾ ಬಿದ್ದಿದ್ದು!



16-06-2010 ರಂದು ನನ್ನನ್ನು ಅವರ ನಿವಾಸಕ್ಕೆ ಕರೆದಿದ್ದು, ದಿನಾಂಕ 16-06-20210 ರಂದು ಅವರು ...

ತಮ್ಮ ವಿಶ್ವಾಸಿ,

ತಹಶೀಲ್ದಾರ್,

ಕೆ.ಆರ್. ಪುರ.

ಶಾಸಕನ ವಿರುದ್ಧ ಆಶಾರ ಪೊಲೀಸ್ ದೂರು...

ಈ ಆಶಾ ಪರ್ವಿನ್ 2006 ರಲ್ಲಿ ತಹಶೀಲ್ದಾರ್ ಆಗುವ ಮುನ್ನ 6 ವರ್ಷ ಕಾಲ ಪೊಲೀಸ್ ಇನ್ಸ್‌ಪೆಕ್ಟರ್ ಆಗಿದ್ದಾಕೆ. ಧೈರ್ಯ ಸಾಹಸಕ್ಕೇನೂ ಕಡಿಮೆ ಇಲ್ಲ, ಜೊತೆಗೆ ಎತ್ತರಕ್ಕೆ ವೈಟ್ ಲಿಫ್ಟರ್ ಥರ ಬಲಿಷ್ಠವಾಗಿಯೂ ಇದ್ದಾರೆ. ಯಾವಾಗ ಭಾರತಾಂಬೆಯ ಸುಪುತ್ರ, ಹಿಂದೂ ವೀರ ನಂದೀಶ್ ರೆಡ್ಡಿ ಆಶಾರನ್ನು ದೈಹಿಕವಾಗಿ ಅಡ್ಡಗಟ್ಟಿ ಕೈಹಿಡಿದು ಎಳೆದನೋ ರೊಚ್ಚಿಗೆದ್ದ ಆಶಾ ತಮ್ಮ ಕಾಲಿನಿಂದ ಒಂದೇಟು ಒದ್ದು ಶಾಸಕನನ್ನು ಬೀಳಿಸಿದ್ದಾರೆ.

ಆದಾಗಲೇ ರಾತ್ರಿ 10 ಗಂಟೆಯಾಗಿದ್ದು ಬಿಜೆಪಿಗಳ ನಿಯಮದಂತೆ ನಂದೀಶ್ ರೆಡ್ಡಿಯೂ ಕುಡಿದು ಕಟ್ಟೆಪುರಾಣದ ವಾಟಿಸ್ನ್‌ಯಂತೆ ವಾಲಾಡುತ್ತಿದ್ದ, ಅಂಥವನಿಗೆ ಗೂಸಾ ಬಿದ್ದೇಟಿಗೆ ಶಾಕ್ ಹೊಡೆದಿದೆ. ಅಷ್ಟರಲ್ಲಿ ಹೊರಬಂದ ಆಶಾ ರೆಡ್ಡಿಯ ಮನೆ ಕಾಂಪೌಂಡಿನೊಳಗೆ ಫೈಲ್ ಸಮೇತ ಅಡಗಿಟ್ಟುಕೊಂಡಿದ್ದ ಲೋಹಿತ್‌ನನ್ನು ಹುಡುಕಿ ಆಚೆಗೆಳೆದು ಅವನ ಕುಂಡೆ ಮೇಲೊದ್ದು ಫೈಲ್ ವಾಪಸ್ ತೆಗೆದುಕೊಂಡು ಹೊರಟಿದ್ದಾರೆ.

"ಇನ್ನೇನು ಆಶಾ ಸೆಕ್ಯುರಿಟಿ ಗಾರ್ಡ್‌ನನ್ನು ದಾಟಿ ಗೇಟ್‌ನಿಂದ ಹೊರಗೆ ಕಾಲಿಡಬೇಕೆನ್ನುವಷ್ಟರಲ್ಲೇ "ಏಯ್ ಅವಳ್ನ ಹಿಡಿಯೊ, ಆಚೆ ಹೋಗಕ್ ಬಿಡಬೇಡ". ಅಂತಾ ಮನೆಬಾಗಿಲಿನಿಂದಲೇ ನಂದೀಶ್ ರೆಡ್ಡಿ ಕಿರುಚಿದ್ದಾನೆ. ಆದರೂ ಈ ಕ್ರಿಮಿನಲ್‌ಗಳಿಗೆ ಆಶಾರನ್ನು ಹಿಡಿಯಲು ಆಗಲಿಲ್ಲ.

ವರ್ಗಾ-ಸಸ್ಪೆಂಡ್ ಸಂಚು

ಯಾವಾಗ ಕ್ಯಾಲಸನಹಳ್ಳಿಯ ಫೈಲ್ ಕದಿಯಲು ಯತ್ನಿಸಿ ತಹಶೀಲ್ದಾರ್ ಆಶಾರಿಂದ ಒದೆಸಿಕೊಂಡನೊ ಅವತ್ತೆ ಶಾಸಕ ನಂದೀಶ್ ರೆಡ್ಡಿಗೆ ಕೋಪ ಕುದಿಯಲು ಶುರುವಾಯಿತು. ಅವನು ಆಶಾರನ್ನು ಟ್ರಾನ್ಸ್‌ಫರ್ ಮಾಡಿಸಲು ನಿಂತ. ತಾಲ್ಲೂಕಾಫೀಸಿನ ಅಕ್ರಮ ತನಿಖೆ ಮಾಡಿಸುತ್ತೇನೆಂದು ರೆವಿನ್ಯೂ ಅಧಿಕಾರಿಗಳನ್ನೇ ಛೂಬಿಟ್ಟ. ಈ ಆಶಾ ಎಂಥಾ ಕಿಲಾಡಿ ಆಫೀಸರ್ ಎಂದರೆ ತಾನು ಕೆ.ಆರ್. ಪುರಂಗೆ ಕಾಲಿಟ್ಟು ಇನ್ನು ಮೂರು ತಿಂಗಳೂ ಆಗಿರದಿದ್ದಾಗಲೂ ತನಿಖೆಗೆ ಬಂದ ಟೀಂಗೆ 'ಮೂರು ವರ್ಷದ ಲ್ಯಾಂಡ್ ಡೀಲ್‌ಗಳ ಬಗ್ಗೆ ಪೂರ್ತಿ ತನಿಖೆ ನಡೆಸಿ' ಎಂತ ಷರಾ ಬರೆದು ನಂದೀಶ್ ರೆಡ್ಡಿಗೆ ಮರ್ಮಾಘಾತ ಮಾಡಿಬಿಟ್ಟರು. ನಂದೀಶನಿಗೆ ಅಲ್ಲೂ ಏನು ಕಿಸಿಯಲಾಗಲಿಲ್ಲ, ಹಾಗಾಗಿ ಅವನು ಆಶಾರ ವಿರುದ್ಧ ಜೂನ್ 16 ನೇ ತಾರೀಖು ಮುಖ್ಯಮಂತ್ರಿ ಯಡ್ಡಿಗೇ ದೂರು ಕೊಟ್ಟ, ಹಿಂದೆಮುಂದೆ ಯೋಚಿಸದೆ ಆಶಾರನ್ನು ಸಸ್ಪೆಂಡ್ ಮಾಡುವಂತೆ ಯಡ್ಡಿ ಅದೇ ದಿನ ಆದೇಶ ಕೊಟ್ಟರು. ಆದರೆ ಆಶಾ ಸೀದಾ ಕೆಎಟಿಗೆ ಹೋಗಿ ಸಸ್ಪೆಂಡ್ ಆದೇಶಕ್ಕೇ ತಡೆಯಾಜ್ಞೆ ತಂದರು. ಈ ಮಧ್ಯೆ ನಂದೀಶ್ ರೆಡ್ಡಿ ಹುಡುಕಿ ಹುಡುಕಿ ಶಿವಕುಮಾರ ಎಂಬ ಬಾಲಕನನ್ನು ಕೆ.ಆರ್. ಪುರ ತಹಶೀಲ್ದಾರ್ ಜಾಗಕ್ಕೆ ಕರೆತಂದ. ಈ ಅವಿವೇಕಿ ಶಿವಕುಮಾರ್ ಆಫೀಸಿಗೆ ಬಂದು ಬೀಗ ಹಾಕಿಕೊಂಡು ಎತ್ತಲೋ ಮಾಯವಾದ. ಆಶಾ ಸೀದಾ ಬಂದವರೆ ಪೊಲೀಸರು-ಮೀಡಿಯಾದವರ ಎದುರಲ್ಲೇ ಕಚೇರಿ ಬೀಗ ಒಡೆಸಿ ತಹಶೀಲ್ದಾರ್ ಚೇರ್‌ನಲ್ಲಿ ಕೂತರು.

ಈಗ ಪರಿಸ್ಥಿತಿ ಕ್ಲೈಮಾಕ್ಸ್ ತಲುಪಿದಂತಾಯಿತು. ಹೆಣ್ಣು ಹುಲಿ ಆಶಾ ಹಾಗೂ ಗಂಡು ನರಿ ಶಿವಕುಮಾರ್ ಎಂಬ ತಹಶೀಲ್ದಾರ್‌ಗಳು ಒಬ್ಬರ ವಿರುದ್ಧ ಮತ್ತೊಬ್ಬರು ಪೊಲೀಸ್ ದೂರು ಕೊಟ್ಟಿದ್ದಾರೆ. ಬಿಜೆಪಿಗಳ ಅಯೋಗ್ಯ ಸರ್ಕಾರ ತನ್ನ ಪರಂಪರೆಗೆ ತಕ್ಕಂತೆ ನ್ಯಾಯವನ್ನು ತುಳಿದು ಅನ್ಯಾಯವನ್ನು ರಕ್ಷಿಸಲು ಹೊರಟಿದೆ.

ಅಂದರೆ ಆಶಾ ಪರ್ವಿನ್ ವಿರುದ್ಧ ಕೇಸು ದಾಖಲಿಸಿ ಅರೆಸ್ಟ್ ಮಾಡಲು ಪೊಲೀಸರನ್ನು ಛೂಬಿಟ್ಟಿದೆ. ಇನ್ಸ್‌ಪೆಕ್ಟರ್ ತಿಪ್ಪೇಸ್ವಾಮಿ ಶಾಸಕ ನಂದೀಶನ ಗುಲಾಮ, ಈಗ ಆಶಾರ ಬೆನ್ನು ಹತ್ತಿದ್ದಾನೆ.

ಅಂದಹಾಗೆ ಮಹಿಳಾ ಸರ್ಕಾರಿ ಅಧಿಕಾರಿಯೊಬ್ಬರ ಮೇಲೆ ದೈಹಿಕ ದೌರ್ಜನ್ಯ ನಡೆಸಿ, ಪ್ರಾಣ ಬೆದರಿಕೆ ಹಾಕಿರುವ ಶಾಸಕ ನಂದೀಶ್ ರೆಡ್ಡಿಯನ್ನು ಪೊಲೀಸರೇಕೆ ಬಂಧಿಸುತ್ತಿಲ್ಲ?


ರಾಜ್ಯ ಪೊಲೀಸರನ್ನೇ ಶಾಸಕ ನಂದೀಶ್ ರೆಡ್ಡಿ ಖರೀದಿ ಮಾಡಿಬಿಟ್ಟಿದ್ದಾನಾ?

● ಪಾರ್ವತೀಶ
bparvateesha@gmail.com

ಡಿಸಿಎಫ್ ಗೋಕುಲ್ ಕೊಲೆಗೆ ಗಣಿ ಗೂಂಡಾಗಳು ಸ್ಕೆಚ್ ಹಾಕಿದ್ದಾರಾ?

ಅದ್ಯಾಕೋ ಗಣಿ ಗೂಂಡಾಗಳದು ಅತಿಯಾಗುತ್ತಿದೆ!


ಇಡೀ ಕರ್ನಾಟಕವನ್ನೇ ಕಂಗೆಡಿಸುತ್ತಿರುವ ಬಳ್ಳಾರಿ ಗಣಿ ಮಾಫಿಯಾದ ಡಾನ್‌ಗಳಾದ ರೆಡ್ಡಿ-ರಾಮುಲುಗಳ ಅಟ್ಟಹಾಸ ಮಿತಿಮೀರಿ ಹೋಗಿದೆ. ಈ ಪಾತಕಿಗಳ ದರೋಡೆ-ಧಗಾ-ದಗಲುಬಾಜಿ ಬಗ್ಗೆ ಮಾತಾಡುವುದಿರಲಿ, ಸರ್ಕಾರಿ ಏಜೆನ್ಸಿಗಳೂ ಇವರ ಅಪರಾಧ ಪತ್ತೆ ಹಚ್ಚುವುದು ಅಥವಾ ತನಿಖಿಸುವುದೂ ಗಂಡಾಂತರಕಾರಿ ಆಗುತ್ತಿದೆ. ರೆಡ್ಡಿ ರಿಪಬ್ಲಿಕ್ ಏನೇ ಮಾಡಿದರೂ ತುಟಿಪಿಟಿಕ್ ಮಾಡುವಂತಿಲ್ಲ! ನಾಡಿನ ಮುಖ್ಯಮಂತ್ರಿಯನ್ನೇ ಸಾಕುನಾಯಿ ಯಂತೆ ಪಳಗಿಸಿಕೊಂಡಿರುವ ಈ ರೆಡ್ಡಿ- ರಾಮುಲುಗಳ ಗ್ಯಾಂಗ್ ತಮ್ಮ ದೋ ನಂಬರ್ ದಂಧೆ ತಂಟೆಗೆ ಬರುವವರ ರಕ್ತ ಹೀರದೇ ಬಿಡುವುದಿಲ್ಲ.



ಇದು ರೆಡ್ಡಿ ಗ್ಯಾಂಗಿನ ಇತಿಹಾಸ-ಭೂಗೋಳ ಹೇಳುವ ಕತೆ! ಬಳ್ಳಾರಿ ಬದಿಯಲ್ಲಿ ಈ ರಕ್ಕಸರ ಉಸಾಬರಿಗೆ ಹೋದವರೆಷ್ಟೋ ಜೀವ ತೆತ್ತಿದ್ದಾರೆ; ಅಂಗಾಂಗ ಕಳಕೊಂಡಿದ್ದಾರೆ. ಅದೆಷ್ಟೋ ಮಹಿಳೆಯರ ಮಾನ ಪ್ರಾಣ ಎರಡೂ ಹೋಗಿದೆ! ತಮ್ಮ ಉದ್ಯಮ ಪ್ರತಿಸ್ಪರ್ಧಿ ಟಪಾಲ್ ಗಣೇಶನ ಮುಗಿಸಲು ಅದೆಷ್ಟೋ ಅಟೆಮ್ಟು ರೆಡ್ಡೀಸ್‌ಗಳಿಂದಾಗಿದೆ! ಕೊಲೆ ಕೇಸುಗಳು ಗಣಿ ಹೊಂಡಗಳಲ್ಲಿ ಶಾಶ್ವತವಾಗಿ ಸಮಾಧಿಯಾಗಿ ಹೋಗಿವೆ!!

ರೆಡ್ಡಿ ರಿಪಬ್ಲಿಕ್‌ನ ರೌಡಿ ಪಟಾಲಮ್‌ಗೆ ಇಬ್ಬರು ಕ್ಯಾಪ್ಟನ್‌ಗಳು. ಒಬ್ಬ ಕಾರ್ಪುಡಿ ಮಹೇಶನಾದರೆ, ಇನ್ನೊಬ್ಬ ಸ್ವಸ್ತಿಕ್ ನಾಗರಾಜ್. ಇಬ್ಬರೂ ಹೊಸಪೇಟೆಯ ಪಕ್ಕಾ ಕ್ರಿಮಿನಲ್‌ಗಳು. ರೆಡ್ಡಿ-ರಾಮುಲುಗಳ ಎಡಗೈ-ಬಲಗೈ ಬಂಟರಾದ ಈ ನಾಗರಾಜ್-ಮಹೇಶ್ ಬಾಸ್‌ಗಳಿಗೆ ಆಗದವರ ಸತಾಯಿಸುವುದ್ಹೇಗೆ, ತಲೆ ತೆಗೆಯುವುದ್ಹೇಗೆ ಎಂದು ಸದಾ ಸ್ಕೆಚ್ ಹಾಕುತ್ತಿರುತ್ತಾರೆ. ಟಪಾಲ್ ಗಣೇಶ್ ಮೇಲೆ 29.3.2010 ರಂದು ಮಾರಣಾಂತಿಕ ಹಲ್ಲೆ ಮಾಡಿ ಸಿಕ್ಕಿಬಿದ್ದಿರುವ ವಿಷ್ಣು ರೆಡ್ಡಿ ಈ ಹಾಪಿದ್ವಯರ ಫಂಟರ್!!

ಈ ನಾಗರಾಜ್-ಮಹೇಶ್ ಹೆಸರು ಕೇಳಿದರೆ ಸಾಕು, ಇಡೀ ಅದಿರು ಸಾಮ್ರಾಜ್ಯವೇ ಗಡಗುಡುತ್ತದೆ! ಅದಿರು ಟ್ರಾನ್ಸ್‌ಪೋರ್ಟ್‌ಗಳು, ಎಕ್ಸ್‌ಪೋರ್ಟರ್‌ಗಳೆಲ್ಲ ಇವರ ಆಜ್ಞೆಯಂತೆ ಹೆಜ್ಜೆ ಹಾಕಬೇಕು. ಇಲ್ಲದಿದ್ದರೆ ದಂಡ ಪ್ರಯೋಗ ಖಾತ್ರಿ! ಅದಿರು ಲಾರಿಗಳಿಗೆ ಯಾರಾದರೂ ಅಡೆತಡೆಯೊಡ್ಡಿದರೆ ಇವರ ಖಾಸಗಿ ಸ್ಕ್ವಾಡ್ ತಕ್ಷಣ ಹೆದ್ದಾರಿಯಲ್ಲಿ ಪ್ರತ್ಯಕ್ಷವಾಗಿ ಖಾಸಗಿ- ಸರ್ಕಾರಿ ವಾಹನದ ಚಾಲಕ-ಪ್ರಯಾಣಿಕರ ಹಿಗ್ಗಾಮುಗ್ಗಾ ಥಳಿಸುತ್ತದೆ! ಸದಾ ಈ ರೌಡಿ ಗ್ಯಾಂಗ್ ಅದಿರು ಲಾರಿ ಪಥದುದ್ದಕ್ಕೂ ಓಡಾಡುತ್ತಿರುತ್ತವೆ. ರೆಡ್ಡಿಗಳು ತಮ್ಮ ರೌಡಿ ರಾಜ್ಯದ ಸೆಕ್ಯೂರಿಟಿಗಳಾದ ಈ ಕಾರ್ಪುಡಿ ಮತ್ತು ನಾಗರಾಜನಿಗೆ ಅದಿರು ಟ್ರಾನ್ಸ್‌ಪೋರ್ಟ್ ದಂಧೆ ಹಚ್ಚಿಕೊಟ್ಟಿದೆ. ಬಳ್ಳಾರಿಯಿಂದ ಕಾರವಾರ-ಬೇಲೇಕೇರಿ ಮತ್ತು ಮಂಗಳೂರು ಬಂದರಿನ ತನಕ ಅದಿರು ನಿರಾತಂಕವಾಗಿ ಸಾಗಿಸುವ ಜವಾಬ್ದಾರಿ ಈ ಪುಂಡರದು. ಇದಕ್ಕೆ 'ರಿಸ್ಕ್ ಟ್ರಾನ್ಸ್‌ಪೋರ್ಟ್' ಎಂದು ಹೆಸರು! ಗಣಿಯಿಂದ ಬಂದರಿನ ತನಕದ ಸಾಗಾಟದಲ್ಲಿ ಎದುರಾಗುವ ರಗಳೆ-ರಂಪಗಳನ್ನೆಲ್ಲ ನಿಭಾಯಿಸುವ 'ಉದ್ಯಮ' ಇದು.



ಗೋಕುಲ್‌ದಾಸ್

ನಕಲಿ ಪರ್ಮಿಟ್‌ಗಳು, ಚೆಕ್‌ಪೋಸ್ಟ್ ನಿಭಾವಣೆ ತುಂಬ ವ್ಯವಸ್ಥಿತವಾಗಿ ಮಾಡುವ ಈ ಕಾರ್ಪುಡಿ-ನಾಗರಾಜ್‌ಗಳೇ ಇಡೀ ಅದಿರು ಮಾಫಿಯಾದ ಅಕ್ರಮ ಸಾಗಾಣಿಕೆ ದಂಧೆ ದೊರೆಗಳು. ರೆಡ್ಡಿಗಳದಷ್ಟೇ ಅಲ್ಲ, ಇತರ ಮೈನಿಂಗ್ ಕಂಪನಿಗಳ ಕಳ್ಳ ಅದಿರು ಬಂದರು ಮುಟ್ಟಿಸುವ ಗುತ್ತಿಗೆದಾರರಿವರು. ಒಂದು ಮೂಲದ ಪ್ರಕಾರ 1990 ರ ದಶಕದಲ್ಲಿ ಬಳ್ಳಾರಿಯಲ್ಲಿ ಬ್ಲಾಕ್‌ಗೋಲ್ಡ್ ಮೈನಿಂಗ್ ಕಂಪನಿಯನ್ನು ರೆಡ್ಡಿಗಳು ಈ ರೌಡಿಗಳ ಹೆಸರಲ್ಲಿ ನಡೆಸುತ್ತಿದ್ದರು.

ಆ ಬಳಿಕ ಸ್ವಸ್ತಿಕ್ ನಾಗರಾಜ್ ಬೇಲೇಕೇರಿ ಬಂದರಿನಲ್ಲಿ ಅದಿರು ಸಂಗ್ರಹಿಸಿ ರಫ್ತುದಾರರಿಗೆ ವಹಿಸುವ ಸ್ವಸ್ತಿಕ್ ಸ್ಟೀಲ್ ಎಂಬ ಕಂಪನಿ ಆರಂಭಿಸಿದ್ದಾನೆ. ಇದಕ್ಕೂ ರೆಡ್ಡಿಗಳೇ ಗಾಡ್‌ಫಾದರ್‌ಗಳು. ಬೇಲೇಕೇರಿಯಲ್ಲಿ ಲೋಕಾಯುಕ್ತರ ತನಿಖಾಧಿಕಾರಿ ಗೋಕುಲ್ ಸೀಜ್ ಮಾಡಿದ್ದ 8 ಲಕ್ಷ ಮೆಟ್ರಿಕ್ ಟನ್ ಕಳ್ಳ ಅದಿರಿನಲ್ಲಿ ಈ ಸ್ವಸ್ತಿಕ್ ನಾಗರಾಜನ ಕಂಪನಿಯ ಶೇರೂ ಇತ್ತು! ಕಾರವಾರದ ಡಿಸಿಎಫ್ ಆರ್. ಗೋಕುಲ್ ಮುಟ್ಟುಗೋಲು ಹಾಕಿಕೊಂಡಿದ್ದ ಅದಿರು ಕದ್ದು ವಿದೇಶಕ್ಕೆ ರಫ್ತು ಮಾಡಿದ್ದಕ್ಕೆ ಈ ಸ್ವಸ್ತಿಕ್ ಸ್ಟೀಲ್ ಕಂಪನಿ ಮೇಲೂ ಕ್ರಿಮಿನಲ್ ಕೇಸು ಜಡಿದಿದ್ದರು. ಅದಿರು ಕಳ್ಳಸಾಗಾಣಿಕೆದಾರರಾದ 10 ಮಂದಿಯಲ್ಲಿ ಈ ನಾಗರಾಜನೇ ಎದ್ದು ಕಾಣುವ ಖದೀಮ. ಈತ ಪ್ರೇರಣೆ-ರಾಜಕೀಯ ಬಲ್ಲ-ಗೂಂಡಾ ಗರ್ದಿ ನಂಬಿಯೇ ಇತರ ಒಂಭತ್ತು ಮಂದಿ ಕಾನೂನು-ಕಟ್ಟಲೆ-ಲೋಕಾಯುಕ್ತ ಕೇರ್ ಮಾಡದೆ ವಿದೇಶಕ್ಕೆ ಸೀಜ್ಡ್ ಅದಿರು ಕಳಿಸಿದ್ದ.

ಇಂಥ ಪ್ರಳಯಾಂತಕ ಸ್ವಸ್ತಿಕ್ ನಾಗರಾಜನ ಗಣಿ ದಂಧೆಯ ಸಹಚರ ಉಮೇಶ್ ಶಾಸ್ತ್ರಿ ಎಂಬಾತನ ಕೆಎ 37-7061 ನಂಬರಿನ ಸಿಲ್ವರ್ ಕಲರ್ ಸ್ಕಾರ್ಪಿಯೋ ಕಾರು ಉಪ ಅರಣ್ಯ ಸಂರಕ್ಷಣಾಧಿಕಾರಿ ಆರ್. ಗೋಕುಲರ ಸರ್ಕಾರಿ ಅಂಬಾಸಿಡರ್ ಕಾರನ್ನು ಅಟ್ಟಾಡಿಸಿ ಬೆದರಿಸಿದೆ! ಅದು ಜುಲೈ 13 ರ ನಡುರಾತ್ರಿ ಸಮಯ. ಶಿರಸಿಯ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯಲ್ಲಿದ್ದ ಮೀಟಿಂಗ್ ಮುಗಿಸಿ ಗೋಕುಲ್ ಮರಳಿ ಕಾರವಾರಕ್ಕೆ ಬರುತ್ತಿದ್ದರು. ಗೋಕುಲ್ ಕಾರು ರಾಜ್ಯ ಹೆದ್ದಾರಿ ಬಿಟ್ಟು ರಾಷ್ಟ್ರೀಯ ಹೆದ್ದಾರಿ 17 ರ ಮಿರ್ಜಾನ್ ಎಂಬಲ್ಲಿಗೆ ತಲುಪಿದಾಗ ರಾತ್ರಿ ಬರೋಬ್ಬರಿ 12.30. ಆಗ ಸ್ವಸ್ತಿಕ್ ನಾಗನ ಗೆಳೆಯನ ಸ್ಕಾರ್ಪಿಯೋ ಏಕ್‌ದಂ ಚೇಸ್ ಮಾಡಿದೆ. ಅದರ ರಭಸಕ್ಕೇ ಡ್ರೈವರ್ ಬೆಚ್ಚಿಬಿದ್ದಿದ್ದಾನೆ.

ಆದರೆ ಇದು ಹೆದ್ದಾರಿಯಲ್ಲಾಗುವ ಮಾಮೂಲಿ ಸಂಗತಿ ಎಂದಾತ ನಿರ್ಲಕ್ಷಿಸಿ ಮುಂದೆ ಸಾಗಿದ್ದಾನೆ. ಆದರೆ ಇದೇ ಕಾರು ಅಂಕೋಲಾದ ಶಿರೂರು ಬಳಿ ನಿಂತುಕೊಂಡಿತ್ತು. ಗೋಕುಲರ ಕಾರು ಪಾಸಾದ ಬಳಿಕ ಮತ್ತೆ ಫಾಲೋ ಮಾಡಿಕೊಂಡು ಬಂತು. ಆಗ ಡ್ರೈವರ್‌ಗೆ ಗುಮಾನಿ ಬಂದಿದೆ. ಮಲಗಿದ್ದ ಸಾಹೇಬರನ್ನು ಎಬ್ಬಿಸಿ ಸ್ಕಾರ್ಪಿಯೋ ಬೆನ್ನಟ್ಟಿರುವುದನ್ನು ಹೇಳಿದ್ದಾನೆ. ಅದಕ್ಕೆ ಸಾಹೇಬರು "ಹೆದರ ಬೇಡ... ಸೀದಾ ಕಾರವಾರಕ್ಕೆ ಓಡಿಸು..." ಎಂದ್ಹೇಳಿದ್ದಾರೆ. ಹಾಗೇ ಮತ್ತೆ ಬಾಳೇಗುಳಿ ಕತ್ರಿ ಬಳಿ ಅದಿರು ಉದ್ಯಮಿಯ ಯಮರೂಪಿ ಸ್ಕಾರ್ಪಿಯೋ ಡಿಸಿಎಫ್ ಗೋಕುಲ್ ಕಾರು ಮುಂದೆ ಹೋಗಲು ಅವಕಾಶ ಕೊಟ್ಟಿದೆ. ಬೇಲೇಕೇರಿ ಕ್ರಾಸ್ ಬಳಿ ಮತ್ತೆ ಚೇಸ್ ಮಾಡಲು ಬಂದ ಸ್ಕಾರ್ಪಿಯೋಕ್ಕೆ ಡಿಸಿಎಫ್‌ರ ಚಾಲಕನೇ ಮುಂದೆ ಹೋಗುವಂತೆ ಸೂಚನೆ ಕೊಟ್ಟು ತನ್ನ ಕಾರು ನಿಧಾನಗೊಳಿಸಿದ್ದಾನೆ.

ಖತರ್‌ನಾಕ್ ಸ್ವಸ್ತಿಕ್ ನಾಗರಾಜನ ಸಹಚರ ಉಮೇಶ್ ಶಾಸ್ತ್ರಿಯ ಕಾರು ಹೀಗೇ ತಿರುವು-ಘಟ್ಟದಲ್ಲೆಲ್ಲ ಅಪಾಯಕಾರಿ ಅಟ್ಟಾಡಿಸುವ ಆಟ ಆಡಿತು. ಕಾರವಾರದ ತನಕ ಬೆನ್ನಟ್ಟಿ ನಂತರ ಕಣ್ಮರೆಯಾಯಿತು. ಸುಮಾರು 40-50 ಕಿ.ಮೀ. ತನಕ ಅದಿರು ಮಾಫಿಯಾದ ಕಿಂಗ್‌ಪಿನ್ ಜನಾರ್ದನ ರೆಡ್ಡಿಯ ಪರಮಾಪ್ತ ಪಂಟರ್ ಸ್ವಸ್ತಿಕ್ ನಾಗರಾಜ್ ಮಿತ್ರನ ಸ್ಕಾರ್ಪಿಯೋ ಬೆನ್ನಟ್ಟಿ ಗೋಕುಲ್‌ರನ್ನು ಬೆದರಿಸಿದೆ. ಮರುದಿನ ಈ ಸ್ಕಾರ್ಪಿಯೋ ಕಾರವಾರದ ಎಕ್ಸಿಸ್ ಬ್ಯಾಂಕ್ ಬಳಿ ನಿಂತಿರುವುದು ಡಿಸಿಎಫ್ ಡ್ರೈವರ್ ಕಣ್ಣಿಗೆ ಬಿದ್ದಿದೆ. ತಕ್ಷಣ ಆತ ತಾನು ನೋಟ್ ಮಾಡಿಕೊಂಡಿದ್ದ ನಂಬರ್ ಕಿಸೆಯಿಂದ ತೆಗೆದು ನೋಡಿದ್ದಾನೆ. ರಾತ್ರಿ ಕಂಗೆಡಿಸಿದ ಸ್ಕಾರ್ಪಿಯೋ (ಕೆಎ 37- 7061) ಇದೇ ಎಂಬುದು ಖಾತ್ರಿಯಾಗಿದೆ! ಇದು ಬಳ್ಳಾರಿ ಬಳಿಯ ಗಂಗಾವತಿ ರಿಜಿಸ್ಟ್ರೇಷನ್!

ಅಷ್ಟಕ್ಕೂ ಪಾತಕ ಜಾತಕದ ಸ್ವಸ್ತಿಕ್ ನಾಗರಾಜನ ಸ್ಕಾರ್ಪಿಯೋ ನಡುರಾತ್ರಿ ಹೊತ್ತಲ್ಲಿ ತಮ್ಮ ಬಾಸ್‌ನ, ರೆಡ್ಡಿಗಳ ಬಣ್ಣ ಬಯಲಾಗಿಸಿದ, ಅರಣ್ಯ ಅಧಿಕಾರಿ ಗೋಕುಲ್ ಕಾರು ಬೆನ್ನಟ್ಟಿದ್ದಾದರೂ ಏಕೆ? ಗೋಕುಲ್‌ರಲ್ಲಿ ಭೀತಿ ಮೂಡಿಸಿ ಲೋಕಾಯುಕ್ತ ತನಿಖೆಯಿಂದ ಹಿಮ್ಮೆಟ್ಟಿಸುವ ಥ್ರೆಟ್ ಚೇಸ್ ಇದಾ? ಅಥವಾ ತುಂಬ ಅಪಾಯಕಾರಿಯಾದ ಕಾರವಾರ-ಅಂಕೋಲಾ ನಡುವಿನ ತಿರುವು-ಮುರುವು, ಘಟ್ಟ-ಇಳಿಜಾರಿನ ದಾರಿಯಲ್ಲೇಲ್ಲಾದರೂ ಡಿಸಿಎಫ್ ಗೋಕುಲ್ ಕಾರು ಅಪಘಾತಕ್ಕೆ ಈಡಾಗುವಂತೆ ಮಾಡುವ ಸಂಚಾಗಿತ್ತಾ? ಡಿಸಿಎಫ್‌ನ ಡ್ರೈವರ್‌ನ ಕಂಗೆಡಿಸಿ ಕಾರು ಕಣಿವೆಗೆ ಕೆಡುವ ಸ್ಕೆಚ್ ಏನಾದರೂ ಇತ್ತಾ?

ಇಂಥ ಪ್ರಶ್ನೆಗಳೀಗ ಎದುರಾಗಿವೆ! ಕಳ್ಳ ಅದಿರು ಸಾಮ್ರಾಜ್ಯವನ್ನೇ ನಡುಗಿಸಿರುವ ಡಿಸಿಎಫ್ ಗೋಕುಲ್ ಮೇಲೆ ರೆಡ್ಡಿಸ್‌ಗಳಿಗೆ ಕೆಂಗಣ್ಣಿರುವುದು ಸಹಜ. ಈ ರೆಡ್ಡಿಗಳ ಪಾತಕ ಇತಿಹಾಸವೇ ಹಾಗಿದೆ. ತಮಗೆ ಕಿರಿಕಿರಿ ಮಾಡುವರ ತಲೆ ತೆಗೆಯುವ ಅಥವಾ ನಿಷ್ಕ್ರಿಯಗೊಳಿಸುವ ಜಾಯಮಾನ ಅದಿರು ಮಾಫಿಯಾದ್ದು. ಅದು ಇಲ್ಲಿಯತನಕ ನಡೆದುಬಂದ ರಕ್ತಸಿಕ್ತ ಇತಿಹಾಸ. ಹೀಗಾಗಿ ಲೋಕಾಯುಕ್ತರ ಆದೇಶದಂತೆ ತನ್ನ ಡ್ಯೂಟಿ ಪ್ರಾಮಾಣಿಕವಾಗಿ ಮಾಡಿದ ಡಿಸಿಎಫ್ ಗೋಕುಲ್ ಗಂಡಾಂತರದಲ್ಲಿರುವುದಂತೂ ಖರೆ.

ಇದಕ್ಕೂ ಮೊದಲು ಕೆಲವು ಅನುಮಾನಾಸ್ಪದ ಎಲಿಮೆಂಟುಗಳು ಗೋಕುಲ್‌ರ ಕಾರವಾರದ ಮನೆ ಮುಂದೆ ಸುಳಿದಾಡುವುದು, ಅವರ ಮನೆಗೆ ನುಗ್ಗಲು ಪ್ರಯತ್ನಿಸಿದ್ದೂ ಇದೆಯಂತೆ. ಆದರೆ ಅದ್ಯಾಕೋ ಈ ಖಡಕ್ ಅಧಿಕಾರಿ ಈ ಕಾರ್ ಚೇಸ್, ಶಂಕಿತರ ಓಡಾಟದ ಬಗ್ಗೆ ಬಾಯಿಯೇ ಬಿಡುತ್ತಿಲ್ಲ, ಆದರೆ ಅರಣ್ಯ ಇಲಾಖೆಯಲ್ಲಿದು ಜನಜನಿತ!

ಒಟ್ಟಿನಲ್ಲಿ ಎಂತೆಂಥ ಪಾಲ್ಕ ಮಾಡಿದರೂ, ರಾಜ್ಯದ ಗಡಿ ಬದಲಿಸಿದರೂ ದಕ್ಕಿಸಿಕೊಂಡಿದ್ದ ರಾಜ್ಯ ಸರ್ಕಾರವನ್ನೇ ತನ್ನ ಕಿರುಬೆರಳ ಇಶಾರೆಯಲ್ಲಿ ಕುಣಿಸುವ ರೆಡ್ಡೀಸ್‌ಗಳು ಬೇಲೆಕೇರಿ ಬಂದರಿನಿಂದಾದ ಕೋಟ್ಯಂತರ ರೂ. ಅದಿರು ಕಳ್ಳ ಸಾಗಾಣಿಕೆ ಕೇಸಿನ ಕುಣಿಕೆಯಲ್ಲಿ ಸಿಕ್ಕಿಬಿದ್ದಿದ್ದಾರೆ. ಈ ಪಾತಕವನ್ನು ಬಯಲು ಗೊಳಿಸಿದ್ದು ಕಾನೂನು ನಿಷ್ಠ ಡಿಸಿಎಫ್ ಗೋಕುಲ್. ಹಾಗಾಗಿ ಗೋಕುಲ್ ಅದಿರು ಮಾಫಿಯಾದ ಟಾರ್ಗೆಟ್ ಆಗಿದ್ದಾರಾ? ಇಂಥಾದ್ದೊಂದು ಅನುಮಾನ ಅವರ ಕಾರ್‌ಚೇಸ್ ಪ್ರಕರಣ ಹುಟ್ಟುಹಾಕಿದೆ.

● ನಮೂಶ

ಶಿವಾನಂದ ಮುತ್ತಣ್ಣವರ್ ಮಂಗ್ಯಾಟ


ನೆಲಸಮವಾದ ಮನೆ ಮುಂದೆ ನಿರ್ಗತಿಕ ಹನುಮವ್ವ

ಹುಬ್ಬಳ್ಳಿ ಮಹಾನಗರ ಪಾಲಿಕೆಯ ಪುಡಿ ಕಾರ್ಪೊರೇಟರ್ ಶಿವಾನಂದ ಮುತ್ತಣ್ಣವರ್ ವೃದ್ಧ ದಲಿತ ಮಹಿಳೆಯನ್ನು ಬೀದಿ ಪಾಲಾಗಿಸಿದ್ದಾನೆ. ಉಸುಕು, ಕಡಿ, ಇಟ್ಟಂಗಿ ಅಂತ ಮಾರುತ್ತಾ ಪಾಲಿಕೆ ಜಾಗದಲ್ಲೊಂದು ಗುಡಿಸಲು ಕಟ್ಟಿ ವಾಸಿಸುತ್ತಿದ್ದಾಕೆ ಹನುಮವ್ವ ಅಮರಾವತಿ ಎಂಬ ವೃದ್ಧೆ. ಧೂರ್ತ ಶಿವಾನಂದ ವೈಯಕ್ತಿಕ ಹಿತಾಸಕ್ತಿಗಳಿಗೋಸ್ಕರ ಆಕೆಯ ಗುಡಿಸಲನ್ನು ಕೆಡವಿ ಕೇಕೆ ಹಾಕಿದ್ದಾನೆ.

ನಡೆದದ್ದು ಇಷ್ಟು

ಹುಬ್ಬಳ್ಳಿ ಮಹಾನಗರ ಪಾಲಿಕೆಯ ೫೭ ನೇ ವಾರ್ಡ್‌ನ ವೀರಾಪುರ ಓಣಿಯಲ್ಲಿ ಪಾಲಿಕೆಗೆ ಸೇರಿದ ಒಂದಿಷ್ಟು ಜಾಗವಿದೆ. ಅದಾಗಲೇ ನಿರ್ಗತಿಕಳಾಗಿದ್ದ ಭೋವಿವಡ್ಡರ ಸಮುದಾಯಕ್ಕೆ ಸೇರಿದ ಹನುಮವ್ವ ಆ ಜಾಗದಲ್ಲೇ 1987 ರಲ್ಲಿ ಬಾಡಿಗೆ ಆಧಾರದ ಮೇಲೆ ಪರವಾನಗಿ ಪಡೆದು ಗುಡಿಸಲು ಹಾಕಿಕೊಂಡಿದ್ದಳು. ಈಕೆ ಉಸುಕು, ಕಡಿ ಮುಂತಾದುವನ್ನು ಮಾರುತ್ತಾ ಜೀವನ ನಿರ್ವಹಣೆಗೆ ಹರಸಾಹಸ ಪಡುತ್ತಿರುವವಳು. ಆದರೆ ಶಿವಾನಂದ ಮುತ್ತಣ್ಣವರ ಏಕಾಏಕಿ ಹನುಮವ್ವಳ ಗುಡಿಸಲು ಕೆಡವಿ ಜಾಗ ತೆರವುಗೊಳಿಸಿದ್ದಾನೆ. ಕೇಳಿದವರಿಗೆ ಅಕ್ರಮ ಒತ್ತುವರಿ ಅದೂ ಇದೂ ಅಂತೆಲ್ಲ ಸಮಜಾಯಿಷಿ ನೀಡಿದ್ದಾನೆ.



ವಾಸ್ತವವೆಂದರೆ, ಈ ಜಾಗದ ಪಕ್ಕದಲ್ಲೇ ಇರುವ ಪಾಲಿಕೆ ಒಡೆತನದ ಸ್ವತ್ತಿನಲ್ಲಿ ಅನಧಿಕೃತ ದೇವಸ್ಥಾನ ಕಟ್ಟಡವೊಂದು ತಲೆ ಎತ್ತಿದೆ. ಇದು 10 ವರ್ಷಗಳ ಹಿಂದೆಯೇ ನಿರ್ಮಾಣಗೊಂಡಿದೆ. ಇದರ ಬಾಜಿನಲ್ಲೇ ಅನಧಿಕೃತವಾಗಿ ಬಾಲವಾಡಿಯನ್ನೂ ನಡೆಸಲಾಗುತ್ತಿದೆ. ಇವೆರಡೂ ಕೂಡಾ ಸರ್ಕಾರಿ ಶಾಲೆಯ ಜಾಗದಲ್ಲೇ ಇವೆ. ಇಂಥ ಅಕ್ರಮ ಕಣ್ಣೆದುರೇ ಇದ್ದರೂ ತಲೆ ಕೆಡಿಸಿಕೊಳ್ಳದ ಶಿವಾನಂದ ಪಾಪದ ವೃದ್ಧೆಯನ್ನು ಬೀದಿಪಾಲು ಮಾಡಿದ್ದು ಅನೇಕ ಗುಮಾನಿಗಳಿಗೆ ಕಾರಣವಾಗಿವೆ. ಅದರ ಬೆನ್ನು ಬಿದ್ದರೆ ಶಿವಾನಂದನ ವೈಯಕ್ತಿಕ ಹಿತಾಸಕ್ತಿಗಳು ಪಟ್ಟ ಪೂರಾ ಬೆತ್ತಲಾಗುತ್ತವೆ.

ವೈಯಕ್ತಿಕ ತೆವಲು

ಶಿವಾನಂದ ವೀರಾಪುರ ಓಣಿಯಲ್ಲೇ ಇತ್ತೀಚೆಗೊಂದು ಜಾಗ ಖರೀದಿಸಿದ್ದಾನೆ. ಅದರಲ್ಲಿ ಭರ್ಜರಿ ಬಹುಮಹಡಿ ಕಟ್ಟಡವೊಂದನ್ನು ಎಬ್ಬಿಸುವುದು ಈತನ ಉದ್ದೇಶವಾಗಿತ್ತು ಆದರೆ ಆ ಜಾಗಕ್ಕೆ ಹೊಂದಿಕೊಂಡಿದ್ದ ಟ್ರಾನ್ಸ್‌ಫಾರ್ಮರ್ ಯೂನಿಟ್ ಈ ಉದ್ದೇಶಕ್ಕೆ ಅಡ್ಡಗಾಲಾಯ್ತು.


ಶಿವಾನಂದ

ಇದಾದದ್ದೇ ಟ್ರಾನ್ಸ್‌ಫಾರ್ಮರನ್ನು ಸ್ಥಳಾಂತರಿಸಲು ಜಾಗ ಹುಡುಕಾಡ ಹತ್ತಿದ ಶಿವಾನಂದನಿಗೆ ವೃದ್ಧೆ ಹನುಮವ್ವಳ ಬಡಪಾಯಿ ಗುಡಿಸಲು ಕಾಣಿಸಿದೆ. ಮತ್ತು ಟ್ರಾನ್ಸ್‌ಫಾರ್ಮರ್ ಸ್ಥಾಪನೆಗೆ ಅದೇ ಪ್ರಶಸ್ತ ಜಾಗ ಅಂತಲೂ ಅನಿಸಿದೆ. ಇದರನ್ವಯ ಯಾವ ಬಲವೂ ಇಲ್ಲದ ದಲಿತ ಮಹಿಳೆಯನ್ನು ಬೀದಿ ಪಾಲಾಗಿಸಿ ಪಾಲಿಕೆಯ ಜಮೀನು ರಕ್ಷಿಸಿದೆನೆಂಬಂತೆ ಪೋಸು ನೀಡಹತ್ತಿದ.

ಓಣಿಯಿಂದ ಬೋಣಿ!

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಶಿವಾನಂದ ವೀರಾಪುರ ಓಣಿಯಿಂದ ಸ್ಪರ್ಧಿಸಿದ್ದ. ಥರಹೇವಾರಿ ನಾಟಕ ಮಾಡಿದ ಈತ ದಲಿತ, ಅಲ್ಪಸಂಖ್ಯಾತ ಸಮುದಾಯದ ಬಡ ಬಗ್ಗರ ಪ್ರೀತಿ ಗಳಿಸುವಲ್ಲಿ ಯಶಸ್ವಿಯಾದ. ಈ ಕಾರಣದಿಂದ ಓಣಿಯ ಜನ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಬರ್ನಾಲಸ್ ಎಂಬಾತನನ್ನು ಮನೆಗಟ್ಟಿ ಈ ಅಯೋಗ್ಯನಿಗೆ ಪಾಲಿಕೆಯ ದಾರಿ ತೋರಿಸಿದ್ದರು.

ಹೀಗೆ ಆಯ್ಕೆಯಾಗುತ್ತಲೇ ಗೆಲ್ಲಿಸಿದ ಓಣಿಯ ಜನರನ್ನು ಮರೆಯುತ್ತಾ ಬಂದ ಶಿವಾನಂದ ತನ್ನ ಗುರು ಅಶೋಕ ಕಾಟವೆ ಮೂಲಕ ಈಶ್ವರಪ್ಪನಿಗೆ ಹತ್ತಿರವಾಗಿ 'ನಾ ಕುರುಬ ಆದೇನಿ' ಅಂತ ಹಲ್ಲುಗಿಂಜ ಹತ್ತಿದ. ಈಶ್ವರಪ್ಪ ಹತ್ತಿರ ಬಿಟ್ಟುಕೊಂಡದ್ದೇ ಈತನ ಪುಂಡಾಟಿಕೆಗೆ ಮತ್ತಷ್ಟು ಬಲ ನೀಡಿದಂತಾಯ್ತು.

ಹಿಂದಿನ ಪಾಲಿಕೆ ಸದಸ್ಯರು ಈ ವಾರ್ಡಿನಲ್ಲಿ ಕಟ್ಟಿಸಿದ್ದ ಸಮುದಾಯ ಭವನವನ್ನೇ ಕಬ್ಜಾ ಮಾಡಿಕೊಂಡ ಶಿವಾನಂದ ಅದನ್ನು ವಸೂಲಿಯ ಅಡ್ಡವಾಗಿ ಮಾರ್ಪಡಿಸಿಕೊಂಡ. ಗಂಡಹೆಂಡಿರ ಜಗಳದಿಂದ ಹಿಡಿದು, ಬೇರೆಬೇರೆ ತಗಾದೆಗಳನ್ನು ಪೊಲೀಸ್ ಸ್ಟೇಷನ್ ತಲುಪದಂತೆ ನೋಡಿಕೊಂಡು ಈತನೇ ನ್ಯಾಯ ಹೇಳ ತೊಡಗಿದ. ಇಲ್ಲಿ ಹಣದ ಥೈಲಿಯೇ ಮಾನದಂಡವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಈ ಉಮೇದಿಗೆ ಬಿದ್ದ ಶಿವಾನಂದ ರಸ್ತೆ ಕೆಟ್ಟರೂ, ವಾರಗಟ್ಟಲೆ ನೀರು ನಿಂತರೂ ತಲೆ ಕೆಡಿಸಿಕೊಳ್ಳದೆ ಇದ್ದ ಶೌಚಾಲಯವನ್ನೂ ಕೆಡವಿ ಗೆಲ್ಲಿಸಿದ ಜನರಿಗೆ ನರಕದರ್ಶನ ಮಾಡಿಸಹತ್ತಿದ.

ದುಡ್ಡಿಗಾಗಿ.....

ಹಣ ಅಂತೊಂದು ಬರುವುದಾದರೆ ಎಂಥಾ ಕೆಲಸವನ್ನಾದರೂ ಮಾಡಲು ಹೇಸದ ವ್ಯಕ್ತಿತ್ವ ಶಿವಾನಂದನದು.

ಅಶೋಕ ಕಾಟವೆಯ ಹಿಂದೆಮುಂದೆ ಸುತ್ತುತ್ತಾ ಆ ಮೂಲಕವೇ ಒಂದಷ್ಟು ಬಾಚಿಕೊಂಡ ಶಿವಾನಂದ, ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ಖಾವಿ ಜಗಳ ನಡೆದಾಗ ರುದ್ರಮುನಿ ಎಂಬ ಸ್ವಾಮಿಯ ಬಾಡಿಗಾರ್ಡ್ ಆಗಿದ್ದ. ಈ ಪವಿತ್ರ ಕೆಲಸಕ್ಕೆ ಪ್ರತಿಯಾಗಿ ಲಕ್ಷಾಂತರ ರೂಪಾಯಿ ಭಕ್ಷೀಸು ಪಡೆದಿದ್ದ.

ಇಂಥವನನ್ನು ತಮ್ಮ ಹುಡುಗನೆಂದೇ ಸಂಭ್ರಮಿಸಿ ಗೆಲ್ಲಿಸಿದ್ದ ವೀರಾಪುರ ಓಣಿಯ ಜನತೆ ಇದೀಗ ಅಕ್ಷರಶಃ ಭ್ರಮನಿರಸನಗೊಂಡಿದ್ದಾರೆ. ಅದೇ ಆಕ್ರೋಶವಾಗಿ ಮಾರ್ಪಟ್ಟು ಹುನುಮವ್ವಳ ಪ್ರಕರಣದಲ್ಲಿ ಶಿವಾನಂದನಿಗೆ ತದುಕಲೂ ರೆಡಿಯಾಗಿ ನಿಂತಿದ್ದಾರೆ.

ಇಂಥಾ ಶಿವಾನಂದ ಅಶೋಕ ಕಾಟವೆ ಹಾಗೂ ಈಶ್ವರಪ್ಪನ ಬೆಂಬಲದಿಂದ ಮೆರೆದಾಡಹತ್ತಿದ್ದಾನೆ. ಅದಕ್ಕೀಗ ಹನುಮವ್ವಳ ಬದುಕು ಬಲಿಯಾಗಿದೆ. ಹೀಗೇ ಬಿಟ್ಟರೆ ವೀರಾಪುರ ಓಣಿಯ ಇನ್ನಷ್ಟು ಬಡಪಾಯಿಗಳು ಆ ಲಿಸ್ಟಿನಲ್ಲಿ ಜಮೆಯಾಗುವ ಸೂಚನೆಗಳಿವೆ.

ಅದಾಗುವ ಮುನ್ನ ಶಿವಾನಂದನ ಮೆರೆದಾಟಕ್ಕೊಂದು ಬ್ರೇಕ್ ಹಾಕಬೇಕಿದೆ.

• ಹುಬ್ಬಳ್ಳಿಯಾಂವ

ಭ್ರಷ್ಟೆ ವಿಜಯಾ ವಿರುದ್ಧ ಪರಿಮಳಾ ಆಕ್ರೋಶ!

ಕಳೆದ ಸಂಚಿಕೆಯಲ್ಲಿ ಮಲೈ ಮಹದೇಶ್ವರ ಬೆಟ್ಟದ ದೇವಸ್ಥಾನದ ಇಓ ವಿಜಯಾಳ ಕುರಿತಾಗಿ ಪ್ರಕಟಿಸಲಾಗಿದ್ದ ವರದಿಯ ಬಗ್ಗೆ ಪರಿಮಳಾ ನಾಗಪ್ಪ ಪ್ರತಿಕ್ರಿಯಿಸಿದ್ದಾರೆ. ಭ್ರಷ್ಟೆ ವಿಜಯಾಳ ಆಮದಾನಿಯಲ್ಲಿ ತನ್ನ ಪಾಲೂ ಇದೆಯೆಂಬುದನ್ನು ನಿರಾಕರಿಸಿರುವ ಪರಿಮಳಾ ಅದಕ್ಕೆ ಸ್ಪಷ್ಟನೆಯೆಂಬಂತೆ ವಿಜಯಾಳ ಮುಕ್ಕುವಿಕೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಾನೇ ಭ್ರಷ್ಟೆ ವಿಜಯಾಳನ್ನು ಬೆಟ್ಟದ ಇಓ ಆಗಿ ತಂದು ಕೂರಿಸಿರುವುದನ್ನು ಒಪ್ಪಿಕೊಂಡಿರುವ ಪರಿಮಳಾ, ಆಕೆಯ ಭ್ರಷ್ಟ ಚಟುವಟಿಕೆಗಳಿಗೆ ತಾನು ಹೊಣೆಗಾರಳಲ್ಲ ಅಂತಲೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಬಾಯಿಂದಲೇ ಹೊರಬಿದ್ದ ಇನ್ನೊಂದು ಸತ್ಯವೆಂದರೆ; ಖುದ್ದು ಅವರೇ ವಿಜಯಾಳ ವರ್ಗಾವಣೆಗಾಗಿ ಪ್ರಯತ್ನಿಸಿದ್ದಾರೆ!


ವಿಜಯಾ

ಇದು ವಿಜಯಾಳ ಅಖಂಡ ಭ್ರಷ್ಟಾಚಾರಕ್ಕೆ ಸ್ಪಷ್ಟ ಸಾಕ್ಷಿ. ಪರಿಮಳಾರ ಮಾತಿನ ಪ್ರಕಾರ ನೋಡಹೋದರೂ ಕೋಟ್ಯಂತರ ರೂ.ಗಳ ನಿವ್ವಳ ಆದಾಯವಿರುವ ಬೆಟ್ಟದ ಆಡಳಿತ ವಿಜಯಾಳ ಸುಪರ್ದಿಯಲ್ಲಿ ಸೆಟ್ಟಗೆ ನಡೆಯುತ್ತಿಲ್ಲ.

ಪರಿಮಳಾರ ಪತಿ ದಿವಂಗತ ಎಚ್. ನಾಗಪ್ಪ ಹಾಗೂ ಅವರ ತಂದೆ ಹುಚ್ಚಪ್ಪನವರೂ ಸೇರಿದಂತೆ ಇಡೀ ಕುಟುಂಬ ಬೆಟ್ಟದ ಬಗ್ಗೆ ಭಯ ಭಕ್ತಿ ಇಟ್ಟುಕೊಂಡಿದೆಯಂತೆ. ಪರಿಮಳಾರ ಪ್ರಕಾರ ಅವರ ಕುಟುಂಬದವರು ಇಂದಿಗೂ ಬೆಟ್ಟಕ್ಕೆ ಬಂದು ಊಟ ಮಾಡಿದರೆ ಹುಂಡಿಗೆ ಕಾಣಿಕೆ ಹಾಕಿ ಹೋಗುತ್ತಾರಂತೆ. ವಿಚಾರ ಹೀಗಿರುವಾಗ ಪವರ್‌ಫುಲ್ ದೇವರಾದ ಮಲೈಮಹ ದೇಶ್ವರನ ಹುಂಡಿಗೆ ಕೈಹಾಕುವ ಧೈರ್ಯ ನಮಗೆಲ್ಲಿಂದ ಬರಬೇಕು ಎಂಬುದು ಪರಿಮಳಾರ ಪ್ರಶ್ನೆ.



ವಿಜಯಾಳ ಭ್ರಷ್ಟ ತಾಂಡವ ಅದೆಷ್ಟು ಎಲ್ಲೆ ಮೀರಿದೆಯೆಂದರೆ, ದೇವಸ್ಥಾನಕ್ಕೆ ಬರುವ ಪರಿಮಳರ ಸ್ನೇಹಿತರಿಗೂ ಕೆಲವೊಮ್ಮೆ ರೂಂ ಕೊಡಿಸಲು ಕಷ್ಟ. ಸಿಕ್ಕಿದರೂ ಅಲ್ಲಿ ವಾಸಿಸಲು ಸಾಧ್ಯವಿಲ್ಲ-ಈ ವಿಚಾರ ಹೇಳಿಕೊಳ್ಳುವ ಪರಿಮಳಾ ಭ್ರಷ್ಟೆ ವಿಜಯಾಳನ್ನ ಎತ್ತಂಗಡಿ ಮಾಡಿಸುವ ಜವಾಬ್ದಾರಿಯನ್ನು ಹಾಲಿ ಶಾಸಕ ಆರ್. ನರೇಂದ್ರರ ಹೆಗಲಿಗೆ ವರ್ಗಾಯಿಸಿದ್ದಾರೆ!

ಪರಿಮಳಾ ವಿಜಯಾಳನ್ನು ಎತ್ತಂಗಡಿ ಮಾಡಿಸುವ ಸಲುವಾಗಿ ತಮ್ಮದೇ ಪಕ್ಷದ ಸರ್ಕಾರದ ಹಲವರ ಬಳಿ ಅಲವತ್ತುಕೊಂಡಿದ್ದಲ್ಲದೆ, ವಿ. ಸೋಮಣ್ಣನಿಗೂ ಅರಿಕೆ ಮಾಡಿಕೊಂಡಿದ್ದರೂ ವಿಜಯಾ ಕುಂತಲ್ಲೇ ಕುಂತು ಮೇಯುತ್ತಿದ್ದಾಳೆ.

ಆಯ್ತು, ಪರಿಮಳಾ ನಾಗಪ್ಪ ಪತ್ರಿಕೆಯಲ್ಲಿ ತನ್ನ ಬಗ್ಗೆ ಮಾಡಿರುವ ಆಪಾದನೆಗಳಿಗೆ ಮೇಲ್ಪಂಡ ಪ್ರತಿಕ್ರಿಯೆ ನೀಡಿದ್ದಾರೆ. ಅದರ ಪ್ರಕಾರ ಅವರು ಮಹದೇಶ್ವರ ಬೆಟ್ಟದ ದುಡ್ಡಿನ ಆಸೆಗೆ ಬಿದ್ದಿಲ್ಲ. ಆದರೆ... ಮಾಜಿ ಶಾಸಕಿಯಾಗಿರುವ ಅವರಿಗೆ ಕ್ಷೇತ್ರದಲ್ಲಾಗುವ ಇಂಥಾ ಚಟುವಟಿಕೆ ತಡೆಯುವ ಜವಾಬ್ದಾರಿಯಿದೆ.

'ಒಳ್ಳೆಯವಳೆಂದುಕೊಂಡು ತಂದು ಕೂರಿಸಿದೆ. ಇಂಥವಳೆಂದು ಗೊತ್ತಿರಲಿಲ್ಲ' ಎಂಬ ಪಶ್ಚಾತ್ತಾಪದ ಮಾತುಗಳಿಂದಲೂ ಪ್ರಯೋಜನವಿಲ್ಲ. ಪರಿಮಳಾರ ಕುಟುಂಬದವರಿಗೆ ಬೆಟ್ಟದ ಬಗ್ಗೆಯಿರುವ ಭಯಭಕ್ತಿಯೇ ಎಲ್ಲ ಭಕ್ತರಿಗೂ ಇದೆ. ಅವರೂ ಕೂಡಾ ಮಹದೇಶ್ವರ ಬೆಟ್ಟದ ಹುಂಡಿಗೆ ಕಾಣಿಕೆ ಹಾಕುತ್ತಾರೆ. ಆದರೆ ಅದೆಲ್ಲವನ್ನ ವಿಜಯಾಳಂಥ ಖದೀಮರು ಕೊಳ್ಳೆ ಹೊಡೆದರೆ, ಜನ ಪ್ರತಿನಿಧಿಗಳೇ ಹೀಗೆ ಅಸಹಾಯಕತೆಯಿಂದ ಕೈಚೆಲ್ಲಿದರೆ ಹೇಗೆ?

ಪರಿಮಳಾ ನಾಗಪ್ಪನವರು ಈ ಬಗ್ಗೆ ಯೋಚಿಸಬೇಕಿದೆ.

• ಕೊಳ್ಳೇಗಾಲ ಚಿಕ್ಕಮಾಳಿಗೆ

ಜಲ ಮಂತ್ರಿ ಊರಲ್ಲಿ ಮಲ ಸ್ನಾನ

ದುಷ್ಟರ ವಿರುದ್ಧ ದಯನೀಯ ಪ್ರತಿಭಟನೆ



ಇದು ಮನುಷ್ಯ ಜಗತ್ತು ತಲೆತಗ್ಗಿಸುವಂತಹ ಘಟನೆ. ಸವಣೂರಿನ ಭಂಗಿ ಸಮುದಾಯದ ಮಂದಿ ಮನುಷ್ಯರ ಮಲವನ್ನು ಮೈಮೇಲೆ ಸುರುವಿಕೊಂಡು ಪ್ರತಿಭಟನೆ ತೋರಿದ್ದಾರೆ. ಇದು ಅದೊಂದು ಸಮುದಾಯದ ಸ್ಥಿತಿಯಲ್ಲ, ಈ ನೆಲದ ದಮನಿತ ಜನವರ್ಗದ ನಿತ್ಯ ಪರಿಸ್ಥಿತಿಯೂ ಹೌದು. ತಮ್ಮ ಬದುಕನ್ನೇ ಅಲ್ಲಾಡಿಸ ಹೊರಟ ದುಷ್ಟರ ವಿರುದ್ಧ ದಯನೀಯ ಪ್ರತಿಭಟನೆ ನಡೆಸಿದ ಭಂಗಿ ಸಮುದಾಯದ ನೈಜಾಂತರಾಳ ತೆರೆದಿಡುವ ಪ್ರಯತ್ನವಿದು.

…ೇತ ಯಾವುದೇ ಜನಾಂಗದವನಾಗಿರಲಿ, ಪ್ರತಿಯೊಬ್ಬ …ಷ್ಯನೂ ಆರೋಗ್ಯಕರ ಬದುಕು ಸಾಗಿಸಬೇಕೆಂಬ …ಕೊತ್ತಿರುತ್ತಾನೆ. ಆದರೆ ಹಾವೇರಿ ಜಿಲ್ಲೆಯ ಸವಣೂರ …ವ ಭಂಗಿ ಜನಾಂಗಕ್ಕೆ ಈ ಮಾತು ಅನ್ವಯಿಸುವುದಿಲ್ಲ, …ಂದರೆ ಇವರು ಪ್ರತಿದಿನ ಪ್ರತಿಕ್ಷಣ ಒಂದಲ್ಲ ಒಂದು ಸಮಸ್ಯೆ ಅವಮಾನ ಎದುರಿಸುವಂತಾಗಿದೆ. ಇದಕ್ಕೆಲ್ಲ … ಇಲ್ಲಿನ ಪುರಸಭೆ. ಬಡತನದ ಬೇಗೆಯಲ್ಲಿ ಜೀವನ …ವುದೇ ಒಂದು ಸಾಹಸ ಎಂದುಕೊಂಡಿರುವ ಈ …ದಾಯದ 7 ಕುಟುಂಬಗಳು ಸಾರ್ವಜನಿಕರ ಮಲ …ಯುವುದನ್ನೇ ಕಾಯಕವನ್ನಾಗಿಸಿಕೊಂಡಿದ್ದಾರೆ. ಇಂಥಾ …ಲ್ಲಿರುವ ಅಕ್ಷರ ಜ್ಞಾನವಿಲ್ಲದ ಈ ಜನರನ್ನು ಊರಿಂದ …ಗೆ ನೂಕುವ ಎಲ್ಲ ಸಿದ್ಧತೆಯನ್ನು ಲಾರೀ ಪಡೆ …ಕೊಂಡಿದೆ. ಸೂರು ಕಳೆದುಕೊಳ್ಳುವ ಭೀತಿಯಲ್ಲಿರುವ




…ಈ ಜನ ದಾರಿ ಕಾಣದೆ ಸಾರ್ವಜನಿಕರ ಮಲವನ್ನು …ಮೇಲೆ ಸುರಿದುಕೊಂಡು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಿಂಸೆ ತಾಳಲಾಗದೆ...

ಈ ಜನರನ್ನು ಏಕಾಏಕಿ ಒಕ್ಕಲೆಬ್ಬಿಸುವ ಷಡ್ಯಂತ್ರವನ್ನು …ಯು ಆಡಳಿತ ನಡೆಸುತ್ತಿದೆ. ನೀರು, ವಿದ್ಯುತ್-ಹೀಗೆ …ಮೂಲಭೂತ ವ್ಯವಸ್ಥೆಗಳನ್ನು ಖಡಿತಗೊಳಿಸುವ …ಮೂಲಕ ಅವರನ್ನು ಸ್ವಯಂಪ್ರೇರಿತರಾಗಿ ಜಾಗ ಖಾಲಿ …ಡುವಂತೆ ಷಡ್ಯಂತ್ರ ನಡೆಸಲಾಗುತ್ತಿದೆ. ಸವಣೂರಿನ …ನಸಭೆ ಅಧಿಕಾರಿ ಮತ್ತು ಅಲ್ಲಿಯ ಅಧ್ಯಕ್ಷ ಹಾಗೂ …ಸದಸ್ಯರು ಪ್ರತಿನಿತ್ಯ ನೀಡುವ ಹಿಂಸೆ ತಾಳಲಾಗದೆ ಭಂಗಿ …ನಾಂಗ ಇಂಥ ದಯನೀಯ ಸ್ಥಿತಿ ತಲುಪುವಂತಾಗಿದೆ. …ಮ್ಮ ಸಂಕಟಕ್ಕೆ ಸ್ಪಂದಿಸದ ಸ್ಥಳೀಯ ವ್ಯವಸ್ಥೆ ವಿರುದ್ಧ …ಕ್ರೋಶಗೊಂಡು ಪುರಸಭೆ ಆವರಣದಲ್ಲೇ ಭಂಗಿ …ಮುದಾಯದ ನಾಲ್ಕೈದು ಜನ ಮೈಮೇಲೆ ಸಾರ್ವಜನಿಕರ …ಮಲವನ್ನು ಸುರಿದುಕೊಂಡು ತಮ್ಮ ಮೇಲೆ ಆಗುತ್ತಿರುವ

ದೌರ್ಜನ್ಯವನ್ನು ಹೊರಗೆಡವಿದ್ದಾರೆ. ಇದು ನಡೆದದ್ದು ರಾಜ್ಯದ ಜಲಮಂತ್ರಿ ಬಸವರಾಜ ಬೊಮ್ಮಾಯಿಯ ಶಿಗ್ಗಾಂವಿಯ ಕ್ಷೇತ್ರದಲ್ಲಿ.


80 ವರ್ಷಗಳ ಹಿಂದೆ ಸವಣೂರ ನವಾಬರ ಆಡಳಿತದ ಸಮಯದಲ್ಲಿ ಈ ಊರಿಗೆ ಕಾಲಿಟ್ಟ ಭಂಗಿ ಸಮುದಾಯಕ್ಕೆ ಊರನ್ನು ಸ್ವಚ್ಛ ಮಾಡುವ ಕೆಲಸ ವಹಿಸಲಾಯಿತು. ಅದರಂತೆ ಅವರಿಗೆ ವಾಸವಾಗಿರಲು ಊರ ಹೊರಗೆ ತಗಡಿನ ಶೆಡ್ಡನ್ನು ನೀಡಲಾಯಿತು. ಆವಾಗಿನಿಂದ ಈ ಜನ ಅಲ್ಲೇ ವಾಸವಾಗಿದ್ದಾರೆ. ಈಗ ಬದುಕಿರುವವರು ನಾಲ್ಕನೇ ಪೀಳಿಗೆಯವರಂತೆ. ಈ ಜನ ಪಾಯಖಾನೆ (ಗುಂಡಿ ಕಕ್ಕಸು)ಗಳನ್ನು ಸ್ವಚ್ಛಗೊಳಿಸುವುದನ್ನೇ ಕೆಲಸವನ್ನಾಗಿಸಿ



ಕೊಂಡು ಬದುಕುತ್ತಾ ಬಂದಿದ್ದಾರೆ. ನಂತರದಲ್ಲಿ ಬಂದ ಗ್ರಾಮ, ಪಟ್ಟಣ ಪಂಚಾಯತ್ ಹಾಗೂ ಈಗಿನ ಪುರಸಭೆ ಇವರಿಗೆ ಯಾವುದೇ ಉದ್ಯೋಗ ಭದ್ರತೆ ನೀಡದೆ ಅವಶ್ಯಕತೆಗೆ ತಕ್ಕಂತೆ ಬಳಸಿಕೊಳ್ಳುತ್ತಾ ಬಂದಿವೆ. ಹೀಗಾಗಿ ಈ ಜನ ಮನೆಗಳ ಪಾಯಖಾನೆಗಳನ್ನು ಸ್ವಚ್ಛಗೊಳಿಸಿ ಅವರು ಕೊಟ್ಟಷ್ಟೆ ಹಣವನ್ನು ಪಡೆದು ಬದುಕುತ್ತಾ ಬಂದಿದ್ದಾರೆ.

ಪಾಪಿ ಪರಾಶ್ ಕಣ್ಣು ಬಿತ್ತು

ಆದರೆ ಈ ಜನರ ತಟುಕು ಆಸರೆಯಂತಿರುವ ಮನೆಗಳ ಮೇಲೆ ಹಾಲಿ ಪುರಸಭಾ ಅಧ್ಯಕ್ಷ ಅಬ್ದುಲ್ ಪರಾಶ್‌ನ ಕಣ್ಣು ಬಿದ್ದಿತು. ಪಟ್ಟಣದ ಮಧ್ಯ ಭಾಗದಲ್ಲಿರುವ ಈ ಮನೆಗಳನ್ನು ತೆರವುಗೊಳಿಸಿ ಅಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಿಸುವ ದುರಾಸೆ ಈ ಭೂಪನ ತಲೆಹೊಕ್ಕಿತು. ಅಧಿಕಾರ ಹಿಡಿದಂದಿನಿಂದಲೂ ಪರ್ಸಂಟೇಜ್‌ಗಾಗಿ ಪ್ರಾಣ ಬಿಡುವ ಪರಾಶ್ ಕೋಟಿ ಸುರುವಿ ಲಕ್ಷ ತೆಗೆಯುವ ಸ್ಕೀಂ ಒಂದಕ್ಕೆ ಸ್ಕೆಚ್ ಹಾಕಿದ್ದಾನೆ. ಭಂಗಿ ಜನರು ವಾಸವಾಗಿರುವ ಮನೆಗಳಿಗೆ ಹೊಂದಿಕೊಂಡೆ ಮೀನು ವ್ಯಾಪಾರ ಮಾಡುವ ಪುರಸಭಾ ಸದಸ್ಯ ಅಲ್ತಾಫ್ ದುಖಾನದಾರ ಎಂಬಾತನೇ ಇದರ ಸೂತ್ರಧಾರ. ಫುಟ್‌ಪಾತ್‌ನಲ್ಲಿ ಮೀನು ಮಾರುವ ಈತ ಪರ್ಮನೆಂಟ್ ಆಗಿ ಜಾಗ ಮಾಡಿಕೊಳ್ಳುವ ಉದ್ದೇಶದಿಂದ ಭಂಗಿ ಜನರನ್ನು ಒಕ್ಕಲೆಬ್ಬಿಸಲು ಈ ಸಂಚನ್ನು ಹೆಣೆದಿದ್ದಾನೆ.



ಪರಾಶ್

ತಿಂಗಳಿಗೊಮ್ಮೆ ಗೂಟದ ಕಾರಿನಲ್ಲಿ ಬಂದುಹೋಗುವ ಬೊಮ್ಮಾಯಿ ಈ ಪಾಪಿಗಳು ಹೇಳಿದ ಮಾತಿಗೆ ಗೋಣಾಡಿಸಿದ್ದಾರೆ. ಪುರಸಭೆಯ 18ನೇ ಹಣಕಾಸಿನ ಯೋಜನೆಯಲ್ಲಿ ಬಿದ್ದಿರುವ ಕೋಟಿಗೂ ಹೆಚ್ಚು ಹಣವನ್ನು ಹೇಗಾದರು ಮಾಡಿ ಲೂಟಿ ಮಾಡಬೇಕು ಎನ್ನುವ ಪರಾಶ್ ಹಾಗೂ ಅಲ್ತಾಫ್ ದುಖಾನದಾರನ ಸ್ಕೆಚ್‌ಗೆ ಬೊಮ್ಮಾಯಿ ಅಸ್ತು ಅಂದಿದ್ದೇ ತಡ, ಭಂಗಿ ಜನರ ಬದುಕಿಗೆ ಬೆಂಕಿ ಇಡಲು ಸಿದ್ಧರಾಗಿಬಿಟ್ಟಿದ್ದಾರೆ. ಭಂಗಿ ಜನರನ್ನು ಹೇಗಾದರು ಮಾಡಿ ಈ ಜಾಗೆಯಿಂದ ಎತ್ತಬೇಕು ಎಂಬ ದುರುದ್ದೇಶದಿಂದ ಅವರ ಮನೆಗಳ ನೀರಿನ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆಯನ್ನು ಕಡಿತಗೊಳಿಸಿದ್ದಲ್ಲದೇ, ಊರಿನ ಕಸವನ್ನು ಅವರ ಅಂಗಳದಲ್ಲಿ ಸುರುವಿ ಬದುಕು ಬೇಸರವಾಗುವಂತಹ ಪರಿಸ್ಥಿತಿಯನ್ನು ಸೃಷ್ಟಿಸಿದ್ದಾರೆ. ಏನೂ ಅರಿಯದ ಭಂಗಿ ಜನ ಇದನ್ನೆಲ್ಲಾ ಕಳೆದ 6 ತಿಂಗಳಿನಿಂದ ಸಹಿಸಿಕೊಳ್ಳುತ್ತಾ ಎಸಿ, ಡಿಸಿ, ಬೆಳಗಾವಿಯ ವಿಭಾಗೀಯ ಆಯುಕ್ತರು ಮುಂತಾದವರಿಗೆ ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯವನ್ನು ವಿವರಿಸುತ್ತಾ ಬಂದಿದ್ದಾರೆ. ಆದರೂ ಏನೂ ಪ್ರಯೋಜನವಾಗಲಿಲ್ಲ.

ಭಂಗಿ ಅಂಗಳದಲ್ಲಿ ಭಟ್ಟಂಗಿಗಳು....

ಭಂಗಿಗಳ ದಯನೀಯ ಸ್ಥಿತಿಗೆ, ಅವರ ಮನವಿಗಳಿಗೆ ಕಿವುಡಾಗಿದ್ದ ಅಧಿಕಾರಿಗಳು ಈಗ ಅವರ ಮನೆ ಮುಂದೆ ಸಾಲುಗಟ್ಟಿ ನಿಂತಿದ್ದಾರೆ. ಪ್ರತಿಭಟನೆಯ ಪರಿಣಾಮದಿಂದ ಜಿಲ್ಲಾಧಿಕಾರಿಯಿಂದ ಹಿಡಿದು ತಾಲೂಕು ಮಟ್ಟದ ಎಲ್ಲ ಅಧಿಕಾರಿಗಳು ಭಂಗಿ ಸಮುದಾಯದ 7 ಕುಟುಂಬಕ್ಕೆ ಸಮಸ್ಯೆ ಬಗೆಹರಿಸುವ ಭರವಸೆ ನೀಡುತ್ತಿದ್ದಾರೆ. ಮಂತ್ರಿ ಬೊಮ್ಮಾಯಿ ಬೆಳಗು ಹರಿಯುವುದರಲ್ಲೇ ಸವಣೂರಿಗೆ ಬಂದು ಸಮಸ್ಯೆ ಬಗೆಹರಿಸಲು ಬೆವರು ಹರಿಸಿದ್ದಾರೆ. ಎದುರಿಗೆ ಬಂದ ಅಧಿಕಾರಿಗಳಿಗೆಲ್ಲ ಥೀ, ಥೂ ಅಂತ ಉಗುಳುತ್ತಿದ್ದಾರೆ. ಇರುವ ಜಾಗದಲ್ಲೇ ಮನೆ ಕಟ್ಟಿ ಕೊಟ್ಟು ಪುರಸಭೆಯೊಳಗೆ ಸರಕಾರಿ ಉದ್ಯೋಗ ನೀಡುವಂತೆ ಅಧಿಕಾರಿಗಳಿಗೆ ಹೇಳಿದ್ದಾರೆ. ಆದರೆ ಇದ್ಯಾವುದಕ್ಕೂ ಪುರಾವೆಗಳಿಲ್ಲ.

ಸವಣೂರಿನ ಭಂಗಿ ಕುಟುಂಬ ಬೀದಿಯಲ್ಲಿ ಮೈಮೇಲೆ ಸಾರ್ವಜನಿಕರ ಮಲದಿಂದ ಸ್ನಾನ ಮಾಡಿ ಪ್ರತಿಭಟಿಸಿದೆ ಎಂದರೆ ನಮ್ಮ ವ್ಯವಸ್ಥೆ ಯಾವ ಮಟ್ಟದಲ್ಲಿದೆ ಎಂಬುದನ್ನು ಆಲೋಚಿಸಬೇಕಿದೆ. ಇದು ನಾಗರಿಕ ಜಗತ್ತು ತಲೆತಗ್ಗಿಸುವಂಥ ಘಟನೆ. ಇದೆಲ್ಲವನ್ನು ಗಮನಿಸುತ್ತಿದ್ದರೆ ನಾಗರಿಕ ಎಂಬ ಪದವೇ ಅರ್ಥಹೀನ ಅನ್ನಿಸುವುದಿಲ್ಲವೇ..? ●

ಭಂಗಿಯರಾಗಿ ಹುಟ್ಟಬಾರದಾಗಿತ್ರಪಾ...



ನಾವು ಭಂಗಿಯರಾಗಿ ಹುಟ್ಟಬಾರದಾಗಿತ್ರಪಾ. ಏನ್ ಮಾಡುವುದು ಹುಟ್ಟೇವಿ ಅಂದಮ್ಯಾಲೆ ಎಲ್ಲಾ ತ್ರಾಸು ಅನುಭವಿಸೇ ಸಾಯಬೇಕು. ಮೊದಲು ಕೀಳು ಜಾತಿ ಅಂತಾ ಊರ ಹೊರಗಿಟ್ರು. ಈಗ ಮನೀನ ಬಡಿಸಿ ಎಲ್ಲೋ ದೂರ ಕಳಸಾಕತ್ತಾರ. ಯಾಕ್ರಿ ಅಂದ್ರ ಅಧಿಕಾರ ಚಲಾಯಿಸ್ತಾರ. ಹಂಗಾರ ನಾವು ಬದುಕೋದ ಅಪರಾಧ ಏನ್ರಿ? ಹಿಂಗ ಆದ್ರ ಎಲ್ಲಾರೂ ಒಂದ ದಿನ ವಿಷ ಕುಡಿದು ಸತ್ತ ಹೋಕ್ಕೇವಿ... ಇದು ಭಂಗಿ ಕುಟುಂಬದ 70 ವರ್ಷದ ಹಿರಿಯ ಜೀವ ನಾಗಮ್ಮ ಭಂಗಿಯ ನೋವಿನ ದನಿ. ಸಂದರ್ಶನಕ್ಕೊಂದು ಭೇಟಿ ನೀಡಿದ ಪತ್ರಿಕೆಯೊಂದಿಗೆ ಹಂಚಿಕೊಂಡ ಅವರ ಬದುಕಿನ ಚಿತ್ರಣ ಮನ ಕಲಕುವಂತಿದೆ.

ಪ್ರಶ್ನೆ: – ಇಂದಿನ ಈ ಬೆಳವಣಿಗೆಗೆ ಏನು ಕಾರಣ ಅಂತೀರಿ?

ಭಂಗಿ ನಾಗಮ್ಮ : ಒನ್ನೆದ್ದು ನಮ್ಮ ಜ್ಯಾತಿ, ಎರಡನೇಯದ್ದು ನಮ್ಮ ಬಡತನ. ಇವೆರಡನ್ನು ಬಂಡವಾಳ ಮಾಡಿಕೊಂಡು ನಮ್ಮನ್ನು ಊರು ಬಿಟ್ಟು ಓಡಿಸುವ ಸಂಚು ನಡೆಯುತ್ತಿದೆ. ಮೊದಲೇ ಬಾಯಿ ಸತ್ತ ಜನ ನಾವು. ಯಾರ ಮುಂದನು ಇವತ್ತಿನವರೆಗೂ ನಿಂತು ಮಾತನಾಡಿಲ್ಲ, ಆ ಧೈರ್ಯನು ನಮಗೆ ಬಂದಿಲ್ಲ, ಹೀಗಾಗಿ ಯಾರ ಏನೆ ಅಂದರೂ ಅನ್ನಿಸಿಕೊಂಡು ಸುಮ್ಮನೆ ಇರುತ್ತೇವೆ. ಇರೋದು ಒಂದು ಮನೆ. ಅದು ನಮ್ಮ ಹಿಂದಿನವರಿಗೆ ನವಾಬರು ಕೊಟ್ಟದ್ದು, ಅದು ನಮ್ಮದೆ ಅಂತಾ ತಿಳಿದುಕೊಂಡಿದ್ದೆವೆ. ಆದ್ರ ಈ ರಾಜಕೀಯದವ್ರು ಮುನ್ಸಿಪಾರ್ಟಿ ಸಾಹೇಬ್ರು ನಮಗ ದಿನಾ ತ್ರಾಸ ಕೊಟ್ಟು ಮನೆಯಿಂದ ಹೊರಗ ಹಾಕಾಕತ್ತಾರ. ಮಕ್ಕಳು ಮರಿ ಕಟ್ಟಿಕೊಂಡು ಎಲ್ಲಿ ಹೋಗೋಣು. ಅದಕ್ಕ ಸಿಟ್ಟ ಬಂದು ನಮ್ಮ ಹುಡುಗ್ರು ಮಂದಿ ಮಲಾಸ ಹೊರೋದು ಅಲ್ಲನ ಇವತ್ತ ಮೈ ಮೇಲೆ ಹಾಕಿಕೊಂಡು ಜಳಕಾ ಮಾಡ್ಯಾರ್ರಿ.... ಅಂತ ಕಣ್ಣೀರು ಸುರಿಸುತ್ತಾ ಎದ್ದು ಹೋದಳು.

ಪ್ರಶ್ನೆ: – ಕುಟುಂಬ ನಿರ್ವಹಣೆ ಮತ್ತು ಮಕ್ಕಳ ವಿದ್ಯಾಭ್ಯಾಸ ಹೇಗೆ?

ಮಂಜು ಭಂಗಿ:– ಸವಣೂರ ಅಂತಾ ಊರಾಗ ನೂರಕ್ಕ ಎಪ್ಪತ್ತು ಮನ್ಯಾಗ ಗುಂಡಿ ಪಾಯಿಖಾನೆ ಅದಾವು. ಅದನ್ನ ಬಳದ ಜೀವನ ಸಾಗಿಸುತ್ತೇವೆ. ಯಾರೋ 200, ಯಾರೋ 500 ರೂ. ಕೊಡ್ತಾರ್. ಅವರು ಕೊಟ್ಟಿದ್ದು ಸರಾಯಿಗೆ ಸಾಕಾಗಲ್ಲ, ಮಲ ಬಳಿಬೇಕು ಅಂದ್ರ ಸರಾಯಿ ಬೇಕೆ ಬೇಕು. ಅದ್ರಾಗ ಉಳಿದಿದ್ದನ್ನು ಮನೆಗೆ ಅಕ್ಕಿ ತಗೊಂಡು ತಿಂತೀವಿ, ಇನ್ನ ಮಕ್ಕಳ ಶಾಲೆ ಎಲ್ಲಿಂದ ಬಂತು. ನಮ್ಮ ಹಿಂದನೆ ಅವು ಮಲ ಬಳಿಯೋ ಡಬ್ಬಿ ಹಿಡಿದುಕೊಂಡು ಬರತಾವ್. ಒಟ್ಟ ಯಾರು ಸರಿಯಾಗಿ ಕಲಿತಿಲ್ಲ.


ಹೀಗೇ ಮಂಜು ಹೇಳುತ್ತಿರುವಾಗ ಎದುರಿಗೆ ಬಂದ ಕೃಷ್ಣಾ ಭಂಗಿ ಪಾನಮತ್ತನಾಗೇ ಇದ್ದ. "ಸಾಹೇಬ್ರ ನನಗೆ ಈಗ 35 ವರ್ಷ. ಆದ್ರ ದಿನಕ್ಕೊಂದು ಹೊಸ ರೋಗ ಸೇರಕ್ಕೊಳ್ಳಕತ್ತೈತಿ. ಕುಡಿದು, ಕುಡಿದು ಹಿಂಗಾಗೇತಿ ಅಂತಾ ಡಾಕ್ಟರ್ ಹೇಳತ್ತಾರ. ಆದ್ರ ಕುಡಿಲಿಲ್ಲ ಅಂದ್ರ ನಮಗೆ ಭಂಗಿ ಕೆಲಸ ಮಾಡೋಕೆ ಆಗಲ್ಲ. ದುಡಿದಿದ್ದೆಲ್ಲ ಸಾರಾಯಿ ಅಂಗಡಿಗೆ ಸುರಿತೀವಿ. ಜನ್ರ ಸೇವಾ ಮಾತ್ರ ನಿಷ್ಠಾದಿಂದ ಮಾಡತೇವಿ. ನಮ್ಮ ಹಿರೇರು 45 ವರ್ಷದ ಮ್ಯಾಲೆ ಬದಕಿಲ್ಲ, ಈ ಸರಾಯಿ ಚಟದಿಂದ ಸತ್ತು ಹೋದ್ರು. ನಾವು ಹಂಗ ಸಾಯ್ತೇವ್ರಿ. ಅದಕ್ಕ ನನ್ನ 15 ವರ್ಷದ ಮಗ ಯೇಸುಗೆ ಈಗಿನಿಂದನ ಭಂಗಿ ಕೆಲಸ ಕಲಸಾಕತ್ತೇನಿ. ಸಣ್ಣವ್ರು ದೊಡ್ಡವ್ರು ಅಂತೇನಿಲ್ಲ ಎಲ್ಲಾರೂ ಭಂಗಿ ಕೆಲಸನ ಜೀವನ ಅಂದುಕೊಂಡೇವಿ."

ಆತ ಮಾತು ಮುಗಿಸುವುದಷ್ಟರಲ್ಲೇ ಮಧ್ಯೆ ಬಂದ ಮಂಜುನಾಥ ಭಂಗಿ ಅಲ್ಪ ಸ್ವಲ್ಪ ಶಾಲೆ ಓದಿದವ. "ನೋಡ್ರಿ ಭಂಗಿ ಕೆಲಸನ ನಿಷೇಧ ಮಾಡೀ ಆ ಜನರಿಗೆ ಬ್ಯಾರೇ ಸರಕಾರಿ ಕೆಲಸ ಕೊಡಬೇಕು ಅಂತಾ ಕಾನೂನು ಆಗೈತಿ. ಆದ್ರ ಅದು ಇಲ್ಲಿ ಜಾರಿ ಇಲ್ಲ, ನಾವು ಇವತ್ತಿಗೂ ಮಲ ಹೊರುವುದನ್ನೇ ಕೆಲಸವನ್ನಾಗಿ ಮಾಡತೇವಿ. ನಮ್ಮ ತೊಂದ್ರೇನ ಇವತ್ತಿನವರೆಗೂ ಹೇಳಕೊಂತ ಬಂದ್ರು ಯಾರೂ ಕೇಳಲಿಲ್ಲ, ಈಗ ನಾವು ಮೈಮೇಲೆ ಮಲ ಸುರುವಿಕೊಂಡಿದ್ದಕ್ಕ ಅವರಿಗೆ ತ್ರಾಸ ಆಗೇತಿ ಅಂತ ಬರಾಕತ್ತಾರ. ಎಲ್ಲಾ ಕೆಂಪು ಲೈಟಿನ ಗಾಡಿಗಳು ನಮ್ಮ ಮನೆ ಮುಂದೆ ಬಂದು ನಿಂದ್ರಾಕತ್ತಾವ್ರು. ನಮಗ ಇವ್ರ ಸಹವಾಸನೇ ಬೇಡ. ನಾವು ಇದ್ದ ಮನೆ ನಮಗ ಬಿಟ್ಟು ನೀರು ಲೈಟು ಕೊಟ್ರ ನಾವು ಹೇಂಗೋ ಮಕ್ಕಳನ್ನು ಕಟ್ಟಿಕೊಂಡು ಬದುಕುತ್ತೇವೆ."

7 ಕುಟುಂಬದ ಮಕ್ಕಳು ಎಲ್ಲರನ್ನೂ ಸೇರಿಸಿ ಸುಮಾರು 40 ಜನ ವಾಸಿಸುವ 5 ತಗಡಿನ ಶೆಡ್ಡುಗಳಲ್ಲಿ ಯಾವೊಂದು ಐಷಾರಾಮಿ ವಸ್ತುಗಳಿಲ್ಲ, ಪಾತ್ರೆ, ಪಗಡೆ, ಚಾಪೆ ಹೊರತುಪಡಿಸಿದರೆ ಬೇರೇನೂ ನೋಡಲು ಸಿಗುವುದಿಲ್ಲ, ಇರುವ ಸಣ್ಣ ಮನೆಯ ಅಂಗಳದಲ್ಲೇ ಇವರ ಊಟ, ವಸತಿ ಸೇರಿದಂತೆ ಎಲ್ಲಾ ನಡೆಸುತ್ತಾರೆ. ಮಕ್ಕಳ ಮೈಮೇಲೆ ಹರಕು ಬಟ್ಟೆ. ಮಹಿಳೆಯರದ್ದೂ ಇದೇ ಹೀನಾಯ ಸ್ಥಿತಿ.

ಎಂಥಾ ಕಟುಕರೊಳಗೂ ಕರುಣೆ ಹುಟ್ಟಿಸಬಲ್ಲ ಇವರ ಬದುಕು ಈ ದುಷ್ಟ ಆಡಳಿತ ವ್ಯವಸ್ಥೆಯಲ್ಲಿ ಕನಿಕರ ಹುಟ್ಟಿಸುತ್ತಿಲ್ಲವೆಂದರೆ ಏನೆನ್ನ ಬೇಕು?

● ಹುರುಳಿಕುಪ್ಪಿ ವಿನಯ್



ಹೊಸ ಮಜಲಿನತ್ತ ದೇಶಕಾಲದ ಚರ್ಚೆ... ಭಾಗ 5

'ದೇಶಕಾಲ' ಕುರಿತು ಯುವ ಲೇಖಕರಿಬ್ಬರ ಕೆಲವು ಆಕ್ಷೇಪಗಳು ಈಗ ಹೊಸ ಮಜಲಿನತ್ತ ಮುಂದುವರೆದಿವೆ. 'ದೇಶಕಾಲ' ಕುರಿತಂತೆ ಈ ಬಾರಿ ಬರಗೂರು ರಾಮಚಂದ್ರಪ್ಪ ಬರೆದಿದ್ದಾರೆ. ಇದು 'ದೇಶಕಾಲ' ಎಂಬ ನಿಯತಕಾಲಿಕೆಯ ಚೌಕಟ್ಟನ್ನು ದಾಟಿದೆ. ಆ ಮೂಲಕ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಿಂತನೆ, ಪರಂಪರೆ ಕುರಿತ ಸಮಕಾಲೀನ ದೇಶ-ಕಾಲದ ಚರ್ಚೆಯಾಗಿ ಒಂದು ಮುನ್ನೆಗೆತ ಸಾಧಿಸುವ ದಿಕ್ಕಿನಲ್ಲಿದೆ.

ಕರ್ನಾಟಕದ ಸಾಂಸ್ಕೃತಿಕ ಬದುಕನ್ನು ಆವರಿಸಿಕೊಂಡಿದ್ದ ಕೊಂಚ ಜಡತ್ವ, ನಿರುತ್ಸಾಹಗಳನ್ನು ಈ ಚರ್ಚೆ ಅಲುಗಿಸುತ್ತಿರುವಂತೆ ಭಾಸವಾಗುತ್ತಿದೆ. ಈ ವಿಚಾರ ಮಂಥನವು ಗಂಭೀರವಾಗಿಯೂ, ಪ್ರಬುದ್ಧವಾಗಿಯೂ ನಡೆಯುವಷ್ಟು ಕಾಲ 'ಲಂಕೇಶ್' ವಾರಪತ್ರಿಕೆ ಅದಕ್ಕೆ ವೇದಿಕೆಯಾಗಲಿದೆ.

• ಲಂಕೇಶ್ ಬಳಗ

ದೇಶಕಾಲದ ಸಾಂಸ್ಕೃತಿಕ ರಾಜಕೀಯ

'ದೇಶಕಾಲ' ನಿಯತಕಾಲಿಕವನ್ನು ಕುರಿತ ವಾಗ್ವಾದಗಳಿಗೆ ಪ್ರತಿಕ್ರಿಯಿಸುವುದು ನನ್ನ ಉದ್ದೇಶವಲ್ಲವೆಂದು ಮೊದಲೇ ಸ್ಪಷ್ಟಪಡಿಸುತ್ತೇನೆ. 'ದೇಶಕಾಲ' ಆರಂಭವಾದಂದಿನಿಂದ ನಾನು ಚಿಂತಿಸಿದ ಹಾಗೂ ಗ್ರಹಿಸಿದ ಸಂಗತಿಗಳ ನೆಲೆಯಲ್ಲಿ ನಾನೀಗ ಬರೆಯುತ್ತಿದ್ದೇನೆ.

ಯಾವುದೇ ರೀತಿಯ ಪತ್ರಿಕೆಯನ್ನು ಸಂಪಾದಿಸುವ; ಪ್ರಕಟಿಸುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಅಂತೆಯೇ ಪ್ರಕಟಗೊಂಡದ್ದರ ಬಗ್ಗೆ ಪ್ರತಿಕ್ರಿಯಿಸುವ ಹಕ್ಕೂ ಇದೆ. ಈ ಹಕ್ಕುಗಳು ಪ್ರಜಾಪ್ರಭುತ್ವದ ತಾಂತ್ರಿಕ ಸವಲತ್ತುಗಳಾಗಿ ನಮಗೆ ಲಭ್ಯವಾಗಿವೆ. ಒಮ್ಮೆ ಪ್ರಕಟವಾದ ಮೇಲೆ ಯಾವ ಪತ್ರಿಕೆಯಾಗಲಿ, ಪುಸ್ತಕವಾಗಲಿ ಕೇವಲ ಖಾಸಗಿಯಾಗಿರುವುದಿಲ್ಲ. ಅವುಗಳಲ್ಲಿ ಖಾಸಗಿ ವಿಷಯಗಳಿದ್ದರೂ ಪ್ರಕಟಗೊಂಡಾಗ ತನಗೆ ತಾನೇ ಸಾರ್ವಜನಿಕವಾಗುತ್ತವೆ. ಚರ್ಚೆಗೆ ತೆರೆದುಕೊಳ್ಳುತ್ತವೆ. ಆದ್ದರಿಂದ ನಾವು ಹಣಹಾಕಿ ಕಷ್ಟಪಟ್ಟು ಒಂದು ಪತ್ರಿಕೆ ತರುತ್ತಿದ್ದೇವೆಂಬ ಕಾರಣಕ್ಕೆ ಸರ್ವತಂತ್ರ ಸ್ವಾತಂತ್ರ್ಯ ಲಭ್ಯವಾಗಿದೆಯೆಂದಾಗಲಿ, ನಮಗಿಷ್ಟ ಬಂದಂತೆ ವರ್ತಿಸುತ್ತೇವೆಂದಾಗಲೀ ಭಾವಿಸುವಂತಿಲ್ಲ. ಸಾರ್ವಜನಿಕವಾದ ಎಲ್ಲವೂ ಸಾಮಾಜಿಕವಾಗುವುದರಿಂದ, ಅವುಗಳನ್ನು ಕುರಿತ ಚರ್ಚೆ ವೈಯಕ್ತಿಕವಾಗುವುದಿಲ್ಲ, ಆಗಬಾರದು. ಪ್ರಕಟವಾಗುತ್ತಿರುವ ಪತ್ರಿಕೆ/ಪುಸ್ತಕಗಳು ತಳೆಯುವ ನಿಲುವುಗಳನ್ನು ಕುರಿತ ಚರ್ಚೆಗಳು ವೈಯಕ್ತಿಕ ನೆಲೆಯನ್ನು ಮೀರಿದ ಸಾಮಾಜಿಕ ಆಯಾಮವನ್ನು ಪಡೆದುಕೊಂಡಾಗ ಸಾಂಸ್ಕೃತಿಕವಾಗಿಯೂ ಮುಖ್ಯವಾಗುತ್ತವೆ. ತಾತ್ವಿಕ ಸ್ವರೂಪ ಪಡೆಯುತ್ತವೆ. ತಾತ್ವಿಕ ಸ್ವರೂಪವನ್ನು ಪಡೆಯದೆ ಚರ್ಚೆಗಳಾಗಲಿ, ವಾಗ್ವಾದಗಳಾಗಲಿ ಸಾಮಾಜಿಕ ಚರಿತ್ರೆಯ ಚಲನಶೀಲತೆಗೆ ಯಾವತ್ತೂ ಪೂರಕವಾಗುವುದಿಲ್ಲ. ಅಂತೆಯೇ ನಮ್ಮ ಸೃಜನಶೀಲ ಕ್ರಿಯೆಗಳು-ಪತ್ರಿಕೆ, ಪುಸ್ತಕ, ಯಾವುದೇ ಆಗಲಿ-ಸಾಮಾಜಿಕ ಚರಿತ್ರೆಯ ಚಲನಶೀಲತೆಗೆ ಪೂರಕವಾಗಿಲ್ಲದೆ ಇದ್ದಾಗ ಯಥಾಸ್ಥಿತಿವಾದಕ್ಕೆ ಪುಷ್ಟಿಕೊಡುತ್ತವೆ: ಹೆಚ್ಚೆಂದರೆ ಪರಿಷ್ಕರಣವಾದದ ನೆರಳಲ್ಲಿ ನೆಮ್ಮದಿಯ ಮುಗುಳ್ನಗೆ ಬೀರುತ್ತ ಬೀಗತೊಡಗುತ್ತವೆ. ಇಲ್ಲವೆ ಸ್ಪಷ್ಟವಾಗಿ ಪ್ರತಿಗಾಮಿಯಾಗುತ್ತವೆ. ಆದರೆ ಸಾಮಾಜಿಕ ಚರಿತ್ರೆಯ ಚಲನಶೀಲತೆಯನ್ನು ಅಂತಃಶಕ್ತಿಯಾಗಿ ಪಡೆದ ಯಾವುದೇ ಕ್ರಿಯೆಗೆ ಜನಮುಖತೆ ತಾನೇತಾನಾಗಿ ಲಭ್ಯವಾಗುತ್ತದೆ; 'ದೇಶಕಾಲ'ವನ್ನು ಕುರಿತ ಚರ್ಚೆ ಮತ್ತು ವಾಗ್ವಾದಗಳಿಗೂ ಇದು ಅನ್ವಯಿಸುತ್ತದೆ. ಮೊಟ್ಟಮೊದಲು ಸ್ವತಃ 'ದೇಶಕಾಲ'ಕ್ಕೆ ಅನ್ವಯಿಸುತ್ತದೆ. ತಾನು ಹುಟ್ಟಿಬೆಳೆಯುತ್ತಿರುವ 'ದೇಶ' ಮತ್ತು 'ಕಾಲ'ದ ಸಾಮಾಜಿಕ ಅಗತ್ಯಗಳನ್ನು ಅರ್ಥಮಾಡಿಕೊಳ್ಳದಿದ್ದರೆ ಸಾಂಸ್ಕೃತಿಕ ಮುಖವೆನ್ನುವುದು ಮುಖವಾಡ ಮಾತ್ರವಾಗುವ ಅಪಾಯವೂ ಇರುತ್ತದೆ.

ಮೇಲಿನ ಮಾತುಗಳನ್ನು ಹೀಗೆ ಸ್ಪಷ್ಟಪಡಿಸಬಹುದು: ಸಾಹಿತ್ಯಾದಿ ಕಲೆಗಳು ಸಾಮಾಜಿಕ ಕ್ರಿಯೆಗಳು. ಕೇವಲ ವೈಯಕ್ತಿಕ ಕ್ರಿಯೆಗಳಲ್ಲ, ವೈಯಕ್ತಿಕವೆನ್ನುವ ಅಂಶಗಳ ಮೇಲೆ ಸಾಮಾಜಿಕ ಪರಿಸರ ಮತ್ತು ಚಾರಿತ್ರಿಕ ಸಂದರ್ಭಗಳ ಪ್ರಭಾವ ಇದ್ದೇ ಇರುತ್ತದೆ. ಹೀಗಾಗಿ ವೈಯಕ್ತಿಕತೆ ಮತ್ತು ಸಾಮಾಜಿಕತೆಗಳ ನಡುವೆ ಸಂಬಂಧವಿದ್ದೇ ಇರುತ್ತದೆ; ಸಾಮಾಜಿಕವಾದ ವೈಯಕ್ತಿಕತೆ ವೈಪರೀತ್ಯವಾಗುತ್ತದೆ. ವೈಯಕ್ತಿಕ ಛಾಪೊಂದು ಇರುವುದು ನಿಜವಾದರೂ ಸಾಮಾಜಿಕ ಉಪೇಕ್ಷೆಯೆನ್ನುವುದು ಬೇಜವಾಬ್ದಾರಿತನ ವಾಗುತ್ತದೆ. ಇದು ಎಲ್ಲ ಕಲೆಗಳಿಗೂ ಕಲಾ ಸೃಷ್ಟಿಕಾರರಿಗೂ ಅನ್ವಯಿಸುವ ಮಾತು. ಸಾಮಾಜಿಕತೆಯನ್ನು ಉಪೇಕ್ಷಿಸಿ ವೈಯಕ್ತಿಕತೆಯನ್ನು ವೈಭವೀಕರಿಸಿ ಶ್ರೇಷ್ಠತೆಯ ನಿರ್ಣಯ ಕೈಗೊಳ್ಳುವ ಬೌದ್ಧಿಕ ವಲಯಕ್ಕೆ ಈ ತಾತ್ವಿಕ ಅಂಶಗಳು ಅರ್ಥವಾಗಬೇಕು. ಅರ್ಥವಾಗದಿದ್ದರೆ, ಅರ್ಥಮಾಡಿಕೊಳ್ಳುವ ವಿಮರ್ಶಾ ವಿನಯವಿಲ್ಲದಿದ್ದರೆ ಅನೇಕ ಪ್ರತಿಭೆಗಳನ್ನು ಅನ್ಯಗೊಳಿಸಿ ತಮ್ಮ ಆಪ್ತ ವಲಯವನ್ನು ಮಾತ್ರ ಅನನ್ಯಗೊಳಿಸುವ ಸಾಂಸ್ಕೃತಿಕ ಹುನ್ನಾರ ಮೇಲುಗೈ ಪಡೆಯುತ್ತದೆ. ಈ ಮಾದರಿಯ ತಾತ್ವಿಕ ಗ್ರಹಿಕೆಯ ಮೂಲಕವೇ ನಾವು 'ದೇಶಕಾಲ'ದಂತಹ ಮುದ್ರಣ ಮಾದರಿಗಳಿಗೆ ಮುಖಾಮುಖಿಯಾಗಬೇಕಾಗುತ್ತದೆ.



• ಡಾ. ಬರಗೂರು ರಾಮಚಂದ್ರಪ್ಪ

'ದೇಶಕಾಲ'ದ ಬಗ್ಗೆ ಎದ್ದಿರುವ ಅನುಮಾನ ಮತ್ತು ಅಸಹನೆಗಳಿಗೆ ವೈಯಕ್ತಿಕ ಕಾರಣಗಳಿವೆಯೆಂದು ನನಗನ್ನಿಸುವುದಿಲ್ಲ, ವೈಯಕ್ತಿಕ ಕಾರಣಗಳು ಇರಬೇಕಾಗಿಯೂ ಇಲ್ಲ. ಇಲ್ಲಿ ಇರುವುದು ಸಾಮಾಜಿಕ ಕಾರಣಗಳು ಅಥವಾ ಸಾಮಾಜಿಕ ನೆಲೆಯನ್ನೊಳಗೊಂಡ ಸಾಂಸ್ಕೃತಿಕ ಕಾರಣಗಳು.

'ದೇಶಕಾಲ'ವು ಪ್ರಕಟಣೆಯನ್ನು ಆರಂಭಿಸಿದ ಸಂದರ್ಭವನ್ನು ಜ್ಞಾಪಿಸಿಕೊಳ್ಳೋಣ. ತಮಗಿರುವ ಮುದ್ರಣ ಮಾಧ್ಯಮಗಳ ಮಧುರ ಸಂಪರ್ಕವನ್ನು ಬಳಸಿಕೊಂಡು ಆಗಲೇ ವಿಶೇಷ ಲೇಖನಗಳನ್ನು ಬರೆದು ಪ್ರಕಟಿಸಲಾಯಿತು. ಕೂಸು ಹುಟ್ಟುವ ಮುಂಚೆ ಕುಲಾವಿ ಹೊಲಿಸುವ ಕ್ಷಿಪ್ರತೆಯ ಮಾತು 'ದೇಶಕಾಲ'ದ ವಿಷಯದಲ್ಲಂತೂ ನವನವೋನ್ಮೇಷಶಾಲಿಯಾಯಿತು. ಯಾಕೆಂದರೆ ಪರಾಕುಪಂಪ ನ್ನೊತ್ತುವ ಕೆಲಸ ಹುಟ್ಟಿನ ಸಂದರ್ಭಕ್ಕೆ ಮಾತ್ರ ಮೀಸಲಾಗದೆ ಐದು ವರ್ಷ ತುಂಬಿದ ಸಂಚಿಕೆಯ ಬಿಡುಗಡೆ ಸಂದರ್ಭಕ್ಕೂ ವಿಸ್ತರಿಸಿತು. ಈ ವಿಶೇಷ ಸಂಚಿಕೆಯ ಬಿಡುಗಡೆಯನ್ನು ಒಂದು ಚಾರಿತ್ರಿಕ ಸಂಭವವೆಂಬಂತೆ ವೈಭವೀಕರಿಸುವ ಕೆಲಸ ನಡೆಯಿತು. ನಮ್ಮ ಮುದ್ರಣ ಮಾಧ್ಯಮಗಳು ಅಳತೆ ಮೀರಿ ನೀಡಿದ ಪ್ರಚಾರ 'ದೇಶಕಾಲ'ವು ನಮ್ಮ ಕಾಲದ ನಿಜವಾದ ಏಕೈಕ ಸಾಹಿತ್ಯಕ ಪ್ರತಿನಿಧಿಯೆಂಬ ಭ್ರಮೆ ಮೂಡಿಸಿದವು. ಇಂತಹ ಪ್ರಚಾರವು ಬೇರೆ ನಿಯತಕಾಲಿಕಗಳಿಗೆ ಯಾಕೆ ಲಭ್ಯವಾಗಲಿಲ್ಲ ಎಂಬ ಪ್ರಶ್ನೆ ಸಹಜವಾದುದು. ಅಷ್ಟೇ ಅಲ್ಲ, ಸಾಂಸ್ಕೃತಿಕ ಭ್ರಮೆ ಮೂಡಿಸುವ ಕೆಲಸ ತೀರಾ ಅನಾರೋಗ್ಯಕರವಾದುದು.

ನಾವು ಒಮ್ಮೆ ಅವಲೋಕಿಸಿಕೊಳ್ಳೋಣ. ಚಂದ್ರಶೇಖರ ಪಾಟೀಲರ 'ಸಂಕ್ರಮಣ'ವು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಕಡಿಮೆಯೇ? ನಲವತ್ತೈದು ವರ್ಷಗಳಿಂದ ಪ್ರಕಟವಾಗುತ್ತಿರುವ 'ಸಂಕ್ರಮಣ'ಕ್ಕೆ 'ದೇಶಕಾಲ'ದ ಮಾದರಿಯ ಮಹತ್ವ ಮತ್ತು ಪ್ರಚಾರ ಲಭ್ಯವಾಗಿದೆಯೇ? ಮೂವತ್ತು ವರ್ಷಗಳಿಂದ ಪ್ರಕಟವಾಗುತ್ತಿರುವ ಶೂದ್ರ ಶ್ರೀನಿವಾಸರ 'ಶೂದ್ರ' ಪತ್ರಿಕೆಯ ಬಗ್ಗೆ ಮುದ್ರಣ ಮಾಧ್ಯಮಗಳು ಎಷ್ಟು ಪ್ರಚಾರಕೊಟ್ಟಿವೆ? ಆರ್.ಜಿ.ಹಳ್ಳಿ ನಾಗರಾಜರ 'ಅನ್ವೇಷಣೆ', ಇಂದೂಧರ ಹೊನ್ನಾಪುರ ಅವರ 'ಸಂವಾದ'ಗಳ ಕೊಡುಗೆ ಕಡಿಮೆಯೇ? ಡಾ.ಜಿ.ರಾಮಕೃಷ್ಣರ ಸಂಪಾದಕತ್ವದಲ್ಲಿ ಬರುತ್ತಿರುವ 'ಹೊಸತು' ತಿಂಗಳ ಪತ್ರಿಕೆಯು ಪ್ರತಿವರ್ಷವೂ ವಿಶೇಷ ಸಂಚಿಕೆ ತರುತ್ತಿದ್ದರೂ ಆ ಬಗ್ಗೆ ಯಾಕೆ ಮಹತ್ವ ನೀಡುತ್ತಿಲ್ಲ? ಹರಿಹರಪ್ರಿಯರ 'ಪುಸ್ತಕಮನೆ', ಮಂಡ್ಯ ಕರ್ನಾಟಕ ಸಂಘದ 'ಅಭಿವ್ಯಕ್ತಿ' ಲಿಂಗದೇವರು ಹಳೇಮನೆ 'ಅರುಹು ಕುರುಹು'-ಇಂಥ ಗಂಭೀರ ಪ್ರಯತ್ನಗಳನ್ನು ಕುರಿತು ಎಲ್ಲಿಯಾದರೂ ಪ್ರಸ್ತಾಪವಾಗಿದೆಯೇ? ನಾನಿಲ್ಲಿ ಉಲ್ಲೇಖಿಸದ ಇನ್ನೂ ಕೆಲವು ಮಹತ್ವದ ಪ್ರಯತ್ನಗಳು ಇರಲು ಸಾಧ್ಯ. ತಕ್ಷಣಕ್ಕೆ ಇಷ್ಟು ಹೆಸರುಗಳನ್ನು ಹೇಳಿದ್ದೇನೆ. ಈಗ ಕೇಳಿಕೊಳ್ಳೋಣ ಮತ್ತು ಕೇಳೋಣ: ತಪ್ಪು ಎಲ್ಲಿದೆ? ತಪ್ಪು ಯಾರದು?

ನಮ್ಮ ಸಮಕಾಲೀನ ಸಾಂಸ್ಕೃತಿಕ ಸನ್ನಿವೇಶವನ್ನು ಅರ್ಥಮಾಡಿಕೊಳ್ಳುವ ಮೂಲಕ ಈ ತಪ್ಪುಗಳ ನೆಲೆಯನ್ನು ಕಂಡುಕೊಳ್ಳಬಹುದೆಂದು ನಾನು ಭಾವಿಸಿದ್ದೇನೆ. ನಾನು ಗ್ರಹಿಸಿದಂತೆ ನಮ್ಮ ಸಾಂಸ್ಕೃತಿಕಲೋಕವು 'ಸ್ಥೂಲ'ವಾಗಿ ಮೂರು ವಲಯಗಳಲ್ಲಿ ಧ್ರುವೀಕರಣಗೊಳ್ಳುತ್ತಿದೆ. ಸಾಂಸ್ಕೃತಿಕ ಧ್ರುವೀಕರಣದ ಮೂರು ವಲಯಗಳನ್ನು ಮುಂದಿನಂತೆ ವಿವರಿಸುತ್ತೇನೆ:

1. ಜಾತಿವಾದ ಮತ್ತು ಕೋಮುವಾದ ಪ್ರಧಾನ ವಲಯವೊಂದು ಗಟ್ಟಿಗೊಳ್ಳುತ್ತಿರುವ ಎಲ್ಲ ಲಕ್ಷಣಗಳೂ ಸ್ಪಷ್ಟವಾಗಿವೆ. ಜಾತಿವಾದ ಮತ್ತು ಕೋಮುವಾದವನ್ನು ಮೊದಮೊದಲು ಮಗುಮ್ಮಾಗಿ ಇಟ್ಟುಕೊಂಡಿದ್ದವರು ಸಹ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಸ್ಪಷ್ಟವಾಗಿ ಬಯಲಾಗುತ್ತಿದ್ದಾರೆ. ಬಯಲಾಗುವ ಪ್ರಕ್ರಿಯೆ ಪ್ರಾರಂಭವಾದದ್ದು ತೊಂಬತ್ತರ ದಶಕದಲ್ಲಿ-ಬಾಬರಿ ಮಸೀದಿಯ ಧ್ವಂಸ ಪ್ರಕರಣದ ನಂತರದಲ್ಲಿ. ದೇಶದಲ್ಲಿ ಕೋಮುಘರ್ಷಣೆಗಳು ಹೆಚ್ಚಾದಂತೆ ಸಾಂಸ್ಕೃತಿಕ ವಲಯದಲ್ಲೂ ತಲ್ಲಣವುಂಟಾಗತೊಡಗಿ ಸ್ಪಷ್ಟ ನಿಲುವಿಗೆ ಬರುವುದು ಅನಿವಾರ್ಯವಾಯಿತು. ಕೆಲವರು ಅಡ್ಡಗೋಡೆಯ ದೀಪವಾಗಲು ಪ್ರಯತ್ನಿಸುತ್ತಲೇ 'ದ್ವೀಪ'ವಾಗತೊಡಗಿದ್ದು ಈಗ ಇತಿಹಾಸ. ತಂತಮ್ಮ ದ್ವೀಪಗಳನ್ನು ದಾಟದೆ ಸಾಮರಸ್ಯ ಮತ್ತು ಸಮಾನತೆಯ ಮಾತಿಗೆ ಅರ್ಥವಿಲ್ಲವೆಂಬುದನ್ನು ಇಂಥವರಿಗೆ ಹೇಳಲೇಬೇಕಾಗಿದೆ. ಜಾತಿ ಮತ್ತು ಕೋಮುದ್ವೇಷದ ದ್ವೀಪದೊಳಗೆ ಕೂತು 'ದೀಪ' ಬೆಳಗುವ ಸಾಂಸ್ಕೃತಿಕ ಕ್ರಿಯೆಗೆ ಮಾನವೀಯ ಸ್ಪರ್ಶ ಹೇಗೆ ಬಂದೀತು? ಸಂವೇದನಾಶೀಲತೆ ಹೇಗೆ ದಕ್ಕೀತು? ನಾನಿಲ್ಲಿ ಜಾತಿ ಎನ್ನುವಾಗ ಒಂದೇ ಜಾತಿಯನ್ನು ಹೇಳುತ್ತಿಲ್ಲ. ಕರ್ನಾಟಕದ ಮಟ್ಟಿಗೆ ಮೇಲ್ಜಾತಿ ಮತ್ತು ಮಧ್ಯಮ ಪ್ರಬಲ ಜಾತಿಗಳ ನಾಯಕತ್ವದ ಮನಸ್ಸು ಮಲಿನಗೊಂಡಿದೆ. ಸಾಮಾನ್ಯ ಜನರಲ್ಲೂ ಜಾತಿವಾದವನ್ನು ಹುಟ್ಟು

▶▶ 16

ದೊಡ್ಡ ದೊಡ್ಡ ಮಾತು ಬೆಲೂನಿಗೆ ನಿಜದ ಸೂಜಿ ಮೊನೆ

ದೇಶ ಕಾಲ ಚರ್ಚೆ

ದೇಶಕಾಲವನ್ನು ಸಮರ್ಥಿಸಿ ಬರೆದು ನನ್ನನ್ನು ನಂಬಿದವರಿಗೆ ನಾನು ದ್ರೋಹವೆಸಗಿದ್ದೇನೆ ಎಂಬಂತೆ ಹಲವರು ಪ್ರತಿಕ್ರಿಯಿಸಿದ್ದಾರೆ. ನಾನು ಯಾವುದೇ ಪಂಥದ ಒಡನಾಡಿಯೂ ಅಲ್ಲವಾದ್ದರಿಂದ ವಿದ್ರೋಹದ ಆಪಾದನೆಗಳಿಗೆ ನಾನು ಉತ್ತರಿಸುವುದಿಲ್ಲ. ಆದರೆ ಗೆಳೆಯ ಕೆ.ಪಿ.ಸುರೇಶ್ ದೇಶಕಾಲದ ಬಗ್ಗೆ ಆಡಿರುವ ಮಾತುಗಳನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಿದೆ.

ದೇಶಕಾಲಕ್ಕೆ ಕಾಣ್ಕೆಯ ಅಭಾವವಿದೆ; ಆದಕ್ಕೆ ಒಂದು ಕೇಂದ್ರ ಧ್ಯಾನ ಹಾಗೂ ಸಾಂಸ್ಕೃತಿಕ ಉದ್ದೇಶ ಇಲ್ಲ ಎಂದು ಸುರೇಶ್ ಹೇಳುತ್ತಾರೆ. ಸುಮಾ ಎಂಬಾರ್ ಕೂಡಾ ಪತ್ರಿಕೆಯ ಬಗ್ಗೆ ಹೆಚ್ಚುಕಡಿಮೆ ಇದೇ ಮಾತನ್ನು ಹೇಳಿದ್ದಾರೆ. ಸುರೇಶ್ ತಮ್ಮ ಮಾತಿಗೆ ಉದಾಹರಣೆಯಾಗಿ ಸಾಕ್ಷಿ, ಸಂಕ್ರಮಣ, ರುಜುವಾತು, ಶೂದ್ರ ಪತ್ರಿಕೆಗಳನ್ನು ಹೆಸರಿಸುತ್ತಾರೆ. ಈ ಪತ್ರಿಕೆಗಳು ಅಸ್ತಿತ್ವಕ್ಕೆ ಬಂದ ಕಾಲಾವಧಿ ಮತ್ತು ದೇಶಕಾಲ ತನ್ನ ಪ್ರಕಟಣೆ ಪ್ರಾರಂಭಿಸಿದ 2005ರ ನಡುವೆ ನಮ್ಮ ಎಲ್ಲ ಆದರ್ಶಗಳಿಗೂ ಏನೇನು ಅವಸ್ಥಾಂತರಗಳು ಬಂದೊದಗಿವೆ ಎಂಬುದು ಸುರೇಶ್‌ಗೆ ಗೊತ್ತಿಲ್ಲದ ಸಂಗತಿಯೇನಲ್ಲ. ಆ ಕಾಲದ ಎಲ್ಲ ಜನಪರ ಚಳವಳಿಗಳಿಗೂ ತುಕ್ಕು ಹಿಡಿದಿರುವುದು ಈಗ ಚರಿತ್ರೆ. ಕಮ್ಯುನಿಸ್ಟ್ ಚಳವಳಿ ಈಗ ಯಾವ ಸ್ಥಿತಿ ತಲುಪಿದೆ? ಮಹಾರಾಷ್ಟ್ರದಲ್ಲಿ ಅಷ್ಟು ದೊಡ್ಡ ಭರವಸೆಯೊಡನೆ ಹುಟ್ಟಿದ್ದ ದಲಿತ್ ಪ್ಯಾಂಥರ್ಸ್‌ನ ನಾಯಕರ ಹಾಲಿ ವಿಳಾಸ ಏನು? ಕರ್ನಾಟಕದ ದಸಂಸದಲ್ಲಿ ಬಣಗಳು ಎಷ್ಟು? ಸಮುದಾಯ ಬಂಡಾಯಗಳೆಲ್ಲ ಏನಾದವು? ಸುಮಾ ಎಂಬಾರ್, ದೇಶಕಾಲ ಈ ಮಣ್ಣಿನ ಈ ಕಾಲದ ಸಂಕಟಗಳನ್ನು ಪ್ರತಿನಿಧಿಸುವುದಿಲ್ಲ ಎಂದು ಹೇಳಿದರೆ, ಜ್ಯೋತಿ ಗುರುಪ್ರಸಾದ್ ಅದರಲ್ಲಿ ಸಮಕಾಲೀನ ಸ್ಪಂದನ ಕಾಣಿಸದು ಎನ್ನುತ್ತಾರೆ. ದೇಶಕಾಲದ ಕೊರತೆ ಎಂದು ಇವರಿಬ್ಬರು ಹೇಳುವ ಸಂಗತಿಗಳಿಗೆ ಎಲ್ಲರಿಗೂ ಒಪ್ಪಿಗೆಯಾಗುವಂಥ ಅಥವಾ ಕಡೆಯಪಕ್ಷ ಎಡಪಂಥೀಯರ ವಿವಿಧ ಬಣಗಳವರಾದರೂ ಒಪ್ಪಿಕೊಳ್ಳಬಹುದಾದ ಒಂದು ವ್ಯಾಖ್ಯೆಯಿದೆಯೇ? ಗತಕಾಲದ ಚಳವಳಿಗಳನ್ನು ನೆನಪು ಮಾಡಿಕೊಂಡು "ಒಂದು ಕಾಲವಿತ್ತು; ಆಗ ನಮಗೆ ಎಷ್ಟು ದೊಡ್ಡ ಕನಸಿತ್ತು!" ಎಂದು ಹಳಹಳಿಸುತ್ತ ಕೂರುವುದರಿಂದ ಮನಸ್ಸಿಗೆ ಹಿತವಾಗಬಹುದು. ಆದರೆ ಅದೊಂದು ನೈತಿಕ ಆಯ್ಕೆಯಲ್ಲ; ರಾಜಕೀಯ ಪರ್ಯಾಯವೂ ಅಲ್ಲ.

ದೇಶಕಾಲಕ್ಕೆ ಒಂದು ಕಾಣ್ಕೆ, ಕೇಂದ್ರಧ್ಯಾನ ಹಾಗೂ ಪ್ರಧಾನ ಉದ್ದೇಶಗಳಿಲ್ಲ ಎಂದು ಸುರೇಶ್ ಹೇಳುವಾಗ ಅವರ ಮನಸ್ಸಿನಲ್ಲಿರುವುದು ಏನು? ದೇಶಕಾಲಕ್ಕೆ ರಾಜಕೀಯ ಬದ್ಧತೆ ಇಲ್ಲ ಎಂದಲ್ಲವೇ? ಸ್ವತಃ ಸುರೇಶ್ ಆ ಪತ್ರಿಕೆಯ ಸಂಪಾದಕರಾದರೆ ಅವರ ಕಾಣ್ಕೆ, ಕೇಂದ್ರಧ್ಯಾನ ಹಾಗೂ ಪ್ರಧಾನ ಉದ್ದೇಶ ಏನಿರುತ್ತದೆ? ಕಾಣ್ಕೆ, ಉದ್ದೇಶಗಳ ಬಹಳ ಉದ್ದದ ಮೆನು ನಮ್ಮೆದುರಿಗೆ ಇಲ್ಲ. ಸಮಾಜವಾದ, ಗಾಂಧಿವಾದ, ಅಂಬೇಡ್ಕರ್‌ವಾದ, ಉದಾರವಾದೀ ಮಾನವತಾವಾದ ಅಥವಾ ಇವೆಲ್ಲದರ ಮಿಶ್ರಣ-ಇವುಗಳನ್ನು ಹೊರತುಪಡಿಸಿ ಇನ್ನು ಯಾವ ಕಾಣ್ಕೆ, ಉದ್ದೇಶ. ಕೇಂದ್ರಧ್ಯಾನಗಳನ್ನು ದೇಶಕಾಲಕ್ಕೆ ಶಿಫಾರಸ್ಸು ಮಾಡಬಹುದು? ಇಷ್ಟು ಸಡಿಲವಾಗಿ ಮಾತಾಡುವುದು ಬೇಡ. ರಷ್ಯಾದಲ್ಲಿ ಸ್ಟಾಲಿನ್, ಚೀನಾದಲ್ಲಿ ಮಾವೋ ಹಾಗೂ ಕಾಂಬೋಡಿಯದಲ್ಲಿ ಪೋಲ್‌ಪಾಟ್ ನಡೆಸಿದ ನರಮೇಧಗಳನ್ನು ಹೊರತುಪಡಿಸಿದ ಮಾರ್ಕ್ಸ್‌ವಾದವನ್ನು ಮೂರನೆಯ ಜಗತ್ತಿನ ದೇಶಗಳಲ್ಲಿ ನರಮೇಧಗಳ ಸರಣಿಯನ್ನೇ ನಡೆಸಿದ ಯೂರೋಪ್ ಮತ್ತು ಅಮೆರಿಕಾದ ಆಧುನಿಕ ಸಂಸ್ಕೃತಿಯ ಅತ್ಯುತ್ತಮ ಅಂಶಗಳ ಜೊತೆ ಬೆರೆಸಿ, ಅದನ್ನು ಭಾರತೀಯ ಸಂಸ್ಕೃತಿಯ ಮಾನವೀಯ ಗುಣಗಳ ಜೊತೆ ಸೇರಿಸಿ ಗಾಂಧಿವಾದ ಮತ್ತು ಅಂಬೇಡ್ಕರ್ ವಾದಗಳನ್ನೂ ನಮಗೆ ಸರಿ ಕಂಡಹಾಗೆ ಜೋಡಿಸಿಕೊಂಡು ನಮ್ಮ ಕಾಣ್ಕೆ, ಕೇಂದ್ರಧ್ಯಾನ ಹಾಗೂ ಉದ್ದೇಶಗಳನ್ನು ರೂಪಿಸಿಕೊಂಡರೆ ಹೇಗೆ? ಇಂತಹದ್ದೊಂದು ಕಾಣ್ಕೆ ಘನವಾಗಿರುತ್ತದೆ. ವ್ಯಾವಹಾರಿಕವಲ್ಲ ಎನ್ನುವುದೊಂದೇ ಅದರ ಕೊರತೆ. ಸುರೇಶ್ ಅವರ ಮನಸ್ಸಿನಲ್ಲಿರುವ ಕಾಣ್ಕೆ ಯಾವ ಬಗೆಯದ್ದು?

ದೇಶಕಾಲದ ಮಾದರಿಗೆ ಪ್ರತಿಯಾಗಿ ಸುರೇಶ್ ಹೆಸರಿಸಿದ ಕನ್ನಡ ನಿಯತಕಾಲಿಕಗಳ ಯಾದಿಯಲ್ಲಿ ಅಡಿಗರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ 'ಸಾಕ್ಷಿ'ಯನ್ನು ಸೇರಿಸಿರುವುದು ನನಗೆ ಸರಿಕಾಣುವುದಿಲ್ಲ. ಅಡಿಗರಿಗೆ ಸ್ವಂತದ ರಾಜಕೀಯ ಧೋರಣೆಗಳಿದ್ದವು. ಆದರೆ 'ಸಾಕ್ಷಿ'ಗೆ

…ೇಷ್ಠತೆಯ ವ್ಯಸನ'ದ 'ದೇಶಕಾಲ'ವೂ '…ರುಡ ಹಿಡಿದ ಬಡ್ತಿಗೆ'ಯಂಥ ಸಮರ್ಥನೆಯೂ

ದೇಶಕಾಲ ಚರ್ಚೆ

…ತ್ರಿಕೆಯ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿರುವ ಗೆಳೆಯ ಕೆ. ಫಣಿರಾಜ್ …'ಶಾಕ್ ಟ್ರೀಟ್‌ಮೆಂಟ್ ವಿಮರ್ಶೆ ನನಗೆ ಸಮ್ಮತವಲ್ಲ' ಎಂಬ ಲೇಖನವನ್ನು … ಅದು ಎಲ್ಲೆಲ್ಲೋ ಹರಿದು ಇಂಗಿಹೋಗುವ ತೊರೆಯಂತಿದೆ. ವೈಚಾರಿಕ …ಇಲ್ಲದ, ಅನೇಕ ತಪ್ಪು ಅರ್ಥೈಸುವಿಕೆಗಳಿಂದ ಕೂಡಿದ ಅವರ ಮಾತುಗಳು …ಯಲ್ಲಿ ಸಾಕಾರಗೊಳ್ಳಲೂ ಸೋತಿವೆ. ನನಗೆ ಬಲ್ಲಂತೆ 'ದೇಶಕಾಲ'ದ …ಫಣಿರಾಜ್ ಅವರಿಗೆ ತಕರಾರುಗಳೇ ಇಲ್ಲದೆ ಇರಲು ಸಾಧ್ಯವಿಲ್ಲ. ಆದರೆ …ಅವರು ತುರ್ತಾಗಿ 'ದೇಶಕಾಲ'ದ ಪರವಾಗಿ ನಿಂತು ಬಿಟ್ಟಿದ್ದಾರೆ. ಆದರೆ … ಎರಡೂ ಲೇಖನಗಳಲ್ಲಿ 'ದೇಶಕಾಲ'ದ ಪರವಾದ ಒಂದು ಸಮರ್ಥನೆಯನ್ನೂ …ಯು ಅವರಿಗೆ ಸಾಧ್ಯವಾಗಿಲ್ಲ.

…ುವೆಂಪು – ಮಾಸ್ತಿ ಅನಂತಮೂರ್ತಿ – ತೇಜಸ್ವಿ ವಾಗ್ವಾದಗಳು … ಹಾಕಿರುವ ಸಂವಾದ ಕ್ರಮದಿಂದ ನಾವು ಕಲಿಯಬೇಕಾದ್ದು ತುಂಬಾ … ಅದು ಮುಖ್ಯ. ಯಾರ ಪರ ನಿಲುವು …ಕೊಂಡರೂ ಸಂವಾದದ ಸಭ್ಯತೆ ಬಗ್ಗೆ ಗೌರವ …ಯಾಗದು' ಎಂದು ಫಣಿರಾಜ್ ಬರೆದಿದ್ದಾರೆ. … ದಾರಿ ತಪ್ಪಿಸುವ ಮಾತು. ನನಗೆ …ುವಂತೆ ತೇಜಸ್ವಿ ತಮ್ಮ ಲೇಖನಗಳಲ್ಲಿ …ಜ್ ಹೇಳಿರುವಂತೆ 'ಸಂವಾದದ ಸಭ್ಯತೆ'ಯ …ತಲೆಕೆಡಿಸಿಕೊಂಡಂತಿಲ್ಲ. ಇದು ಬೇಕೆಂದೇ …ರುವ ಅಸ್ಪಷ್ಟತೆ. ಆದರೆ ಇಲ್ಲಿ ಫಣಿರಾಜ್ ಯಾರ 'ಪರ' ಇದ್ದಾರೆಂಬುದೂ …ಅಸ್ಪಷ್ಟ. ಅದೇ ಸದ್ಯದ ಫಣಿರಾಜ್ ಅವರ ಮೂಲ ಸಮಸ್ಯೆ. ಬದಲಾದ …ರಾಜ್ ಅವರ ವರಸೆ.

…ಇನ್ನೊಂದು ಕಡೆ ಅವರು 'ಆದರೆ ಬನ್ನಾಡಿಯವರ ಹತಾಶೆಯ ಪ್ರಕಾರ … ಅಧಿಕಾರ ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗಿ ಬಿಟ್ಟಿದೆ; ಅದನ್ನು …ಗೆಯ ಹತ್ತಿ ಬಡಿಯುವ ಹಾಗೆ ಬಡಿದು ಸಪಾ ಮಾಡಬೇಕು' ಎಂದು …ದಲ್ಲಿ ಚುಚ್ಚಿದ್ದಾರೆ. ನನಗೆ ಹತಾಶೆ ಯಾಕಾಗಬೇಕು? ಯಾರ ಬಗ್ಗೆ? …ಕಾಲ' ನನ್ನ ಇಷ್ಟಾನಿಷ್ಟಗಳ ಮೇಲೆ ನಡೆಯುವ ಪತ್ರಿಕೆ ಅಲ್ಲ. ಅದರ …ವನ್ನು ನಾನು ಹೀಗಳೆಯುತ್ತಲೂ ಇಲ್ಲ. ನನಗೆ 'ದೇಶಕಾಲ'ದ ಬಗ್ಗೆ …ವುದು ತಾತ್ವಿಕ ಭಿನ್ನಾಭಿಪ್ರಾಯ ಮಾತ್ರ. ಫಣಿರಾಜ್ ಅವರು ಡಾ. …ಳ್ಳಿ ಬಾಲಸುಬ್ರಹ್ಮಣ್ಯ ಅವರು ಎತ್ತಿದ ಪ್ರಶ್ನೆಗಳನ್ನು ನನ್ನ ವಿರುದ್ಧ ತಿರುಗಿಸಿರುವುದು …ತ್ತ ವಿಪರ್ಯಾಸ. ಇದು ವಾಗ್ವಾದದ ಕ್ರಮ ಅಲ್ಲ. ಫಣಿರಾಜ್ ವಿವರಿಸಿರುವ …ೂನ ಮಾತುಗಳ ಹಿನ್ನೆಲೆಯಲ್ಲಿ ನೋಡಿದರೂ ಡಾ. ನರಹಳ್ಳಿ ಅವರು …ಕಾಲ' ಎದುರಿಸುತ್ತಿರುವ ಅಪಾಯವನ್ನು ಸರಿಯಾಗಿಯೇ ಗ್ರಹಿಸಿದ್ದಾರೆ. …ಗ್ಗೆ ಏನೂ ಹೇಳದೇ, 'ಅಧಿಕಾರ ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗಿ …ದೆ' ಎಂಬ ತಮ್ಮ ತಪ್ಪು ಗ್ರಹಿಕೆಯನ್ನು ನನ್ನ ವಿರುದ್ಧ ಹರಿಯಬಿಟ್ಟಿದ್ದಾರೆ. … ಎಲ್ಲ ವಿಷಯಗಳನ್ನೂ ತಿರುಚಿ, ತನಗೆ ಅನುಕೂಲವಾಗುವ ಬೇರೆಯೇ … ಬರುವಂತೆ ಮಂಡಿಸುವ ಫಣಿರಾಜ್ ಅವರ ವಾಗ್ವಾದದ ಪರಿ ಯಾರೂ … ಬೀಳುವಂತಿದೆ. ಫಣಿರಾಜ್ ಅವರು ತಮ್ಮ ಮಾತುಗಳನ್ನು ಗೊತ್ತು ಗುರಿ …ದೆ 'ಕುರುಡ ಹಿಡಿದ ಬಡ್ತಿಗೆ'ಯ ಹಾಗೆ ಉಪಯೋಗಿಸಿರುವುದು ನನಗಂತೂ …ರ್ಯ ತಂದಿದೆ. ನನ್ನ ಬರಹವನ್ನು ಫಣಿರಾಜ್ ಮತ್ತೊಮ್ಮೆ ಅವಸರ …ದೇ ಓದಿಕೊಳ್ಳಬೇಕು ಎಂದಷ್ಟೇ ಕೇಳಿಕೊಳ್ಳುತ್ತೇನೆ.

'ಶ್ರೇಷ್ಠತೆಯ ವ್ಯಸನ'ದ ಕುರಿತು ಪ್ರಸ್ತಾಪಿಸುತ್ತಾ ಫಣಿರಾಜ್ 'ಬನ್ನಾಡಿಯವರು …ಷ್ಠತೆಯ ವ್ಯಸನ ಎನ್ನುವುದು ನಮ್ಮ ಸಾಂಸ್ಕೃತಿಕ ಸನ್ನಿವೇಶದಲ್ಲಿ ಈಗಾಗಲೇ …ವಾಗಿ ಬಿಟ್ಟಿರುವ 'ಪ್ರತಿಗಾಮಿ ಮೌಲ್ಯ' ಎನ್ನುವಂತೆ ಬಾವುಟ ಹಾರಿಸುತ್ತಾರೆ. …ೂ ಲಂಕೇಶ್‌ರ ಹೆಸರೆತ್ತಿ!' ಎಂದು ಬರೆದಿದ್ದಾರೆ. ಇದನ್ನೇ ನಾನು 'ಕುರುಡ …ದ ಬಡ್ತಿಗೆ' ಎಂದದ್ದು. ಘೂಕೂ ಮಾತುಗಳ ಸಂದರ್ಭದಲ್ಲಾಗಲಿ 'ಶ್ರೇಷ್ಠತೆಯ …ನ'ದ ಚರ್ಚೆಯಲ್ಲಾಗಲೀ ನಾನು 'ಪ್ರಕಟವಾಗಿ ಬಿಟ್ಟಿದೆ', 'ಸಿದ್ಧವಾಗಿ ಬಿಟ್ಟಿರುವ' …ಬ ಮಾತುಗಳನ್ನು ಎಲ್ಲಿ ಹೇಳಿದ್ದೇನೆ? ಅದು ಅವರ ಊಹೆ ಮಾತ್ರ. ಅತಿ ಓದಿನಿಂದ ಬಂದಿರುವ ತನಗೆ ಮಾತ್ರ ತಿಳಿದಿದೆ ಎಂಬ ಏಕಪಾತ್ರಾಭಿನಯದ ಶೈಲಿ. 'ಶ್ರೇಷ್ಠತೆಯ ವ್ಯಸನ' ಚರ್ಚೆಯ ವೇಳೆ ಕೆ. ವಿ. ಸುಬ್ಬಣ್ಣ ಮತ್ತು ಲಂಕೇಶ್ ತೆಗೆದುಕೊಂಡ ನಿಲುವು ಎಲ್ಲರಿಗೂ ತಿಳಿದಿರುವಂಥದ್ದೇ. ಲಂಕೇಶರ ಬಗ್ಗೆ ನಾನು ಪ್ರಸ್ತಾಪಿಸಿದ್ದು 'ಲಂಕೇಶ್, ಫಣಿರಾಜರ ಹಾಗೆ ತಮಗೆ ಬೇಕಾದವರ ಪರ ಭಾವಾವೇಶ ತೋರದೆ, ತಮಗೆ ತೀವ್ರವಾಗಿ ಅನಿಸಿದ್ದನ್ನು ಹೇಗೆ ಮಂಡಿಸುತ್ತಿದ್ದರು' ಎಂದು ಹೇಳಲು. ಆದರೆ ಫಣಿರಾಜರಿಗೆ ನಾನು, ಲಂಕೇಶ್‌ರ ಹೆಸರೆತ್ತಿ ಬಾವುಟ ಹಾರಿಸಿದ ಹಾಗೆ ತೋರುತ್ತದೆ.

ಇನ್ನು, ಸುಬ್ಬಣ್ಣನವರು 'ಶ್ರೇಷ್ಠತೆಯ ವ್ಯಸನ'ದ ಬಗ್ಗೆ ಬರೆದಿರುವುದು, 'ತನಗೆ ತಾನೇ ತಿರುಗಿ ಬಿದ್ದ ರೀತಿ' ಎಂದು ನಾನು ಈಗಾಗಲೇ ಬೇರೊಂದು ಲೇಖನದಲ್ಲಿ ಬರೆದಿದ್ದೇನೆ. 'ಸಾಕ್ಷಿ' ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾಗಿದ್ದ ಸುಬ್ಬಣ್ಣ ಬೇಕಾಗಿಯೋ, ಬೇಡವಾಗಿಯೋ ಅಂತಹ ಒಂದು 'ವ್ಯಸನ'ದ ಭಾಗವೇ ಆಗಿದ್ದರು. ಅದು ಮುಂದೆ 'ನೀನಾಸಂ' ಮೂಲಕ ಕನ್ನಡ ರಂಗಭೂಮಿಗೂ ವಿಸ್ತರಿಸಿದ್ದು ಬೇರೆಯೇ ಮಾತು. 'ಶ್ರೇಷ್ಠತೆಯ ವ್ಯಸನ' ಈಗಾಗಲೇ ಸಿದ್ಧವಾಗಿಬಿಟ್ಟಿರುವ 'ಪ್ರತಿಗಾಮಿ ಮೌಲ್ಯ' ಅಲ್ಲವೆಂದು ಒಪ್ಪಿಕೊಂಡರೂ, ಅದೊಂದು ಪ್ರತಿಗಾಮಿ ಮೌಲ್ಯವೇ. ಶ್ರೇಷ್ಠ ಬರಹಗಳನ್ನು ಕೊಡಬೇಕೆಂಬ ತುಡಿತ ಎಲ್ಲ ಬರಹಗಾರರಲ್ಲಿಯೂ ಇರುವಂತಹದ್ದೆ. ಆದರೆ ತಮ್ಮ ಬರಹ ಮಾತ್ರ ಶ್ರೇಷ್ಠ ಎನ್ನುವ ನಿಲುವು ಅಪಾಯಕಾರಿ. ಅನಂತಮೂರ್ತಿಯವರು ಕುವೆಂಪು ಕಾದಂಬರಿಗಳ ಬಗ್ಗೆ ಮಾಡಿದ ಟೀಕೆ ಮತ್ತು ಅಡಿಗರ 'ಭೂಮಿಗೀತ' ಕುರಿತು ಮಾಡಿದ ವಿಶ್ಲೇಷಣೆ ಅಂತಹ ವಾತಾವರಣವನ್ನು ಹುಟ್ಟುಹಾಕಿತ್ತು. ಈಗ ಹಿಂತಿರುಗಿ ನೋಡಿದಾಗ ಈ ಇಬ್ಬರು ಲೇಖಕರ ಕಾದಂಬರಿಗಳನ್ನು ಅಕ್ಕಪಕ್ಕದಲ್ಲಿ ಇಟ್ಟು ಅನಂತಮೂರ್ತಿಯವರ ಮಾತುಗಳನ್ನು ಪುನಃ ಒರೆ ಹಚ್ಚಬೇಕಾದ ಅಗತ್ಯ ಇದೆ ಅನ್ನಿಸುವುದಿಲ್ಲವೇ? ನವ್ಯ ಸಾಹಿತ್ಯದ ಉಚ್ಛ್ರಾಯ ಕಾಲದಲ್ಲಿ 'ಸಾಕ್ಷಿ' ಪತ್ರಿಕೆಯ ಮೂಲಕ ಅಡಿಗರು ನಡೆಸಿದ್ದು ಈ ಬಗೆಯ 'ಸಾಂಸ್ಕೃತಿಕ ರಾಜಕಾರಣ'ವನ್ನೇ ಅಲ್ಲವೇ? ಅದನ್ನು ಅಡಿಗರು ಬಹಳ 'ಅಗ್ರೆಸಿವ್' ಆಗಿ ಮಾಡಿದರು. ನವ್ಯ ಸಾಹಿತ್ಯವನ್ನು ಸ್ಥಾಪಿಸಿಕೊಳ್ಳಬೇಕಾದ ತುರ್ತಿನಲ್ಲಿ ಅಡಿಗರು ಹಾಗೆ ಮಾಡಿದ್ದರು ಎಂದು ಗ್ರಹಿಸಬಹುದು.


• ವಸಂತ ಬನ್ನಾಡಿ

ಅದೆಲ್ಲ ಕಳೆದುಹೋದ ಕಥೆ ಎಂದುಕೊಳ್ಳುತ್ತಿರುವಾಗ, ಈಗ ಅದೇ 'ಸಾಂಸ್ಕೃತಿಕ ರಾಜಕಾರಣ'ದ ಮುಂದುವರಿದ ಭಾಗದಂತೆ 'ದೇಶಕಾಲ' ಕಾಣಿಸಿಕೊಂಡಿರುವುದು ಅನಿರೀಕ್ಷಿತವೇನಲ್ಲ. ಅಡಿಗರ 'ಅಗ್ರೆಶನ್' ಮಾತ್ರ ಇಲ್ಲಿ ಮಾಯವಾಗಿದೆ, ಅಷ್ಟೇ. ಆದರೆ ಸೂಕ್ಷ್ಮವಾಗಿ ತನಗೆ ಬೇಕಾದವರನ್ನು 'ಶ್ರೇಷ್ಠತೆ'ಯ ಹೆಸರಿನಲ್ಲಿ ಮೇಲ್ಪಂಕ್ತಿಯಲ್ಲಿ ಕೂರಿಸುವುದು ಮತ್ತು ಉಳಿದವರನ್ನು ಸರತಿ ಸಾಲಿನಲ್ಲಿ ಹೊರಬಾಗಿಲಿನಲ್ಲಿ ಕಾಯುವಂತೆ ಮಾಡುವುದು 'ದೇಶಕಾಲ' ಕಳೆದ ಐದು ವರ್ಷಗಳಲ್ಲಿ ಬೆಳೆಸಿಕೊಂಡಿರುವ 'ವ್ಯಸನ'. ಎಲ್ಲಾ ಲೇಖಕರನ್ನು ಒಳಗೊಳ್ಳುವುದು ಒಂದು ಪತ್ರಿಕೆಗೆ ಸಾಧ್ಯವಾಗುವುದಿಲ್ಲ ಎಂದು ಗೊತ್ತಿದ್ದೂ ಈ ಮಾತುಗಳನ್ನು ಹೇಳುತ್ತಿದ್ದೇನೆ. ಇದು ಪತ್ರಿಕೆಯ ಮನಸ್ಥಿತಿಗೆ ಸಂಬಂಧಿಸಿದ ವಿಷಯ. ಈಗಲೂ ಅಡಿಗರ ಬಗ್ಗೆ ಲೇಖನ ಬರೆಸುವ 'ದೇಶಕಾಲ', ತೇಜಸ್ವಿ ತೀರಿಕೊಂಡಾಗ ಒಂದು ಸಣ್ಣ ಟಿಪ್ಪಣಿಯನ್ನೂ ಪ್ರಕಟಿಸಿದ್ದಿಲ್ಲ. ಇದು ಒಂದು ಉದಾಹರಣೆ ಮಾತ್ರ. ಒಬ್ಬ ಕವಿಗೆ ಹತ್ತಾರು ಪುಟಗಳನ್ನು ಪದೇಪದೆ ನೀಡುವ ಮೂಲಕ ನೂರಾರು ಕವಿಗಳನ್ನು ಪತ್ರಿಕೆಯ ಚೌಕಟ್ಟಿನಿಂದ ಹೊರಗಿಡುವುದೂ ಪತ್ರಿಕೆಯೊಂದರ ಮನಸ್ಥಿತಿಯನ್ನು ತೋರಿಸುತ್ತದೆ. ಆ ಮೂಲಕ 'ಸಾಂಸ್ಕೃತಿಕ ಯಜಮಾನಿಕೆ' ಸ್ಥಾಪಿಸುವ ಉದ್ದೇಶ ಹೊಂದಿರುವುದನ್ನೂ ತೋರಿಸುತ್ತದೆ. ಇದೆಲ್ಲಾ ಗೆಳೆಯ ಫಣಿರಾಜರಿಗೆ ಮುಖ್ಯವೇ ಆಗುವುದಿಲ್ಲ ಎಂಬುದು ಅವರ ಈಗಿನ ಮನಸ್ಥಿತಿ.

ಅಂತಿಮವಾಗಿ ಇದು ಯುವ ಬರಹಗಾರರಲ್ಲಿ ತಮ್ಮ ಬರಹವೊಂದು 'ದೇಶಕಾಲ'ದಲ್ಲಿ ಬಂದರೆ ಸಾಕು ಎಂಬ ತಹತಹವನ್ನು ಹುಟ್ಟಿಸಿದಂತಿದೆ. ಸ್ವಾಭಿಮಾನ ಬಿಟ್ಟು ಕಾಯುವ ವಾತಾವರಣ ನಿರ್ಮಿಸಿದಂತಿದೆ. 'ದೇಶಕಾಲ' ಇದ್ದಕ್ಕಿದ್ದಂತೆ ಎಚ್ಚರಗೊಂಡು ಹೊಸ ಬರಹಗಾರರನ್ನು ಪರಿಚಯಿಸುವ ಕೆಲಸಕ್ಕೆ ಕೈ ಹಾಕಿದ್ದೂ ತೀವ್ರವಾದ ಟೀಕೆಗೆ ಗುರಿಯಾದದ್ದೂ ಈ ಕಾರಣಕ್ಕಾಗಿಯೇ. ಇದು ಖಂಡಿತ ಬ್ರಾಹ್ಮಣ, ಅಬ್ರಾಹ್ಮಣ ಪ್ರಶ್ನೆ ಅಲ್ಲ. ಒಂದು ಪತ್ರಿಕೆ 'ಬ್ರಾಹ್ಮನಿಕಲ್' ಆದಾಗ ಬರೋ ಸಮಸ್ಯೆ. ಈ ವಿಷಯದಲ್ಲಿ ಲತಾ ಮತ್ತು ಬಿಜೂರ್ ಹೇಳಿರುವುದಕ್ಕೆ ನನ್ನ ಸಹಮತ ಇದೆ. ಫಣಿರಾಜ್ ಹೇಳಿದ 'ಕಾತುರ'ದ ಪ್ರಶ್ನೆ ಇಲ್ಲಿ ಮುಖ್ಯ ಅಲ್ಲ.

ನನ್ನ ಬರಹದಲ್ಲಿ ಕುವೆಂಪು ಅವರ ಹೆಸರನ್ನು ನಾನು ಉದ್ದೇಶಪೂರ್ವಕವಾಗಿ ತಂದಿದ್ದೇನೆ. ಕುವೆಂಪು ಅವರು ವಿವೇಕಾನಂದ, ಗಾಂಧಿ ಹಾಗೂ ಅರಬಿಂದೋ ಅವರಿಂದ ಪ್ರಭಾವಿತರಾಗಿ ತಮ್ಮದೇ ಜೀವನದೃಷ್ಟಿ ರೂಪಿಸಿಕೊಂಡರು. ಜೀವನದುದ್ದಕ್ಕೂ ಪುರೋಹಿತಶಾಹಿಯನ್ನು ವಿರೋಧಿಸಿದರು. ಕಾಮು, ಕಾಫ್ಕ, ಎಲಿಯೆಟ್, ಲಾರೆನ್ಸ್‌ರನ್ನು ಅರೆಬರೆಯಾಗಿ ಕನ್ನಡಕ್ಕೆ ತಂದ ಗೋಪಾಲಕೃಷ್ಣ ಅಡಿಗ ಹಾಗೂ ಅನಂತಮೂರ್ತಿಯವರು ರೂಪಿಸಿದ ಪರ್ಯಾಯ ಜೀವನದೃಷ್ಟಿಯಾದರೂ ಏನು? ಈಚೆಗೆ ಮೈಸೂರಿನಲ್ಲಿ ಯುವ ಬರಹಗಾರರ ವೇದಿಕೆಯಿಂದ ಮಾತಾಡಿದಾಗಲೂ, ಅನಂತಮೂರ್ತಿ ಅವರು ಕಾಮು, ಕಾಫ್ಕ, ಅಗ್ರಹಾರದ ನೆನಪು ಇವುಗಳಿಂದ ಹೊರಬಂದ ಹಾಗೆ ತೋರಲಿಲ್ಲ.

ಅಡಿಗ, ಅನಂತಮೂರ್ತಿ ಹಾಗೂ ಸುಬ್ಬಣ್ಣನವರ ಬಗ್ಗೆ ನನಗೆ ಈಗಲೂ ಗೌರವ ಇದೆ. ಆದರೆ ಅವರ ಬಗ್ಗೆ ಭ್ರಮನಿರಸನವಾದ ಕೆಲವು ಸಂಗತಿಗಳನ್ನು ಇಲ್ಲಿ ಹೇಳಿದರೆ ವಿಷಯಾಂತರವಾಗಲಾರದು ಎಂದುಕೊಂಡಿದ್ದೇನೆ. ಮೊದಲನೆಯದು, ಅಡಿಗರ ಬಹು ಚರ್ಚಿತ 'ಜನಸಂಘ ರಾಜಕೀಯ'ದ ಬಗ್ಗೆ. ಇನ್ನೊಂದು, ಅಡಿಗ ಹಾಗೂ ಅನಂತಮೂರ್ತಿಯವರು ಧರ್ಮಸ್ಥಳ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದು. ಸುಬ್ಬಣ್ಣನವರು ಫೋರ್ಡ್ ಹಣ ತೆಗೆದುಕೊಂಡಾಗಂತೂ ನನಗೆ ನಿಜಕ್ಕೂ ಆಘಾತವಾಯಿತು. ಇವೆಲ್ಲ 'ಒಂದು ಜನಾಂಗ' ಈ ಬಗೆಯ ದ್ವಂದ್ವ ನಿಲುವುಗಳನ್ನು ಹೇಗೆ ಗ್ರಹಿಸಬೇಕು? ತನ್ನ ಸ್ವಾರ್ಥಕ್ಕಾಗಿ ಕಮ್ಯುನಿಸ್ಟ್ ಪಕ್ಷದ ಜೊತೆಗೆ ಶಾಮೀಲಾದುದಕ್ಕಾಗಿ ಮತ್ತು ಸ್ಟಾಲಿನ್ ಪ್ರಶಸ್ತಿ ಪಡೆದುಕೊಂಡದ್ದಕ್ಕಾಗಿ ಬಳಿಕ ಪಶ್ಚಾತ್ತಾಪ ವ್ಯಕ್ತಪಡಿಸಿದ ಬ್ರೆಕ್ಟ್‌ನ ಹಾಗೆ ಇವರ್‍ಯಾರೂ ಪಶ್ಚಾತ್ತಾಪದ ಹೇಳಿಕೆಗಳನ್ನು ನೀಡಿದ ಹಾಗೆ ಇಲ್ಲ. ಬದಲಾಗಿ ಸುಮ್ಮನಿದ್ದು ಬಿಟ್ಟರು. ಆಗಲೂ ಮತ್ತು ಈಗಲೂ ಅವರ ಹಿಂಬಾಲಕರು ಮಾತ್ರ ಅದನ್ನೆಲ್ಲಾ ಸಮರ್ಥಿಸುತ್ತಲೇ ಇದ್ದಾರೆ ಎನ್ನುವುದೇ ಒಂದು ಸೋಜಿಗ. ಇದು ಯಾರನ್ನೂ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಪ್ರಶ್ನೆ ಅಲ್ಲ. ಸಂಬಂಧಪಟ್ಟವರು, ತಮ್ಮ ನಿಲುವುಗಳನ್ನು ಹೇಳಬೇಕಾದ ಸಂದರ್ಭ. ಇಂದಿನ 'ದೇಶಕಾಲ'ಕ್ಕೆ ಸಂಬಂಧಿಸಿದ ವಾಗ್ವಾದದಲ್ಲೂ ತಮ್ಮನ್ನು ಸಮರ್ಥಿಸಿಕೊಳ್ಳಬೇಕಾದವರು ಅದರ ಸಂಪಾದಕರೇ.

ಅಡಿಗ, ಅನಂತಮೂರ್ತಿ, ಸುಬ್ಬಣ್ಣ 'ಎಕ್‌ಲೆಕ್‌ಟಿಸಂ'ನ್ನೇ ತಮ್ಮ ಶಕ್ತಿಯನ್ನಾಗಿ ಮಾಡಿಕೊಂಡ ಬಗ್ಗೆ ಹೇಳಿದೆನಲ್ಲ, ಆ ಪರಂಪರೆ ಮುಂದುವರಿಯುವ ಎಲ್ಲಾ ಲಕ್ಷಣಗಳು ಈಗ ಕನ್ನಡದಲ್ಲಿ ಕಾಣಿಸುತ್ತಿದೆ. ರಿಲ್ಕೆ, ಬೋದಿಲೇರ್ ಮುಂತಾದವರ ಜೊತೆಗೆ ತಾವೋ ಫಿಲಾಸಫಿಯನ್ನು ಈಗ ಧಾರಾಳವಾಗಿ ಬೆರೆಸಲಾಗುತ್ತಿದೆ. ಫಣಿರಾಜ್ ಕೂಡಾ 'ಎಡಪಂಥೀಯ'ನಾಗಿ ತಮಗೆ ಗೊತ್ತಿರುವುದನ್ನೆಲ್ಲಾ ಈ ಪರಂಪರೆಗೆ ಧಾರೆ ಎರೆಯಲು ಹೊರಟಹಾಗಿದೆ.

ಬೇರೆ ಲೇಖಕರನ್ನು ಕನ್ನಡಕ್ಕೆ ತರುವುದು ಒಂದು ಸಹಜ ಬೆಳವಣಿಗೆ. ಕಾಫ್ಕ, ರಿಲ್ಕೆ ಶ್ರೇಷ್ಠ ಬರಹಗಾರರಲ್ಲ ಎಂಬುದು ನನ್ನ ಮಾತಿನ ಅರ್ಥ ಅಲ್ಲ. ಆದರೆ ಸ್ವತಃ ನೆರುಡ ಒಂದು ಸಂದರ್ಭದಲ್ಲಿ 'ಕಾಮು, ಕಾಫ್ಕ ನಮಗೆ ಮಾದರಿ ಅಲ್ಲ' ಎಂದು ಹೇಳಿದ್ದನ್ನೂ ಮತ್ತು ಬ್ರೆಕ್ಟ್ 'ರಿಲ್ಕೆನ ಋಷಿತನ ನನಗೆ ಅಸಹ್ಯ ತರುತ್ತದೆ' ಎಂದು ಹೇಳಿದ್ದನ್ನೂ ನೆನೆಸಿಕೊಂಡರೆ, ನಾವು ನಿರ್ವಹಿಸಬೇಕಾದ ಜವಾಬ್ದಾರಿ ಅರ್ಥವಾಗುತ್ತದೆ. ಇದು ಬರಿ ಹೆಸರುಗಳನ್ನು ಬೆರೆಸುವ ಪ್ರಶ್ನೆ ಅಲ್ಲ. 'ದೇಶಕಾಲ'ದಿಂದಾಗಲೀ, ಫಣಿರಾಜ್ ಅವರಿಂದಾಗಲೀ ಇದನ್ನು ನಾನು ನಿರೀಕ್ಷಿಸುವುದಿಲ್ಲ. ಫಣಿರಾಜ್ ತನ್ನ ಅನಗತ್ಯ ಧಾರ್ಷ್ಟ್ಯ ತೊರೆದು, ತಾನು ಅಷ್ಟಾಗಿ ಒಪ್ಪದ ವ್ಯಕ್ತಿಗಳನ್ನೂ, ವಿಷಯಗಳನ್ನೂ ತನ್ನ ಎಲ್ಲ ಶಕ್ತಿ ಹಾಕಿ ಸಮರ್ಥಿಸುವ ಕಾಯಕ ತೊರೆದು ಮೊದಲಿನಂತಾಗಲಿ ಎಂಬುದು ನನ್ನ ಹಾರೈಕೆ. ಫಣಿರಾಜ್ ಜೊತೆ ಇನ್ನೊಂದು ಸುತ್ತಿನ 'ವಾಗ್ವಾದ' ನಡೆಸುವ ಹುಮ್ಮಸ್ಸು ನನಗೆ ಖಂಡಿತ ಇಲ್ಲ. ●

…ಹಗಳನ್ನು ಆಯ್ದುಕೊಳ್ಳುವುದರಲ್ಲಿ ಅವರಿಗೆ ಇದ್ದದ್ದು ಎಲ್ಲ …ಲಗಳಿಂದಲೂ ಒಳ್ಳೆಯದನ್ನು ಹೆಕ್ಕಿಕೊಳ್ಳುವ ಒಂದು ಎಕ್ಲೆಕ್ಟಿಕ್ …ರಣೆ "ಸಾಹಿತ್ಯದಲ್ಲಿ ಶ್ರೇಷ್ಠತೆ ನನಗೆ ಜೀವನ್ಮರಣದ ಪ್ರಶ್ನೆ" ಎಂದು …ರು ಹೇಳಿದ್ದರು. ಆದರೆ ಶ್ರೇಷ್ಠತೆಯ ಅವರ ಕಲ್ಪನೆ ಜಗತ್ತಿನ …ಸ್ತವಗಳನ್ನು ಮರೆತದ್ದಲ್ಲ; ಈ ವಾಸ್ತವಗಳು ಸಾಹಿತ್ಯದಲ್ಲಿ ಹೇಗೆ …ವಾಗುತ್ತವೆ ಎಂಬುದನ್ನು ಅವರು ಅತ್ಯಂತ ಜಾಗರೂಕರಾಗಿ …ಮನಿಸುತ್ತಿದ್ದರು.


"………ಕಲ್ಪನೆಯೊಳಗೆ
ಬೀಜವೊಂದೇ ಹಬ್ಬಿ ತಬ್ಬಬಹುದಖಿಲಾಂಡ ಕೋಟಿಯನ್ನು
ಪ್ರಾಣವೋ ಅಸ್ಥಿಪಂಜರಬದ್ಧ…"
(ಸ್ವಾತಂತ್ರ್ಯ: 1958ರ ಪಾಠ)

ಈ ಅರಿವು ಇಲ್ಲದೆ ಯಾವ ಕಾಣ್ಕೆ, ಉದ್ದೇಶ ಅಥವಾ …ಸ್ವಾಂತದಿಂದಲೂ ಚೂರೂ ಉಪಯೋಗವಿಲ್ಲ. ಎಲ್ಲ ಆದರ್ಶಗಳೂ …ಳಪಂಡವಾಗಿರುವ ಈ ಕಾಲದಲ್ಲೂ ಸುರೇಶ್ ಕಾಣ್ಕೆಯ …ಮಾತನಾಡುವುದು ಅಸಂಗತವಾಗಿ ಕಾಣುತ್ತದೆ. ಅಡಿಗರು …ದರ್ಶಗಳನ್ನು ಅನುಮಾನದಿಂದಲೇ ಕಂಡವರು. ಸಾಹಿತ್ಯದ ಮಾತಿಗೆ …ದರಂತೂ ಆದರ್ಶ ಭಾಷೆಯಲ್ಲ ಹೇಗೆ ಮೈದಳೆಯುತ್ತದೆ …ಬುದರ ಕಡೆಗೆಯೇ ಅವರ ಗಮನ.

"ಅರಗದಂಥ ಕಚ್ಚಾಗಾಳಿಗೀಳುಗಳ
ಕಾಗದದ ಮೇಲೆಲ್ಲ ಕಾರಿಕೊಳ್ಳದ ಹಾಗೆ
ಪಿರ್ಹಡಿಸು ಸಹಜ ಹೊರದಾರಿಗಳ
………
ದೊಡ್ಡ ದೊಡ್ಡ ಮಾತು ಬೆಲೂನು
ಹಿಗ್ಗುವಾಗ್ಗೆಲ್ಲ ತಾಗಿಸು ನಿಜದ ಸೂಜಿ ಮೊನೆ"
(ಪ್ರಾರ್ಥನೆ)

ಸಾಹಿತ್ಯದ ಈ ಅಸಲುಕಸುಬಿನ ಬಗ್ಗೆ ದೇಶಕಾಲ ತೋರಿಸುತ್ತಿರುವ ನಿಷ್ಠೆ ಕೂಡ ಇದೇ ಬಗೆಯದ್ದು.

ಆದರೆ ಈ ನಿಷ್ಠೆ ಸುರೇಶ್‌ರಿಗೆ 'ಕಾಣ್ಕೆ'ಯ ಬದಲು ಚೆಂದದ ಭೌತಿಕ ಉತ್ಪನ್ನವೊಂದನ್ನು ಒದಗಿಸುವ ಸಂಪಾದಕರ ತವಕದ ಹಾಗೆ ಕಾಣಿಸುತ್ತದೆ. ದೇಶಕಾಲ ವಿಶೇಷಾಂಕ ಅವರಿಗೆ ಇತರ ಪತ್ರಿಕೆಗಳ ವಿಶೇಷಾಂಕಗಳ ಹಾಗೆಯೇ ಕಂಡಿದೆ. ಇದು ಉಡಾಫೆಯ ಮಾತು. ಕಳೆದ ಸಾಲಿನ ಯಾವುದೇ ದೀಪಾವಳಿ ವಿಶೇಷಾಂಕವನ್ನಾದರೂ ದೇಶಕಾಲ ವಿಶೇಷಾಂಕದ ಜೊತೆ ಪುಟಪುಟ ತಾಳೆ ಹಾಕಿ ನೋಡಿದರೆ ಅಭಿರುಚಿ ಮತ್ತು ಗುಣಮಟ್ಟಗಳಲ್ಲಿ ಅವುಗಳ ನಡುವೆ ಇರುವ ಅಗಾಧ ಅಂತರ ತಿಳಿಯುತ್ತದೆ. ಸುರೇಶ್ ಅವರ ಮಾತಿನಲ್ಲಿ ಇನ್ನೂ ಒಂದು ಸಮಸ್ಯೆ ಇದೆ. ಈಗಾಗಲೇ ಹಲವರು ದೇಶಕಾಲದ ಮೇಲೆ ಶ್ರೇಷ್ಠತೆಯ ವ್ಯಸನದ ಆರೋಪ ಹೊರಿಸಿದ್ದಾರೆ. ಸುರೇಶ್ "ಅದು ಇತರ ಎಲ್ಲ ಪತ್ರಿಕೆಗಳ ಹಾಗೆಯೇ" ಎನ್ನುತ್ತಿದ್ದಾರೆ. ಇವರನ್ನು ಅಲ್ಲಗಳೆದರೆ ಅವರನ್ನು ಸಮರ್ಥಿಸಿದ ಹಾಗೆ. ಅವರನ್ನು ಅಲ್ಲಗಳೆದರೆ ಇವರನ್ನು ಸಮರ್ಥಿಸಿದೆ ಹಾಗೆ. ಅಂತೂಇಂತೂ ಕುಂತೀಮಕ್ಕಳಿಗೆ ವನವಾಸ ಎಂದು ಹೇಳಿದಹಾಗೆ ದೇಶಕಾಲಕ್ಕೆ ಕಟಕಟೆ ವಾಸ ತಪ್ಪಿದ್ದಲ್ಲ.



• ಜಿ.ರಾಜಶೇಖರ

ವಿಮರ್ಶೆಯಲ್ಲಿ ನಿಖರವಾದ ಮಾನದಂಡಗಳನ್ನು ರೂಪಿಸಿಕೊಳ್ಳದೆ ಬೇಕಾಬಿಟ್ಟಿಯಾಗಿ ಬರೆದರೆ ಆಗುವ ಅಧ್ವಾನಗಳು ಇಂತಹವೇ.

ನೂರಾಒಂದನೆಯ ಸಲ ಹೇಳುತ್ತಿದ್ದೇನೆ: ದೇಶಕಾಲದಲ್ಲಿ ಕೊರತೆಗಳಿಲ್ಲ ಅಥವಾ ಅದು ವಿಮರ್ಶೆ, ಸ್ವವಿಮರ್ಶೆಗಳಿಗೆ ಹೊರತಾದದ್ದು ಎಂಬುದು ಖಂಡಿತ ನನ್ನ ಅಭಿಪ್ರಾಯವಲ್ಲ. ಆದರೆ ಅದರ ಬರಹಗಳಿಂದ ನಿದರ್ಶನಗಳನ್ನು ಒದಗಿಸದೆ ತಮ್ಮ ಅಭಿಪ್ರಾಯಗಳಿಗೆ ಸಾಕ್ಷ್ಯಾಧಾರಗಳನ್ನು ಕೊಡದೆ, ತಮ್ಮ ಅನ್ನಿಸಿಕೆಗಳನ್ನೋ ಅಥವಾ ಗೆಳೆಯರ ಮಾತುಗಳನ್ನೋ ವಿಮರ್ಶೆ ಎಂಬಂತೆ ಸಾದರಪಡಿಸುವುದಕ್ಕೆ ನನ್ನ ಆಕ್ಷೇಪವಿದೆ. ದೇಶಕಾಲ ವಿಶೇಷಾಂಕದಲ್ಲಿ ಪ್ರಕಟವಾಗಿರುವ ಕವಿತೆ, ಸಂದರ್ಶನ, ಆತ್ಮಚರಿತ್ರೆ, ಕಾದಂಬರಿ, ನಾಟಕ ಹಾಗೂ ಅಷ್ಟೂ ಕತೆ, ನೀಳ್ಗತೆಗಳನ್ನು ಕಡೆಗಣಿಸಿ ಕೇವಲ ಅದರ 21 ಲೇಖಕರು ಮತ್ತು ಪುಸ್ತಕಗಳ ಪಟ್ಟಿಯನ್ನು ಹಿಡಿದುಕೊಂಡು ಕುಟ್ಟಿದ್ದಾಯಿತು. ಈಗ ವಿಶೇಷಾಂಕದ ಲೇಖಕರನ್ನು ಪರಿಚಯಿಸುವ ಜಯಂತ್ ಕಾಯ್ಕಿಣಿಯವರ ಕಿರುಬರಹಗಳ ಬಗ್ಗೆ ಸುರೇಶ್ ಕ್ಯಾತೆ ತೆಗೆದಿದ್ದಾರೆ; ಆದರೆ ವಿಶೇಷಾಂಕದಲ್ಲಿರುವ ಜಯಂತರ ಕತೆ, 'ಕೋಮು ಗಾಂಧಾರ'ದ ಬಗ್ಗೆ ಒಂದು ಮಾತೂ ಆಡುವುದಿಲ್ಲ. ಆಹಾ! ವಿಮರ್ಶೆಯ ಸದಸದ್ವಿವೇಕ ಎಂದರೆ ಇದೇ ಅಲ್ಲವೇ? ●

▶▶ 14

ಹಾಕುವಷ್ಟು ಪ್ರಬಲವಾಗಿದೆ. ಕೋಮುವಾದವಂತೂ ಒಂದು ಮನೋಉನ್ಮಾದವಾಗಿ ಎಲ್ಲಾ ಕಡೆ ವ್ಯಾಪಿಸುತ್ತಿದೆ. ಇಂಥ ಕ್ಷಿಷ್ಟಕರ ಸಂದರ್ಭದಲ್ಲಿ ಧಾರ್ಮಿಕ ಮೂಲಭೂತವಾದಕ್ಕೆ ಕಟ್ಟುಬಿದ್ದ ಸಾಂಸ್ಕೃತಿಕ ವಲಯದ ಧ್ರುವೀಕರಣ ತುಂಬಾ ಅಪಾಯಕಾರಿಯಾದುದು. ಆದರೆ ಈ ವಲಯದಲ್ಲಿ ಮುಚ್ಚುಮರೆಯಿಲ್ಲವೆಂಬುದು ಗಮನಾರ್ಹ ಸಂಗತಿ. ಈ ವಲಯಕ್ಕೆ ಮುಖವಾಡಗಳಿಲ್ಲ, ನಿಜಮುಖದ ಎರಡು ಕಣ್ಣುಗಳಾಗಿ ಜಾತಿವಾದ ಮತ್ತು ಕೋಮುವಾದ ಗಳಿರುವುದರಿಂದ ಅದರ ನೋಟವೂ ಸ್ಪಷ್ಟ; ನಮ್ಮ ನೋಟವೂ ಸ್ಪಷ್ಟ. ಹೀಗಾಗಿ ಇವರ ಸಾಂಸ್ಕೃತಿಕ 'ಆವರಣ'ಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ.



2. ಜಾತಿವಾದ ಮತ್ತು ಕೋಮುವಾದದ ಪರವಾಗಿ ಇಲ್ಲವೆಂಬ ಭಾವನೆ ಮೂಡಿಸುತ್ತಲೇ ಮೇಲ್ವರ್ಣ ಮತ್ತು ಮೇಲ್ವರ್ಗಗಳ ಸಂವೇದನಾ ಸೂಕ್ಷ್ಮತೆಗಳನ್ನು ಪ್ರಧಾನವಾಗಿಸಿಕೊಂಡಿರುವ ಇನ್ನೊಂದು ವಲಯವು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಬಲವಾಗುತ್ತಿದೆ. ಈ ವಲಯವು ಸೃಷ್ಟಿಶೀಲತೆಯ ವೈಯಕ್ತಿಕ ಅನನ್ಯತೆಯನ್ನು ಮುಂದುಮಾಡುತ್ತ ಸಾಮಾಜಿಕ ಪರಿಭಾಷೆ ಮತ್ತು ಕಾಳಜಿಯನ್ನು ನಿರ್ಲಕ್ಷಿಸುತ್ತಿದೆ. ಆದರೆ ಮೇಲ್ನೋಟಕ್ಕೆ ಇದು ಜಾತಿವಾದಿ, ಕೋಮುವಾದಿ ಎನ್ನಿಸುವುದಿಲ್ಲ, ಮೇಲ್ವರ್ಣ-ಮೇಲ್ವರ್ಗಗಳ ಪರ ಎನ್ನಿಸುವುದಿಲ್ಲ. ಆದರೆ ಆಳದಲ್ಲಿರುವ ಸಂವೇದನಾಶೀಲತೆ ಮೇಲ್ವರ್ಣ ಮತ್ತು ವರ್ಗಾನುಭವದಿಂದ ರೂಪುಗೊಂಡಿರುವುದು ಸ್ಪಷ್ಟವಾಗುತ್ತಿದೆ. ಜಾತಿ-ಕೋಮುವಾದದ ವಿಷಯಕ್ಕೆ ಬಂದರೆ ಅವುಗಳನ್ನು ವಿರೋಧಿಸುವವರೂ ಇಲ್ಲಿದ್ದಾರೆ; ಒಪ್ಪಿ ಮಗುಮ್ಮಾಗಿ ಇರುವವರೂ ಇಲ್ಲಿದ್ದಾರೆ. ಆ ಕಾರಣದಿಂದಲೇ ಜಾತಿವಾದ ಮತ್ತು ಕೋಮುವಾದಕ್ಕೆ ಸೆಡ್ಡುಹೊಡೆದಂತೆ ಮಾತಾಡುವ ವಲಯ ಇದಲ್ಲ. ತನ್ನನ್ನು 'ಆರೋಗ್ಯಕರ ಸಾಮಾಜಿಕ ವಲಯ'ವೆಂದು ಬಿಂಬಿಸಿಕೊಳ್ಳುವ ಸಲುವಾಗಿಯೋ ಏನೋ ಕೆಲವು ಕೋಮುವಾದ ವಿರೋಧಿಗಳಿಗೂ ಕೆಲವು ತಳಸ್ತರದ ಸಾಹಿತಿಗಳಿಗೂ 'ಸ್ಥಾನಗೌರವ'ವನ್ನೂ ಕಲ್ಪಿಸಲಾಗುತ್ತದೆ. ಹೀಗಾಗಿ ಪಕ್ಷಪಾತರಹಿತ ಸಾಂಸ್ಕೃತಿಕ ವಲಯವೆಂಬ 'ಕೀರ್ತಿ'ಗೂ ಭಾಜನವಾಗುತ್ತದೆ. 'ದೇಶಕಾಲ'ವು ಈ ಸಾಂಸ್ಕೃತಿಕ ವಲಯಕ್ಕೆ ಒಪ್ಪುವ ಅಥವಾ ಅತಿ ಹತ್ತಿರವಾಗುವ ಪತ್ರಿಕೆಯೆಂದು ನಾನು ಗ್ರಹಿಸಿದ್ದೇನೆ.

ಇಲ್ಲಿ 'ದೇಶಕಾಲ'ವು ನನಗೊಂದು ಸಂಕೇತ. ವೈಯಕ್ತಿಕ ಅನುಭವ ಪ್ರಾಮಾಣ್ಯವನ್ನು ಪ್ರಧಾನವಾಗಿ ಪರಿಗಣಿಸುವ ಮತ್ತು ಸಾಮಾಜಿಕ ಆಶಯ ಮತ್ತು ಪರಿಭಾಷೆಗಳನ್ನು ಅಪ್ರಧಾನಗೊಳಿಸುವ ಸಾಂಸ್ಕೃತಿಕ ವಲಯದ ಒಂದು ಸಂಕೇತವೇ 'ದೇಶಕಾಲ'. ಮಧ್ಯಮಮಾರ್ಗಿಯಂತೆ ಕಾಣುವ ಈ ವಲಯವು ಸಾಹಿತ್ಯ ಸೃಷ್ಟಿಯನ್ನು ಸಾಮಾಜಿಕ ನೆಲೆಗಿಂತ ಹೆಚ್ಚಾಗಿ ವೈಯಕ್ತಿಕ ನೆಲೆಯಿಂದ ನೋಡುತ್ತದೆ. ಸಾಮಾಜಿಕವೆನ್ನುವುದು ಹೆಚ್ಚೆಂದರೆ ಒಂದು ಹೊರವಲಯ ವಾಗಿರುತ್ತದೆ. ಒಳವಲಯವಾಗಿರುವುದಿಲ್ಲ, ಒಳವಲಯವೇನಿದ್ದರೂ ವೈಯಕ್ತಿಕ ಸಂವೇದನೆಯ ತಾಣವೆಂಬ ತಿಳಿವಳಿಕೆ. ಇಂಥ ತಿಳಿವಳಿಕೆಯ ಮೂಲಕ ಸಾಂಸ್ಕೃತಿಕ ಕ್ರಿಯೆಗೆ ತೊಡಗುವುದೆಂದರೆ ಅದು 'ನವ್ಯ ಸಾಹಿತ್ಯ ಸಂದರ್ಭದ ಪುನರುತ್ಥಾನ ಪ್ರಕ್ರಿಯೆ' ಎಂದು ನಾನು ಭಾವಿಸುತ್ತೇನೆ. ನವ್ಯ ಸಾಹಿತ್ಯವು ಶಿಲ್ಪ, ಭಾಷೆಯ ಮಿತ ಬಳಕೆ, ಸಾಂಕೇತಿಕತೆ-ಇವೇ ಮುಂತಾದ ಕಾರಣಗಳಿಂದ ಗಮನಾರ್ಹ ಕೊಡುಗೆ ನೀಡಿದ್ದರೂ ಸಾಮಾಜಿಕ ಅನುಭವ ಪ್ರಾಮಾಣ್ಯದ ಬದಲು ವೈಯಕ್ತಿಕ ಅನುಭವ ಪ್ರಾಮಾಣ್ಯಕ್ಕೆ ಪ್ರಾಧಾನ್ಯ ನೀಡಿತು. ವೈಯಕ್ತಿಕತೆ ಮತ್ತು ಸಾಮಾಜಿಕತೆಗಳು ಅನಗತ್ಯವಾಗಿ ವಿಭಜನೆಗೊಂಡವು. ಈ ವಿಭಜನೆಯು 'ದೇಶಕಾಲ'ವಲಯದಲ್ಲಿ ಪುನರುತ್ಥಾನಗೊಳ್ಳುತ್ತಿದೆ. ಹೀಗಾಗಿಯೇ ಕೃತಿಶ್ರೇಷ್ಠತೆ, ವ್ಯಕ್ತಿಶ್ರೇಷ್ಠತೆಗಳು ಮುನ್ನೆಲೆಗೆ ಬಂದಿವೆ. ಈ ದೃಷ್ಟಿಯಿಂದ 'ದೇಶಕಾಲ'ದ ವಿಶೇಷ ಸಂಚಿಕೆಯಲ್ಲಿ 21 ಶ್ರೇಷ್ಠ ಕೃತಿಗಳನ್ನೂ, 21ನೇ ಶತಮಾನದ 21 ಉತ್ತಮ (ಶ್ರೇಷ್ಠ?) ಲೇಖಕರನ್ನೂ ಗುರುತಿಸಲಾಗಿದೆ. ಹಾಗಾದರೆ ಈ ಕೃತಿ ಮತ್ತು ಕೃತಿಕಾರರಾಚೆಗೆ ಉತ್ತಮ ಕೃತಿ ಮತ್ತು ಕೃತಿಕಾರರು ಇಲ್ಲವೆ? ಇದೊಂದು ಅವೈಜ್ಞಾನಿಕ ಆಯ್ಕೆಯಾಗುತ್ತದೆಯೆಂಬ ವಿವೇಕ ಸಂಪಾದಕರಿಗಾಗಲಿ, ಆಯ್ಕೆ ಮಾಡಿದ ವಿಮರ್ಶಕರಿಗಾಗಲಿ ಯಾಕೆ ಇಲ್ಲ? ಯಾಕೆಂದರೆ ಹೀಗೆ ಆಯ್ಕೆ ಮಾಡುವುದೇ ಸಾಂಸ್ಕೃತಿಕ ವಿವೇಕವೆಂದು ಈ ವಲಯ ಭಾವಿಸಿದೆ. ಇಂಥ ಆಯ್ಕೆಗಳನ್ನು 'ದೇಶಕಾಲ'ವಷ್ಟೇ ಅಲ್ಲ ಇನ್ನು ಕೆಲವು ಪತ್ರಿಕೆಗಳೂ ಮಾಡಿವೆ. ಸಾಹಿತ್ಯ ಮತ್ತು ಸಿನಿಮಾ ಕ್ಷೇತ್ರಗಳಿಗೆ ಸಂಬಂಧಿಸಿದ ಇಂಥ 'ಶ್ರೇಷ್ಠ ಆಯ್ಕೆ'ಯನ್ನು ಮಾಡಿದ ಪತ್ರಿಕೆಗಳಿಗೆ ಅಪ್ಪಿತಪ್ಪಿಯೂ ಸಾಮಾಜಿಕ ಕಾಳಜಿ ಪ್ರಧಾನವಾದ ಕಲಾತ್ಮಕತೆಯ ನೆನಪು ಬರುವುದಿಲ್ಲ. ಅನುಮಾನ ಹುಟ್ಟುವುದು ಇದೇ ಕಾರಣಕ್ಕೆ.

ಕಲಾತ್ಮಕತೆ ಮತ್ತು ಶ್ರೇಷ್ಠತೆಗಳ ಗುತ್ತಿಗೆ ಪಡೆದ ವಲಯವೇ ಈ ಮಧ್ಯಮಮಾರ್ಗಿ ವಲಯ; ದ್ವಿಪಾತ್ರಾಭಿನಯವನ್ನೂ ಏಕಪಾತ್ರಾಭಿನಯಕ್ಕೆ ತಿರುಗಿಸುವ ಛಾತಿಯುಳ್ಳ ಈ ಸಾಂಸ್ಕೃತಿಕ ವಲಯವು 'ಸಾಂಸ್ಕೃತಿಕ ಸುಪ್ರೀಂಕೋರ್ಟ್' ಆಗುವ ಹವಣಿಕೆಯಿಂದ ಕೂಡಿದೆ. ಇದು ಹವಣಿಕೆಯ ಹಂತವನ್ನು ದಾಟಿ ಅಧಿಕಾರದ ಹಂತಕ್ಕೆ ಬರುತ್ತಿರುವುದೇ ಇಂದಿನ ಅಪಾಯ. ಇದು ಕೇವಲ 'ದೇಶಕಾಲ'ಕ್ಕೆ ಸಂಬಂಧಿಸಿದ್ದಲ್ಲ. ಸಾಂಸ್ಕೃತಿಕ ಕ್ಷೇತ್ರವನ್ನು ಸೂಕ್ಷ್ಮಸಂವೇದನೆಗಳ ನೆಪದಲ್ಲಿ ಆಳಲು ಹೊರಟ ದೊಡ್ಡ ವಲಯವೇ ರೂಪುಗೊಳ್ಳುತ್ತಿರುವ ಅಪಾಯವನ್ನು ನಾವು ಅರಿಯಬೇಕಾಗಿದೆ. ಹಾಗೆಂದು ಸೂಕ್ಷ್ಮಸಂವೇದನೆಗಳನ್ನು ವಿರೋಧಿಸಬೇಕಾಗಿಲ್ಲ. ವೈಯಕ್ತಿಕ ಅನುಭವ ಪ್ರಾಮಾಣ್ಯವನ್ನು ಪ್ರಧಾನವಾಗಿಸುತ್ತ, ಸಾಮಾಜಿಕ ಸೂಕ್ಷ್ಮಗಳನ್ನು ನಿರ್ಲಕ್ಷಿಸುತ್ತ 'ಮುಕ್ತವಾಗಿ' ವ್ಯಾಪಿಸುತ್ತಿರುವ 'ಸಾಂಸ್ಕೃತಿಕ ಕೇಂದ್ರೀಕರಣ'ವನ್ನು ನಾವು ಪ್ರಶ್ನಿಸಬೇಕಾಗಿದೆ. ನೇರವಾಗಿ ಜಾತಿ-ಕೋಮುಗಳನ್ನು ಮುಂದು ಮಾಡಿಕೊಂಡ ಸಾಂಸ್ಕೃತಿಕ ವಲಯಕ್ಕಿಂತ ಈ 'ಸೂಕ್ಷ್ಮ' ಸಾಂಸ್ಕೃತಿಕ ವಲಯವು ಪ್ರಗತಿಪರ ಆಶಯಗಳಿಗೆ ಹೆಚ್ಚು ಧಕ್ಕೆ ತರಬಹುದಾದ ಅಪಾಯಗಳನ್ನು ಅವಲೋಕಿಸಬೇಕಾಗಿದೆ. ಯಾವುದೇ ಸಾಂಸ್ಕೃತಿಕ ಚಳವಳಿಗಳಿಲ್ಲ ಎಂದು ಹೇಳುತ್ತಲೇ ಅಗೋಚರ ಸಂಘಟನೆಯಲ್ಲಿ ತೊಡಗಿರುವ ವಲಯ ಇದಾಗಿದ್ದು ಪ್ರಗತಿಪರರು ತಾತ್ವಿಕವಾಗಿ ಮುಖಾಮುಖಿಯಾಗಬೇಕಾಗಿದೆ. ಪ್ರಗತಿಪರ ಚಿಂತನೆಗೆ ಬದ್ಧವಾದವರ ಜೊತೆ ಈ ಮಧ್ಯಮಮಾರ್ಗಿ ವಲಯದ ಸಂವಾದ ಸಾಧ್ಯವಾದೀತೆ ಎಂಬ ಅನುಮಾನ ನನ್ನದು. ಯಾಕೆಂದರೆ ಈ ಮಧ್ಯಮಮಾರ್ಗಿ ಸಾಂಸ್ಕೃತಿಕ ವಲಯವು ಸಾಹಿತ್ಯಾದಿ ಕಲೆಗಳಿಗೆ ಸಾಮಾಜಿಕ ಬದ್ಧತೆ ಇರಬೇಕೆಂಬುದನ್ನು ಒಪ್ಪುವುದಿಲ್ಲ.

ದೇಶಕಾಲ ಚರ್ಚೆ


3. ಇನ್ನೊಂದು ಸಾಂಸ್ಕೃತಿಕ ವಲಯ ಎಲ್ಲ ಪ್ರಗತಿಪರರನ್ನು ಒಳಗೊಂಡದ್ದೆಂದು ಹೇಳಬಹುದು. ಸಾಮಾಜಿಕ ಪ್ರಜ್ಞೆ, ಕಾಳಜಿ ಮತ್ತು ಬದ್ಧತೆಯ ಪ್ರತಿಪಾದಕರಾದ ಪ್ರಗತಿಪರರು ಒಂದೇ ಚಿಂತನಧಾರೆಯನ್ನು ಹೊಂದಿದವರಲ್ಲ. ಗಾಂಧಿ, ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್, ಮಾವೋ, ಲೆನಿನ್-ಹೀಗೆ ವಿವಿಧ ಚಿಂತನಧಾರೆಗಳನ್ನು ಪ್ರಧಾನವಾಗಿ ನಂಬಿದವರು ಈ ವಲಯದಲ್ಲಿದ್ದಾರೆ. ಯಾವುದೇ ಒಂದು 'ವಾದ'ವನ್ನು ತಮ್ಮದೆಂದು ಹೇಳಿಕೊಳ್ಳದ ವಿಶಾಲವ್ಯಾಪ್ತಿಯ ಪ್ರಗತಿಪರರೂ ಇದ್ದಾರೆ. ಇಷ್ಟೂ ಜನರನ್ನು ವಿಶಾಲ ತಳಹದಿಯ ಮೇಲೆ ಒಂದೇ ಸಾಂಸ್ಕೃತಿಕ ವೇದಿಕೆಗೆ ತಂದದ್ದು ಬಂಡಾಯ ಸಾಹಿತ್ಯ ಸಂಘಟನೆ. ಈ ಸಂಘಟನೆಯ ಆರಂಭಕ್ಕೂ ಮುಂಚಿನಿಂದ ದಲಿತ ಸಂಘರ್ಷ ಸಮಿತಿ, ಸಮುದಾಯ ಸಂಘಟನೆಗಳು ಉಂಟು ಮಾಡಿದ ಜಾಗೃತಿ ಚಾರಿತ್ರಿಕವಾದದ್ದು. ಸಾಮಾಜಿಕ ಕಾಳಜಿ ಮತ್ತು ಬದ್ಧತೆ ಬೇಕೆಂಬ ಪ್ರತಿಪಾದನೆಗೆ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಒತ್ತಾಸೆಯಾದ ದಲಿತ ಚಳವಳಿ, ಸಮುದಾಯ ಸಂಘಟನೆಗಳನ್ನು ನೆನೆಯುತ್ತಲೇ ದಲಿತ ಸಾಹಿತ್ಯ ಮತ್ತು ಬಂಡಾಯ ಸಾಹಿತ್ಯ ಚಳವಳಿಗಳ ವಿಕಾಸವನ್ನು ಗುರುತಿಸುವುದು ಒಂದು ಚಾರಿತ್ರಿಕ ತಿಳಿವಳಿಕೆಯಾಗಿದೆ. ಈ ಸಾಹಿತ್ಯ ಚಳವಳಿಗಳ ಶಕ್ತಿ ಕ್ಷೀಣಿಸಿದ್ದರೂ ಫಲಿತಗಳು ಎದ್ದು ಕಾಣುತ್ತಿವೆ. ಮುಂಚೆ ಸಾದರಪಡಿಸಿದ ಎರಡು ಸಾಂಸ್ಕೃತಿಕ ವಲಯಗಳಾಚೆ ಇರುವವರೆಲ್ಲ ಪ್ರಗತಿಪರ ಆಶಯಗಳನ್ನು ಅಂತರ್ಗತ ಮಾಡಿಕೊಂಡ ಪ್ರಕ್ರಿಯೆಯಲ್ಲಿ ದಲಿತ, ಬಂಡಾಯ ಸಾಹಿತ್ಯ ಚಳವಳಿಗಳ ಪಾತ್ರ ಇದ್ದೇ ಇದೆ.

ಆದರೆ ಈ ಪ್ರಗತಿಪರ ವಲಯ ಒಂದು ಒಕ್ಕೂಟವಾಗಿ ಉಳಿದಿದೆಯೇ ಅಥವಾ ಬಿಡಿಬಿಡಿಯಾಗಿ ಬೆಳೆಯುತ್ತಿದೆಯೇ? ನನಗನ್ನಿಸುತ್ತದೆ: ಚಿಂತನಾ ವಿಧಾನದಲ್ಲಿ ಒಕ್ಕೂಟವಾಗಿದೆ; ಸಂಘಟನೆಯಲ್ಲಿ ಬಿಡಿಬಿಡಿಯಾಗಿದೆ. ಶಿಥಿಲಗೊಂಡ ಸಾಂಸ್ಕೃತಿಕ ವಲಯವಾಗಿದೆ. ಹಾಗೆ ನೋಡಿದರೆ ಎಪ್ಪತ್ತರ ದಶಕದಲ್ಲಿ 'ಸಂಘಟನೆ' ಮೇಲುಗೈ ಪಡೆದರೆ, ತೊಂಬತ್ತರ ದಶಕದಲ್ಲಿ 'ವಿಘಟನೆ' ಮೇಲುಗೈ ಪಡೆದದ್ದು ಒಂದು ಸಾಮಾಜಿಕ ಘಟನೆಯೇ ಆಗಿದೆ. ಜಾತಿ, ಧರ್ಮ, ರಾಜಕೀಯ- ಹೀಗೆ ಬಹಳಷ್ಟು ಕ್ಷೇತ್ರಗಳು ವಿಘಟನೆಯ ಹಾದಿ ಹಿಡಿಯುತ್ತ ವ್ಯಕ್ತಿ ಪ್ರತಿಷ್ಠೆ ಅಥವಾ ವಿಶಿಷ್ಟತೆಯನ್ನು ಮುನ್ನೆಲೆಗೆ ತರುವ ಪ್ರಯತ್ನಗಳು ಪ್ರಧಾನವಾಗಿ ಕಾಣಿಸಿಕೊಂಡಿತು. ಮುಕ್ತ ಆರ್ಥಿಕ ಪದ್ಧತಿಯ ಜಾಗತೀಕರಣವು ಬಂಡವಾಳಶಾಹಿಗಳಿಗೆ ಮುಕ್ತಸ್ವಾ ಜಾಗತಿಕವೂ ಆದಂತೆ ಸಾಮಾಜಿಕ ವಲಯದಲ್ಲಿ ಸ್ವಾರ್ಥ ಮತ್ತು ಲಾಭಗಳನ್ನು ಮೌಲ್ಯವಾಗಿಸತೊಡಗಿತು. ಇದರ ಫಲವಾಗಿ ನಮ್ಮ ಸಾಮಾಜಿಕ ಚಹರೆಯೂ ಬದಲಾಗತೊಡಗಿತು. ಪ್ರಗತಿಪರರಲ್ಲೂ ಸಣ್ಣಮಟ್ಟ ಚಿಂತನಾ ಭಿದ್ರತೆಗಳು ಹೆಚ್ಚಾದವು. ಕಲಾತ್ಮಕತೆಯ ಹೆಸರಿನಲ್ಲಿ ವಸ್ತು ಪ್ರಧಾನ ಪ್ರಯೋಗಗಳನ್ನು ಅಗತ್ಯಕ್ಕಿಂತ ಹೆಚ್ಚಾಗಿ ಟೀಕಿಸುವ ಕೃತಿಯ ವಿನ್ಯಾಸದಲ್ಲಿ ಉತ್ತಮಿಕೆಯನ್ನು ಹುಡುಕುವ ವಿಮರ್ಶಾ ವೈಖರಿ ಪ್ರಗತಿಪರರಾದ ಕೆಲವರಲ್ಲಿ ಕಾಣಿಸಿಕೊಂಡಿತು. ಶ್ರೇಷ್ಠತೆ-ಕಲಾತ್ಮಕತೆಗಳ ಬಗ್ಗೆ ಹೊಸ ವ್ಯಾಖ್ಯಾನಕ್ಕೆ ಕಾರಣವಾಗುವ ಬದಲು ಮಧ್ಯಮಮಾರ್ಗಿ ಸಾಂಸ್ಕೃತಿಕ ವಲಯದ ವಿಚಾರಗಳನ್ನೂ ಬಿಡದೆ ಪ್ರಗತಿಪರ ಹೊಸ ಹುಟ್ಟುಗಳನ್ನು ತುಂಬು ಮನಸ್ಸಿನಿಂದ ಒಪ್ಪದೆ, ಹೊಸ ಬರಹಗಾರರಲ್ಲಿ ಕೆಲವರಿಗಾದರೂ ಗೊಂದಲವುಂಟುಮಾಡಲಾಯಿತು ಮತ್ತು ಮಾಡಲಾಗುತ್ತಿದೆ. ಈ ಎಲ್ಲ ಅಂಶಗಳು 'ದೇಶಕಾಲ'ದಂಥ ಸಾಂಸ್ಕೃತಿಕ ವಲಯಕ್ಕೆ ಹಾಸಲು ಹೊದೆಯಲು ಕೊಟ್ಟ ವರಗಳಾದವು. ಪ್ರಗತಿಪರ ಸಾಂಸ್ಕೃತಿಕ ವಲಯದ ಶಿಥಿಲತೆ, ಈ 'ದೇಶ-ವಿದೇಶಕಾಲ'ಗಳು ವ್ಯಾಪಕವಾಗಲೂ ಸ್ವಲ್ಪಮಟ್ಟಿಗಾದರೂ ಕಾರಣವಾಗಿದೆ. ವಿವಿಧ ಚಿಂತನಧಾರೆಗಳೂ ಮತ್ತು ವ್ಯಕ್ತಿಗತ ಆಸಕ್ತಿಯಿಂದ ಹುಟ್ಟುವ ವಿರೋಧಗಳೂ ಇಲ್ಲಿ ಕೆಲಸ ಮಾಡುತ್ತಿವೆ. ಇಷ್ಟಾದರೂ ಸಂಘಟನಾತ್ಮಕವಾಗಿ 'ಶಿಥಿಲವಲಯ'ವಾಗಿರುವ ಪ್ರಗತಿಪರರು ವೈರಿವಿರೋಧಿ ಚಿಂತನೆಯಲ್ಲಿ ಶಿಥಿಲವಾಗಿಲ್ಲದಿರುವುದು ಸಮಾಧಾನದ ಸಂಗತಿ. ಈ ಕಾರಣದಿಂದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದಿಷ್ಟು ಸಾಮಾಜಿಕ ಜವಾಬ್ದಾರಿ ಮತ್ತು ಕಾಳಜಿ ಉಳಿದುಕೊಂಡಿದೆ. ಇಷ್ಟಾದರೂ ಪ್ರಗತಿಪರ ವಲಯವು ತನ್ನೊಳಗಿನ ವಿರೋಧಗಳು ಮತ್ತು ವೈರುಧ್ಯಗಳನ್ನು ಮೀರಿ ಪ್ರಬಲ ಒಕ್ಕೂಟವಾಗಬೇಕಾಗಿದೆ. ಈ ಮೂಲಕ ದೇಶಕಾಲ-ಪುರುಷರಿಗೆ ಉತ್ತರ ಕೊಡುವುದು ಸರಿಯಾದ ಮಾರ್ಗವಾಗುತ್ತದೆ.

ಪ್ರಗತಿಪರ ವಲಯವು ಮೊದಲು ಸಾದರಪಡಿಸಿದ ಪ್ರತಿಗಾಮಿ ಹಾಗೂ ಮಧ್ಯಮಮಾರ್ಗಿ ಸಾಂಸ್ಕೃತಿಕ ವಲಯಗಳಂತೆ 'ಏಕ'ವಲ್ಲ; 'ಅನೇಕ'. ಅನೇಕ ಸಾಮಾಜಿಕ-ಸಾಂಸ್ಕೃತಿಕ ವೈವಿಧ್ಯಗಳಿಂದ ಕೂಡಿದ ಪ್ರತಿಭಾವಂತರು ಪ್ರಗತಿಪರ ವಲಯದಲ್ಲಿರುವುದು ನಾಡಿನ ದೊಡ್ಡ ಶಕ್ತಿ ಎಂದೇ ನನ್ನ ಭಾವನೆ. 'ಏಕ'ದ ಬದಲು 'ಅನೇಕ' ಇದ್ದಾಗ ವೈರುಧ್ಯಗಳೂ ಇರುತ್ತವೆ. ಆದರೆ ಅವನ್ನು ಮೀರುವುದು ಅಸಾಧ್ಯವಲ್ಲ; ಸಹಜ ವೈರುಧ್ಯಗಳಾದರೆ ಮೀರಬೇಕಾಗಿಯೂ ಇಲ್ಲ. ಇದು ಸಮಸ್ಯೆಯೂ ಅಲ್ಲ. ನಿಜವಾದ ಸಮಸ್ಯೆಯಿರುವುದು ನಿಜವಾದ ಸಾಂಸ್ಕೃತಿಕ ವಿರೋಧಿಯನ್ನು ಗುರುತಿಸುವಲ್ಲಿ. ಜಾತಿ ಮತ್ತು ಕೋಮುವಾದದ ಪರವಾಗಿ ಸ್ಪಷ್ಟವಾಗಿ ಗೋಚರಿಸುವ ವಲಯವನ್ನು ವಿರೋಧಿಯೆಂದು ಗುರುತಿಸಿಕೊಳ್ಳುವುದು ಸುಲಭ. ಹಾಗೆ ನೋಡಿದರೆ, ಅವರು ಅಪಾಯಕಾರಿ ಪ್ರಾಮಾಣಿಕರು. ಮುಚ್ಚುಮರೆಯಿಲ್ಲದ್ದರಿಂದ ತಮ್ಮ ವಿಚಾರದ ವಿಷಯದಲ್ಲಿ ಪ್ರಾಮಾಣಿಕರು; ಆದರೆ ಮಧ್ಯಮಮಾರ್ಗಿ ಸಾಂಸ್ಕೃತಿಕ ವಲಯಕ್ಕೆ ಈ ಮಾತನ್ನು ಹೇಳುವಂತಿಲ್ಲ. ಸಾರಾಸಗಟಾಗಿ ಅಪಾಯಕಾರಿ ಎನ್ನಲಾಗದ, ಸಾಮಾಜಿಕ ಸಂಗತಿಗಳಲ್ಲಿ ಪ್ರಗತಿಪರ ಪ್ರಾಮಾಣಿಕರು ಎಂದು ಒಪ್ಪಲಾಗದ ಸಂದಿಗ್ಧವೊಂದು ಕೊಡುವುದುಂಟು. ನಾವು ಖಚಿತಪಡಿಸಿಕೊಳ್ಳಬೇಕಾದ್ದು ಏನೆಂದರೆ-ಸಾಮಾಜಿಕ ಕಾಳಜಿಯನ್ನು ಕುಳಬಳ್ಳಿಯಾಗಿಸಿಕೊಂಡ ಬದ್ಧ ಬರವಣಿಗೆಯ ಬದ್ಧ ವಿರೋಧವೇ ಈ ಮಧ್ಯಮಮಾರ್ಗಿ ಸಾಂಸ್ಕೃತಿಕ ವಲಯದ ಸಿದ್ಧಾಂತ. ಆದ್ದರಿಂದ ಪ್ರಗತಿಪರರು ವಿರೋಧಿಸಬೇಕಾದ್ದು ಕೇವಲ ಒಂದು ಪತ್ರಿಕೆಯನ್ನಲ್ಲ; ಒಂದು ಸಾಮಾಜಿಕ ಸಮುದಾಯವನ್ನಲ್ಲ; ಮಧ್ಯಮಮಾರ್ಗಿಗಳ ಸಾಂಸ್ಕೃತಿಕ ರಾಜಕೀಯವನ್ನು; ಈ ರಾಜಕೀಯದ ತಳನೆಲೆಯಾದ ಸಿದ್ಧಾಂತವನ್ನು. ನಾನು ಮೊದಲೇ ಹೇಳಿದಂತೆ 'ದೇಶಕಾಲ' ಪತ್ರಿಕೆಯು ಒಂದು ಸಂಕೇತ. ಅದರ ವಿರೋಧವೂ ಸಾಂಕೇತಿಕ. ಸಾಂಕೇತಿಕತೆಯನ್ನು ಮೀರಿದ ಸೈದ್ಧಾಂತಿಕ ಸಂಘರ್ಷಕ್ಕಾಗಿ ನಮ್ಮ ಕಾಲವನ್ನು ಹದಗೊಳಿಸೋಣ. ಆಗ 'ದೇಶಕಾಲ' ಶಕ್ತಿಗಳು ಶಿಥಿಲವಾಗಬಹುದು, ಸ್ವಲ್ಪ ಬದಲಾಗಲೂಬಹುದು(?).

ಕನಸುಗಳ ಸುತ್ತ ಪಹರೆ ಕಾಯುವ ಮಂದಿಯೇ

• ಕೈದಾಳ್ ಕೃಷ್ಣಮೂರ್ತಿ



1
ಹಸಿದು ಹಂಗಾತ ಬಿದ್ದಾಗ
ಮಾರ್ಕ್ಸ್‌ಸನ ರೊಟ್ಟಿಯ ತುಣುಕುಗಳನ್ನು
ಆಯ್ದು ತಿಂದವ ನಾನು.
ನೀವು ಕರುಳ ಬಗೆದು
ಹೊಸ ಕರುಳ ಜೋಡಿಸಿದರೂ
ಹೊರಡುವ ಧ್ವನಿ
ಇಂಕ್ವಿಲಾಬ್-ಜಿಂದಾಬಾದ್

2
ಮೌನವಾಗಿದ್ದೇನೆಂದಾಕ್ಷಣ
ನಿದ್ರಿಸುತ್ತಿದ್ದೇನೆಂದು ತಿಳಿದದ್ದು ನಿಮ್ಮದೇ
ತಪ್ಪು
ನೆತ್ತಿ ಮೇಲೆ ಹಾರುವ ಗಿಡುಗ
ಪ್ರಾಣ ಬಿಟ್ಟ ಸದ್ದು ಕೇಳುತ್ತಿದೆ.

3
ನಿರಾಯುಧ ಮನುಷ್ಯರ ಮೇಲೆ
ಆಯುಧಗಳ ಮಳೆಗರೆವ ನಿಮಗೆ
ಮನುಷ್ಯರೂ ಆಯುಧವೆಂಬ
ಪಾಠ ಕಲಿಸುತ್ತೇನೆ.

4
ಅರುಣೋದಯದ ಗಂಟೆ ಬಾರಿಸುವ
ಹಕ್ಕಿಗೂ ಗೊತ್ತಿದೆ,
ಎಸೆದ ಕಾಳಿನಲ್ಲಿ ವಿಷವಿದೆ
ಗಲ್ಲಿಗೇರುವ ಮುನ್ನ
ಒಂದು ಗುಟುರು ಹಾಕುತ್ತದೆ.

5
ಕನಸುಗಳ ಸುತ್ತ ಪಹರೆ ಕಾಯುವ
ಮಂದಿಯೇ
ಸಾಯುವ ಭಯಕ್ಕಿಂತ
ನೀವು ಕನಸುಗಳ ಮಾರಿಕೊಂಡಿದ್ದಕ್ಕೆ
ಖೇದವಿದೆ.

ಭೈರಪ್ಪನ ಸೆಕ್ಸ್ ಪ್ರಾಬ್ಲಂ ಏನು ಅಂತ ಗೊತ್ತಾಯ್ತು!

...ಬಿಸಿಲಿಗೆ ಕಾಳಮಾವನ ಮನಸ್ಸು ಹುರುಪಾಗಿತ್ತು. ...ಮಳೆಗೆ ಹೆಸರು, ಎಳ್ಳು, ಜೋಳ ಮಂದಿಯುದ್ದ ...ಊರಲ್ಲಿದ್ದವರನ್ನು ಹೊಲದ ಕಡೆ ಕರೆಯುತ್ತಿದ್ದವು. ...ದ ತೆಳ್ಗೆ ತಿರುಗಾಡಿಕೊಂಡು ಬಂದ ಕಾಳಮಾವ, ...ಲ್ಲಿಗೆ ಬತ್ಲ ಇವುರ ಜಗಳ?" ಎಂದ.

...ನ್ನು ಮುಗದಿಲ್ಲ. ಹರಿಯ ಮುರಿಯ ಆದ್ತಲೇ

ಹಟ್ಟಿಪುರಾಣ

...ಯ ಲು ಸೀ ಮೆ

ಬಿ. ಚಂದ್ರೇಗೌಡ

...ದಾನ ಸಭೆಲಿ ಮನಿಗಿದ್ದೊರೇನಾದ್ರೂ?"

...ವುರೆದ್ದು ಬಳ್ಳಾರಿ ಕಡಿಕೆ ವಂಟವುರೆ."

...ಲ್ಲೇನು ಮಾಡಕ್ಕೇ?"

...ಸಿಸಿ, ಜಗಳ ಸುರುವಾದದ್ದೇ ಅಕ್ರಮ ಗಣಿಗಾರಿಕೆ ... ಅಂತ ಅಲವೆ. ಅದ್ಕೆ ಎಲ್ಲಿ ಅಕ್ರಮ ನ್ಯಡಿತಾ ... ಅಲ್ಲಿಗೇ ಹೋಗಿ ಪ್ರತಿಭಟನೆ ಮಾಡನ ಅಂತ ...ರೆ."

...ಅಂಗರಿದಿಲ್ಲೆ ನಿಲ್ಲದಿಲ್ಲ ಅನ್ನು."

...ಮುಂಗೆ ನಿಂತತೂ ಮಾವ. ಇದೀ ವಿರೋಧ ...ರ್ಯಲ್ಲ ರೆಡ್ಡಿಗಳು ಕಳ್ರು ಅಂದ್ರೇ, ಆ ಎಡೂರಪ್ಪ ... ನೂರಾ ಒಂದು ಪರಸೆಂಟು ಸರಿಯಾಗ್ಯವುರೆ ...ಬುಟ್ಟವುನೆ."

...ಬಟ್ಟಗೇನು ತಿಂದನಂತೆ ಅವುನು?"

...ನೆ ಹೋಗಿ ಕೇಳಪ್ಪ ಅವುನ್ನ."

...ಅಲ್ಲಾ ಕಂಡ್ಲಾ ಹಿಂಗೂ ಮಾತಾಡ್ಯರೆ" ಎಂದು ...ಮಾವ ಅಚ್ಚರಿಗೊಂಡ.

...ಅಂಗೆ ನೋಡಿದ್ರೆ, ಅವುನೇಳಿರದು ಸುಳ್ಳೆಯ ...ಮಾವ. ಯಂಗೆ ಅಂದ್ರೆ ಪರಸೆಂಟು ನೂರು ಅಂತ ...ರೇ ವರತು, ನೂರೊಂದಿರದಿಲ್ಲ. ಈ ಎಡೂರಪ್ಪ ...ದೊ ಪ್ರಕಾರ ನೂರೊಂದು ಪರಸೆಂಟು ...ವಾಗಿದ್ದರಂತ ರೆಡ್ಡಿಗಳು. ಅದ್ಯಂಗೆ ಸಾಧ್ಯ?"

...ಅದೇನಾರ ಆಗ್ಲಿ, ಅವುರ್ನೆ ಬೋದು ಈಗವುರೆ ...ವಾಗ್ಯವುರೆ ಅಂದ್ರೆ ಜನ ಏನನ್ನಕಂಡರೂ ಅನ್ನೊ ...ಬ್ಯಾಡವ್ವೆ?"

...ಎಡೂರಪ್ಪ ಜನಕೆ ಯಾವತ್ತು ಹೆದ್ರಿಕಂಡು ...ಇಡಿದ್ದನೂ ಮಾವ? ಆರಾಮಾಗಿ ಸುಳೇಳ್ತತನೆ, ...ಯಾಗಿ ಕ್ಷಮೆ ಕೇಳ್ತನೆ, ಅಂದ ಮಾತ್ನೆ ಅಂದಿಲ್ಲ ...ಪಿ. ಈಗ್ಲು ಪಾಪ ರೆಡ್ಡಿಗಳ ಸಮರ್ಥನೆ ಮಾಡಬೇಕಾದ್ರೆ ಆತುಮಪೂರಕವಾಗಿ ಮಾಡಿಲ್ಲ. ರೆಡ್ಡಿಗಳವ್ವ ನೀನ್ಯಾಕಯ್ಯ ನನ್ನ ಮಕ್ಕಳ ಪರ ಮಾತಾಡಲ್ಲ ಅಂತ ಬೋದ್ಲಂತೆ. ಅದ್ಕೆ ಅಂಗಂದವ್ರನೆ."

"ರೆಡ್ಡಿಗಳವ್ವಾರ್ಲ?" ಎಂದಳು ಜುಮ್ಮಿ.

"ಸುಸಮವ್ವ ಕಣೇ. ಬಸ್ಯಾಂಡಸಿನಂಗೆ ತಿರುಗಾಡ್ತಳಲ್ಲ ಆ ಪುಣ್ಯಾತಗಿತ್ತಿ, ಈ ಗಾಲಿ ರೆಡ್ಡಿಗಳ ಅಮ್ಮನಂತೇ."

"ಅದ್ಯಾವಾಗಮ್ಮಾಗಿದ್ದವುಳೂ?"

"ಈ ರೆಡ್ಡಿಗಳು ಗಣಿ ದುಡ್ಡ ಕೊಟ್ಟೇಟಿಗೆ ಅಮ್ಮಾದಲಂತೆ. ಅಷ್ಟೇ ಅಲ್ಲ ಆಗಾಗ್ಗೆ ತಗಂಡೋಗಿ ಮಾರಮ್ಮನಿಗೆ ಕೋಳಿ ಕೊಟ್ಟಂಗೆ ಕಾಣಿಕೆ ಕೊಡ್ತರಂತೆ. ಅವುಳು ತಬ್ಬಿಕಂಡು ತಲೆ ಸವರಿ, ಬಲತಾಯಿ ಬಲಮಕ್ಕಳ ಸುಳ್ಳು ಸುಳ್ಳೇ ಹರಸಂಗೆ ಹರಸೀ ಕಳುಸ್ತಳಂತೆ."

"ಸರಿ ಹರಸ್ಲೀ, ಇವುಕೆ ವಳ್ಳೆ ಬುದ್ಧಿ ಹೇಳಕ್ಕೇನೂ."

"ಅವ್ವನ ಭಾಗಕ್ಯವುರು ಆಪರಂಜಿ ಗಳಂಗೆ ಕಾಣುವಾಗ ಬುದ್ಧಿಯಂಗೇಳಕ್ಯಾಯ್ತದೆ ಮಾವ? ನಾವು ನ್ಯಾಯವಾಗಿ ಗಣಿ ಅಗದು ಮಾರ್ತಾಯಿದ್ದಿವಿ, ಸರಕಾರಕ್ಕೂ ಸುಂಕ ಕಟ್ಟತಾಯಿದ್ದಿವಿ, ನಮದೆಲ್ಲಿ ತಪ್ಪದೆ ತೋರಿ ಅಂದವುರೆ. ಅದ್ಕೆ ಎಡೂರಪ್ಪ ರೆಡ್ಡಿಗಳು ನೂರೊಂದು ಪರಸೆಂಟು ಸರಿಯವುರೆ ಅಂದವುನೆ. ಮುಗಿತಲ್ಲ ಅಲ್ಲಿಗೆ."

"ಅಂಗಾರೆ ಬಳ್ಳಾರಿಗಂಟ ನ್ಯಡ ಕಂಡೋಗರ ಕತೆಯೇಳೂ" ಎಂದ ಸೀರ.

"ಅವುರ ಕತೆ ಸ್ಯನಿಸಿಗಂಡ್ರೆ ಹೆದ್ರಿಕಾಯ್ತದೆ. ಏನಾದತೋ ಏನೊ."

"ಅದ್ಯಾಕ್ಲ ಅಂಗಂತೀ?" ಎಂದಳು ಜುಮ್ಮಿ.

"ರಾಮುಲು ಅಂತ ಕಾಯಿಲೆ ಮಂತ್ರಿ ಅವುನಲ್ಲೇ, ಅವುನು ಜ್ಯೈಲಿಗೋಗಿ ಕೊಲೆ, ಸುಲಿಗೆ, ದರೋಡೆ ಮಾಡಿರೋ ಕೈದಿಗಳನ್ನಲ್ಲ ಮಾತಾಡಿಸಿಗಂಡು ಬಂದದ್ದನಂತೇ. ಅದ್ಕೆ ಕಾಂಗ್ರೆಸಿನವುರು ಹೆದ್ರಿಕಂಡಿದ್ದರಂತೆ."

"ಅವುನು ಕೈದಿ ಮಾತಾಡ್ಸಿದ್ರೂ, ಇವುರು ಹೆದ್ರಿಕಳದ್ಯ ಏನ್ನ ಸಮಂಧ?"

"ಸಮಂದ ಅದೆ ಕಣ ಮಾವ. ಬಳ್ಳಾರಿ ಕಡೆ ರಾಮುಲು ಸೇನೆ ಅಂತ್ಲೆ ಒಂದು ಗ್ಯಾಂಗದೆ. ಅದು ಈಗಾಗ್ಲೆ ಜ್ಯೈಲಲ್ಲೂ ಅದೆ. ಅವುರ ಬೇಟಿ ಮಾಡಿ ಈ ರಾಮುಲು ಅನ್ನೊನು, ಕಾಂಗ್ರೆಸ್ಸಿನೋರ ವಿಚಾರಿಸಗಳ್ಳಿ ಅಂದು ಬಂದವುನಂತೆ. ಅದ್ಕೆ ಕಾಂಗ್ರೆಸ್ಸಿನೋರು ಹೆದ್ರಿಕಂಡವುರೆ."

"ಜ್ಯೈಲಿಂದ ಅವುರ ಅದ್ಯಂಗೆ ಹ್ವರಗೆ ಬುಟ್ಟರ್ಲ?"

"ಅಯ್ಯೋ, ನೀನೆಲ್ಲಿದ್ದಿ ಮಾವ. ಜ್ಯೈಲಧಿಕಾರಿಗಳಿಗೆ ಕೊಡಬಾರದ್ದೆ ಕೊಟ್ರೆ ಹೋಗಪ್ಪ ಏನ್ನಾರ ಮಾಡಿಕಂಬಾ, ಆದ್ರೆ ಕರಟ್ಟಾಗಿ ಜ್ಯೈಲಿಗೆ ಬಂದುಬುಡು ಅಂತ ಬುಟ್ಟು ಕಳಿಸ್ತರಂತೆ. ಆ ಕೈದಿಗಳು ಏನ್ನಾರ ಮಾಡಿ ತಿರಗ ಹೋಗಿ ಜ್ಯೈಲಿ ಸೇರಿಕತ್ತರೆ. ಬಳ್ಳಾರಿಲಿರೋ ರಾಮುಲು ಕಡೆ ಕೈದಿಗಳೂ ರಾತ್ರಿವೊತ್ತು ಹೆಡತಿ ಜೊತೆ ಲಾಡ್ಜಲಿದ್ದು ಬೆಳಿಗ್ಗೆ ಬಂದು ಜ್ಯೈಲು ಸೇರಿಕತ್ತರಂತೆ. ಅಂಗೆ ನೋಡಿದ್ರೆ ರೆಡ್ಡಿ ರಾಮುಲು ಕಡೆ ಕೈದಿಗಳು ನ್ಯಪಕ್ಕೆ ಜ್ಯೈಲಲಿದ್ದರಂತೆ" ಎಂದು ಉಗ್ರಿ ಕೈದಿಗಳ ಪುರಾಣ ಹೇಳುವಾಗ ಕಾಳಮಾವ ನಿಜಕ್ಕೂ ಬೆಚ್ಚಿ ಕೂತಿದ್ದ. ಆಗ ಕಾಣಿಸಿಕೊಂಡ ವಾಟಿಸ್ಸೆ,

"ಯಾಕಪ್ಪ ಯಲ್ಲ ಸೈಲೆಂಟಾಗಿ ಕುಂತಿದ್ದಿರಿ. ಏನಾಯ್ತು ವಾಟ್ಸಾಪನ್?" ಎಂದ.

"ಜ್ಯೈಲಲ್ಲಿರೊ ಕಳ್ರು ಈಚಿಗೆ ಬಂದು ಏನ್ನಾರ ಮಾಡಿ ತಿರುಗ ಜ್ಯೈಲಿಗೋದರಂತೆ ಕಂಡ್ಯ."

"ಅದು ಹಳೆ ಮ್ಯಾಟ್ರು ಕಣಕ್ಕ. ನಮ್ಮ ಶಿವರಾಮೇ ಗೌಡ್ರು ಬ್ರಿಗೇಡ್ ರೋಡಲ್ಲಿ ತಿರುಗಾಡಿ ಕಂಡು, ಕಬಾಬ್ ತಿನ್ನ ಕಂಡು, ಜ್ಯೈಲಿಗೆ ಬರ್ತಿದ್ರು ಗೊತ್ತೆ?"

"ಅವುನೆಲ್ಲಿ ಜ್ಯೈಲಲ್ಲಿದ್ದ?"

"ಜ್ಯೈಲಿಂದ ಇಮ್ಮಿಡಿಯೆಟ್ಟಾಗಿ ಆಸುಪತ್ರೆಗೆ ಅಡಮಿಟ್ಟಾದ ಅಂದ್ರೆ ಅದು ಒಂಥರ ಜ್ಯೈಲೆ ತಾನೆ. ಯಾಕೆ ಹಳೆ ಮ್ಯಾಟ್ರು ತಗಂಡು ಕುಂತಿದ್ದಿರಿ."



"ಅದ್ಯಾಕ್ಲ ಕೈಲಿ ಪುಸ್ತಕ ಹಿಡಕಂಡು ತಿರುಗ್ತಿ ಮಹಾ ಓದೋನಂಗೆ."

"ಇದು ನಮ್ಮ ಎಸ್ಸೆಲ್ ಭೈರಪ್ಪ ಬರದಿರೋ ನಾವೆಲ್ಲು ಕಣಕ್ಕ, ಕವಲು ಅಂತ. ಯಾರೋ ಫ್ರೆಂಡ್ ಓದಿ ನೀನು ಓದು ಅಂತ ಕೊಟ್ರು. ಅಂಗೇ ಗ್ಲಾನ್ಸ್ ಮಾಡಿದೆ. ನಮ್ಮ ಸಂತೆ ಶಿವರದ ಭೈರಣ್ಣ ಆಗ ಸಾಬರ ಮ್ಯಾಲೆ ಬದ್ದಿದ್ರು, ಈಗ ಹೆಂಗಸರ ಮ್ಯಾಲೆ ಬದ್ದವುರೆ. ಅದೇ ಇದರ ಸಬ್‌ಜೆಕ್ಟು."

"ಅದೇನೇಳ್ತಿಯೋ ಏನೊ ನಿನಿಗೇ ಗೊತ್ತಾಗಬೇಕು ಕಂಡ್ಯ."

"ಥೀಮೇಳ್ತಿನಿ ತಿಳಕಳಕ್ಕೆ ಟ್ರೈ ಮಾಡಕ್ಕ. ಈ ಭೈರಪ್ಪ ರಾತ್ರಿ ಹೆಂಡತಿ ಹತ್ರ ಹೋಗಬೇಕಾದ್ರೆ ಅವುಳು ಹದುನಾರು ಮಳ ಸೀರೆವುಟ್ಟಿರಬೇಕಂತೆ. ತಲೆ ತುಂಬ ಮಲ್ಲಿಗೆ ಹೂ ಮುಡಕಂಡಿರಬೇಕಂತೆ. ಅಪ್ಯಾಲೆ ಸುಸ್ಮಸ್ವರಾಜನಂಗೆ ಹಣೆ ತುಂಬ ಕುಂಕುಮ ಹಚಗಂಡಿರಬೇಕಂತೆ. ಅಪ್ಯಾಲೆ ವಾಲೆ, ತಾಲಿ, ಮೂಗುಬೊಟ್ಟು ಕಡ್ಡಾಯವಾಗಿ ಇರಬೇಕಂತೆ. ಇಷ್ಟಲ್ಲ ಮಾಡಿಕಂಡು ಕುಂತಿರೋ ಅವುಳು, ಬಹುವಚನದಲ್ಲಿ ಭೈರಪ್ಪನ್ನ ಮಾತಾಡ್ಸಬೇಕಂತೆ."

"ಏನಂತ ಮಾತಾಡಿಸಬೇಕು" ಎಂದ ಉಗ್ರಿ ನಗುತ್ತಾ,

"ಬಹುವಚನ ಅಂದ್ರೆ ಗೊತ್ತಾಗಲಿಲ್ಲವೇನೊ. ಭೈರಾ ಜೋಯಿಸರು ಆಗಮಿಸಬೇಕು. ಆರ್ಯಪುತ್ರ, ತಮಗಾಗಿ ಈ ಶಯನಾಗೃಹವನ್ನು ಶೃಂಗರಿಸಿ ನಾನೂ ಶೃಂಗಾರಗೊಂಡಿದ್ದೇನೆ. ನಿಮ್ಮ ಪುರುಷತ್ವದಲ್ಲಿ ಏನಾದರೂ ಬದಲಾವಣೆ ಕಂಡಿದೆಯೆ. ಇಲ್ಲವಾದರೆ ನಾನಿನ್ನೂ ಏನು ಮಾಡಬೇಕು? ತಾಂಬೂಲ ತಯಾರಿಸಿ ಕೊಡಲೆ? ಅಥವಾ ನಿಮ್ಮ ಖಾಕಿ ಚೆಡ್ಡಿಯೊಳಗೆ ನಾನೇ ಕರತೂರಿಸಿ ನನ್ನ ಕೋಮಲ ಬೆರಳುಗಳಿಂದ ತಾಡಿಸಿ ಎಚ್ಚರಗೊಳಿಸಲೆ? ಈತರ ಮಾತಾಡಿ ಅವುನ್ನ ಪ್ರಚೋದನೆ ಮಾಡಿದ್ರೆ ಮಾತ್ರ ಏನಾರ ಮಾಡ್ತನಂತೆ. ಇಲ್ಲ ಅಂದ್ರೆ ಇಲ್ಲ" ಎಂದು ವಾಟಿಸ್ಸೆ ನಕ್ಕ, ನಗು ನಿಲ್ಲಿಸಿದ ಜುಮ್ಮಿ,

"ಸೂಳೆಮಗನೆ ಏನು ಸುಳ್ಳೇಳತಿಲ, ಅಂಗ್ಯಲ್ಲ ಬರದಿದ್ದರೆ?" ಎಂದಳು.

"ನಾನೇಳಿದ್ದು ಭೈರಪ್ಪನ ಥೀಮು ಕಣಕ್ಕ. ಬಳೆ, ಕುಂಕುಮ, ಸರ, ಹೂವು ಇಲ್ಲದೆಂಗಸು ಅವುನಿಗೆ ಕ್ರಿಶ್ಚಿಯನ್ ಅಥವಾ ಮುಸ್ಲಿಂ ಹೆಂಗಸರ ತರ ಕಾಣ್ತರಂತೆ. ಆಗ ಅವುನಿಗೆ ಏನು ಮಾಡಕ್ಕೂ ಆಗದಿಲವಂತೆ. ನೀನೆ ಹೇಳು ದೊಡ್ಡಪ್ಪ, ಇದು ಭೈರಪ್ಪನ ಲೈಂಗಿಕ ಸಮಸ್ಯೆನೊ ಇಲ್ಲ ನಮ್ಮ ಹೆಣ್ಣುಮಕ್ಕಳ ಸಮಸ್ಯೆನೊ" ಎಂದು ವಾಟಿಸ್ಸೆ ಕಾದಂಬರಿಕಾರ ಭೈರಪ್ಪನವರ ಸಮಸ್ಯೆಯನ್ನು ಕಾಳಮಾವನ ಮುಂದಿಟ್ಟ.


"ಅಲ್ಲಾ, ಅದೇನೊ ಮದುವೆ ಟೇಮಲ್ಲಿ ಅಂಗೆಅಲಂಕಾರ ಮಾಡಿಕಂಡಿರತರೆ. ಯಾವಾಗ್ಲು ಅಂಗೆ ಇರಕ್ಕೆ ಅವುಳೇನು ಸೂಳೆನೆ? ಹೆಣ್ಣು ಅಂದೇಟಿಗೆ ಗಂಡಾದೋನು ಗಂಡಸುತನ ತೋರತನೆ. ಅವುನ್ಯಾವನ್ಲ ಭೈರಪ್ಪ ಅಂಗೆ ಬರದಿರೋನು?" ಎಂದ ಕಾಳಮಾವ. ಆಗ ಸೀರ,

"ನಮ್ಮನಿಯೋಳು ಇಲ್ಲಿಗಂಟ ಹೂವುನು ಮುದಿಲಿಲ್ಲ, ಕುಂಕುಮನೂ ಹಚಗಳಿಲ್ಲ, ಒಂದು ಸೀರೆ ಒಂದು ರವುಕೆ ಬುಟ್ರೆ ಏನೂ ಇಲ್ಲ. ಅವುಳತ್ರ ಚನ್ನಾಗೇ ಇದ್ದಿವಪ್ಪ."


"ನೀನು ಚನ್ನಾಗಿರದು ಊರಿಗೇ ಗೊತ್ತು ಬುಡು ಚಿಗಪ್ಪ, ಸತ್ತವು, ಕೆಟ್ಟವುಯಲ್ಲ ಸೇರಿ ಒಂಬತ್ತು ಮಕ್ಕಳು ಅಂದೇಟಿಗೆ ನೀನು, ನಮ್ಮ ಚಿಗಪ್ಪ ಭೈರಪ್ಪನ ಕಾದಂಬರಿ ಥೀಮಿಗೇ ಸವಾಲು ಅಂತ ನನಿಗ್ಗೊತ್ತಾಯ್ತು. ಒಂದಿನ ಭೈರಪ್ಪನ್ನ ಕರಕಂಬತ್ತಿನಿ. ನೀನೆ ವಸಿ ಬುದ್ಧಿ ಹೇಳವುನಿಗೆ. ವಯಿಸಾಯ್ತು, ಇನ್ನು ಮ್ಯಾಲಾರ ಮಾನವೀಯವಾಗಿ ಯೇಚನೆ ಮಾಡು ಅಂತ."

"!?"

ಎಚ್. ನರಸಿಂಹಯ್ಯನವರು ಮತ್ತು ಚಳವಳಿಗಳು



ನಿವೃತ್ತಿವೇತನ ತೆಗೆದುಕೊಳ್ಳುವುದಕ್ಕೆ ಮಾತ್ರ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು ಜೈಲು ...ರ್ಟಿಫಿಕೇಟ್, ಇನ್ನಿತರ ಪುರಾವೆಗಾಗಿ ಪ್ರಯತ್ನ ನಡೆಸಿ ಪಡೆದು ವೇತನ ತೆಗೆದುಕೊಂಡು ಖುಷಿಪಡುತ್ತಾರೆ. ...ತ್ತೆ ಕೆಲವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಮಂತ್ರಿ, ಶಾಸಕರಾಗಿ ಮಿಂಚಿ ಪರಲೋಕ ಸೇರಿದ್ದಾರೆ. ...ಲ್ಲೋ ಅಪರೂಪಕ್ಕೆ ಕೆಲವರು ಈ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು ತಮ್ಮ ಕೈಲಾದ ಕೆಲಸ ...ಮಾಡಿಕೊಂಡು ಮುಪ್ಪಾಗಿ ಸುಮ್ಮನಾಗಿದ್ದಾರೆ. ಇಂಥವರಲ್ಲಿ ಅನೇಕರು ತಮ್ಮ ಸುತ್ತ ಆಗುತ್ತಿರುವುದನ್ನು ...ನೋಡಿ ಕೋಪಗೊಂಡು ಅಖಂಡ ಮೌನದಲ್ಲಿ ಮುಳುಗಿದರೆ, ಇನ್ನು ಕೆಲವರು ತಾವು ಸ್ವಾತಂತ್ರ್ಯ ...ಹೋರಾಟದಲ್ಲಿ ಮಾಡಿದ್ದನ್ನು ಹೇಳಿಕೊಂಡಿದ್ದಾರೆ. ಡಾ. ಎಚ್. ನರಸಿಂಹಯ್ಯನವರು ಈಚೆಗೆ ...ಟ್ ಇಂಡಿಯಾ' ಮತ್ತು 'ಮೈಸೂರು ಚಲೋ' ಚಳವಳಿಗಳಲ್ಲಿ ತಾವು ಭಾಗವಹಿಸಿದ್ದು ...ರಿತು ಬರೆದಿದ್ದಾರೆ. ಚೆನ್ನಾಗಿ ಬರೆದಿದ್ದಾರೆ. ಆದರೆ ಅವರು ಮುಪ್ಪಿನಿಂದಾಗಿಯೋ ಮರೆವಿನಿಂದಾಗಿಯೋ ...ಗಾಂಧೀಜಿಯವರಿಂದ ಬಲಗೊಂಡ ಈ ಚಳವಳಿಯಲ್ಲಿ ಕಂಡುಬಂದ ಕ್ರಿಮಿಕೀಟಗಳ ಬಗ್ಗೆ, ...ಗಾಂಧೀಜಿಯ ಆದರ್ಶ ಹೇಳಿಕೊಂಡು ಮುಂದೆ ನುಗ್ಗಿದ ಸಮಾಜದ್ರೋಹಿಗಳ ಬಗ್ಗೆ ಬರೆದಿಲ್ಲ. ...ದು ಸ್ವಾತಂತ್ರ್ಯ ಚಳವಳಿಯ ಬಗ್ಗೆ ಬಂದಿರುವ ಎಲ್ಲ ಪುಸ್ತಕಗಳ ದೊಡ್ಡ ದೋಷ. ಇದು ...ನರಸಿಂಹಯ್ಯನವರ ಪುಸ್ತಕದಲ್ಲೂ ಇದೆ. ಈ ನರಸಿಂಹಯ್ಯ ತಾವು ಪರೀಕ್ಷೆಯನ್ನು ನಿರ್ಲಕ್ಷಿಸಿ ...ಪೂನಾಕ್ಕೆ ಹೋದದ್ದು, ಅಲ್ಲಿಯ ಜೈಲಿನಲ್ಲಿದ್ದದ್ದು, ಪೊಲೀಸರಿಂದ ಬೆದರಿಕೆ, ಹೊಡೆತ ತಿಂದದ್ದು ...ಬರೆದಿದ್ದಾರೆ. ಅಂಥವನ್ನೆಲ್ಲ ಕೇಳಿದ್ದೇನೆ. ಈಗ ಓದುವವರಿಗೆ ಅವೆಲ್ಲ ತಮಾಷೆಯಾಗಿ ಕಾಣುವುದಷ್ಟೇ ...ಲ್ಲ, ಹಾಗೆ ಓದಿದವರು "ಇನ್ನೊಂದೆರಡು ಗೂಸ ಹಾಕಿ ಇನ್ನೂ ನಾಲ್ಕು ವರ್ಷ ಜೈಲಿನಲ್ಲಿ ...ಟ್ಟುಕೊಳ್ಳಬೇಕಿತ್ತು" ಅನ್ನಿಸಿದರೆ ಆಶ್ಚರ್ಯವಿಲ್ಲ. ಯಾಕೆಂದರೆ ಸ್ವಾತಂತ್ರ್ಯ ಚಳವಳಿಯಲ್ಲೇ ಬಿದ್ದ ...ವಿಷಬೀಜಗಳು ಈ ನರಸಿಂಹಯ್ಯನವರಂಥವರಿಗೆ ಕಾಣುವುದಿಲ್ಲ. ಆ ಚಳವಳಿಯಲ್ಲಿ ರಕ್ತಪಾತವಾಗಿದ್ದು ...ಹಿಂದೂ ಮುಸ್ಲಿಮರ ಲಕ್ಷಾಂತರ ತಲೆಗಳು ಕತ್ತರಿಸಿ ಬಿದ್ದದ್ದು ಎಲ್ಲರಿಗೆ ಗೊತ್ತಿದೆ; ಹಾಗೆಯೇ ...ಸೂಕ್ಷ್ಮವಾಗಿ ನೋಡುವವರಿಗೆ ಅನೇಕ ಕೆಟ್ಟ ಜನರೂ ಚಳವಳಿಯಲ್ಲಿದ್ದು ಲೂಟಿ ಮಾಡುತ್ತಿದ್ದುದು, ...ಸೇಡು ತೀರಿಸಿಕೊಳ್ಳುತ್ತಿದ್ದುದು ಗೊತ್ತಿದೆ. ನನಗಾಗ ಏಳು ವರ್ಷ (1942 ರಲ್ಲಿ, ಕ್ವಿಟ್ ಇಂಡಿಯಾ ...ಚಳವಳಿಯಾದಾಗ), ಆಮೇಲೆ 1945 ರಲ್ಲಿ ಎರಡನೇ ಜಾಗತಿಕ ಯುದ್ಧ ನಿಂತಾಗ, 1947 ರಲ್ಲಿ ಸ್ವಾತಂತ್ರ್ಯ ...ದೊರೆತಾಗ ಹಿಂಸೆಯಾದದ್ದು, ನಮ್ಮೂರ ಹತ್ತಿರದ ಹಾರ್ನಹಳ್ಳಿಯ ಮಹಾ ಪೋಲಿಗಳು, ಕ್ಷುದ್ರ ಜಂತುಗಳು ...ಪ್ರಭಾತಫೇರಿ ನಡೆಸಿ ನಾಯಕರಾಗಿದ್ದು ನೆನಪಿದೆ. ದೊಡ್ಡ ನಾಯಕರು (ಎಚ್.ಎಸ್. ರುದ್ರಪ್ಪ ಸಿದ್ಧಯ್ಯ, ಚೆನ್ನರಾಮಯ್ಯ ಸಿದ್ಧಲಿಂಗಯ್ಯ-ಮುಂತಾದವರು) ಇದ್ದರು. ಅವರು ನಿಜವಾದ ಗಾಂಧಿಯ ಶಿಷ್ಯರಾಗಿದ್ದು ಸುತ್ತಣ ಸಮಸ್ಯೆ ಗೊತ್ತಾಗದವರಂತೆ 'ನಿದ್ರಾನಡಿಗೆ'ಯಲ್ಲಿದ್ದರು. ಅವರ ಮಹಾ ಕೊರಕ ಭಾಷಣಗಳನ್ನು ಕೇಳುತ್ತಿದ್ದ ನಾವು ಆಮೇಲಾದದ್ದನ್ನು ನಿರೀಕ್ಷಿಸಿದ್ದೆವು.



ಆ ಕಾಲದಲ್ಲಿ ತೀರಾ ಚಿಕ್ಕವನಾಗಿದ್ದ ನನ್ನಲ್ಲಿದ್ದುದು ಒಂದೇ ಭಾವನೆ. ನಾವು ನಿತ್ಯ ನೋಡುತ್ತಿದ್ದ ಅಪಾಪೋಲೀಗಳು, ನೀಚರು ನಡೆಸುತ್ತಿದ್ದ ಯಾವ ಮೆರವಣಿಗೆ, ಚಳವಳಿಯಿಂದಲೂ ಏನೂ ಆಗುವುದಿಲ್ಲ, ಆದರಿಂದ ಅಪಾಯವೇ ಹೆಚ್ಚು ಎಂಬುದು ಅಂಥ ಪೋಲೀಗಳೇ ಮುಂದೆ ಆಯಕಟ್ಟಿನ ಜಾಗ ಹಿಡಿದು ಕೂತಿದ್ದು ಮಾಧ್ಯಮಿಕ ಶಾಲೆಗೆ ನಮ್ಮೂರಿನಿಂದ ಮೂರು ಮೈಲಿ ನಡೆದುಕೊಂಡು ಬರುತ್ತಿದ್ದ ನಮ್ಮನ್ನು ಬಲಾತ್ಕಾರವಾಗಿ ಸಾಲಿಗೆ ನಿಲ್ಲಿಸಿ ಈ ಗೂಂಡಾಗಳು ಕೂಗಾಡುತ್ತಿದ್ದುದು ನಗೆ ತರಿಸುತ್ತಿತ್ತು. ಇಂಥ ರಾಜಕೀಯವನ್ನೇ ಇವತ್ತು ನೋಡುತ್ತಿರುವುದು.


ಇನ್ನೊಂದು ಮುಖ್ಯ ಮಾತು. 1942-47 ರ ಚಳವಳಿಯನ್ನು ಭಾರತದ ಮೊದಲ ಮತ್ತು ಕೊನೆಯ ಸ್ವಾತಂತ್ರ್ಯ ಚಳವಳಿ ಎಂದು ನರಸಿಂಹಯ್ಯ ಕರೆಯುತ್ತಿರುವುದೂ ಇವರ ಅರಳುಮರುಳುತನ ತೋರುತ್ತದೆ. ಸಿಪಾಯಿದಂಗೆ ಏನಾದಿರಿರಲಿ; 1977ರಲ್ಲಿ ಇಂದಿರಾಗಾಂಧಿ ಹೋರಾಟ, 1989ರಲ್ಲಿ ರಾಜೀವ್ ಗಾಂಧಿ ವಿರುದ್ಧದ ಹೋರಾಟ-ಎಲ್ಲ ಸ್ವಾತಂತ್ರ್ಯ ಚಳವಳಿಗಳೇ. ಪ್ರಜಾಪ್ರಭುತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ, ನಿಷ್ಠುರ ವರ್ತನೆ ಮತ್ತು ಕ್ರಿಯೆ ನಿರಂತರವಾದಾಗ ಮಾತ್ರ ಇಲ್ಲಿ ದುಷ್ಟಜಂತುಗಳು ಪ್ರಜಾಪ್ರಭುತ್ವದ ಹೆಸರಲ್ಲಿ ಬಂದು ಅಧಿಕಾರ ಹಿಡಿದು ಕೂರುವುದಿಲ್ಲ. ನರಸಿಂಹಯ್ಯನವರ ಪುಸ್ತಕದಲ್ಲಿ ಈ ಎಚ್ಚರ ಕಂಡುಬರುವುದಿಲ್ಲ.

ನರಸಿಂಹಯ್ಯನವರು ಚಳವಳಿ ಕಾಲದಲ್ಲಿ ಕಷ್ಟದಲ್ಲಿದ್ದಾಗ ಟಿ.ಎಸ್. ನರಸಿಂಹನ್ ಮನೆಯವರು ನೆರವಾದದ್ದು ಸಂಪದ್ಗಿರಿರಾವ್ ಮುಂತಾದವರ ನಿಲುವು, ನ್ಯಾಷನಲ್ ಕಾಲೇಜನ್ನು ತಮ್ಮ ಮನೆಯಂತೆ ನರಸಿಂಹಯ್ಯ ಪ್ರೀತಿಸಿದ್ದು-ಇವು ಮಾತ್ರ ಚೆನ್ನಾಗಿವೆ. ಇವರ ಜೈಲು ವಾಸಕ್ಕೆ ಇವರ ಹಳ್ಳಿಯವರ ಪ್ರತಿಕ್ರಿಯೆ ಕೂಡ.

-ನವೆಂಬರ್ 17, 1993

‘ಪಿತೃಸಮಾನ’ರ ಅಭಯ, ವಿಪಕ್ಷಗಳಿಗೆ ಭಯ

ಅಣಕ



ಎಚ್.ಎಲ್. ಕೇಶವಮೂರ್ತಿ

ಲೋಕಾಯುಕ್ತರು ರಾಜೀನಾಮೆ ಸಲ್ಲಿಸಿದರು.

ದಕ್ಷ, ಪ್ರಾಮಾಣಿಕ ಅಧಿಕಾರಿಯ ಕೈಕಟ್ಟಿ ಹಾಕಿತ್ತು ಸರ್ಕಾರ. ಇದು ಬಿಟ್ಟು ಅನ್ಯಮಾರ್ಗ ಏನಿತ್ತು ಅವರಿಗೆ?

ಆಕ್ರೋಶಗೊಂಡ ಜನತೆ ಸರ್ಕಾರದ ವಿರುದ್ಧ ತಿರುಗಿ ಬಿದ್ದಿತು. ಪ್ರತಿಭಟನಾ ಮೆರವಣಿಗೆ ನಡೆಸಿ ತನ್ನ ಸಿಟ್ಟು ಪ್ರದರ್ಶಿಸಿತು.

ಮುಗ್ಧ ಜನರ ಪ್ರೀತಿಯಿಂದ ಲೋಕಾಯುಕ್ತರ ಹೃದಯ ತುಂಬಿ ಬಂದಿತು.

ಸರ್ಕಾರಕ್ಕೇನೂ ಅವರನ್ನು ಕಂಡರೆ ದ್ವೇಷ ಇರಲಿಲ್ಲ, ಪ್ರೀತಿ ಗೌರವಗಳೇ ಇದ್ದುವು. ರಾಜೀನಾಮೆ ಹಿಂಪಡೆಯುವಂತೆ ನೈತಿಕ ಒತ್ತಡ ತರಬಹುದಿತ್ತು, ಹಾಗೆ ಮಾಡಿ ಅವರ ಮನಸ್ಸಿಗೆ ನೋವುಂಟುಮಾಡುವ ಇರಾದೆ ಸರ್ಕಾರಕ್ಕಿರಲಿಲ್ಲ, ಗೌರವಪೂರ್ವಕವಾಗಿ ಬೀಳ್ಕೊಡಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿತ್ತು!

ವಿಪಕ್ಷ? ರಾಜ್ಯಪಾಲ? ಕೇಂದ್ರ ಗೃಹ ಸಚಿವ? ಎಲ್ಲರದ್ದೂ ಜನರದ್ದೇ ಅಭಿಪ್ರಾಯ- ‘ರಾಜೀನಾಮೆ ಹಿಂಪಡೆಯಿರಿ!

ಯಾರು ಕಾಡಿದರೂ ಬೇಡಿದರೂ ಲೋಕಾಯುಕ್ತರು ತಮ್ಮ ನಿರ್ಧಾರ ಬದಲಿಸಲಿಲ್ಲ, ‘ನನ್ನ ನಿರ್ಧಾರ ಅಚಲ’ ಎಂದರು!

‘ತಮ್ಮ ಮಾತಿನಂತೆ ನಡೆದ ಅಧಿಕಾರಿಯನ್ನೇ ಅಮಾನತ್ತಿನಲ್ಲಿಡುವ ಪ್ರಯತ್ನದಲ್ಲಿರುವಾಗ ನಾನಿದ್ದೇನು ಫಲ?’ ಲೋಕಾಯುಕ್ತರ ನೊಂದ ನುಡಿ.

ಅಧಿಕಾರಿ ಅಂದರೆ ಹೀಗಿರಬೇಕು. ತನ್ನ ಸಿಬ್ಬಂದಿಯನ್ನು ಕಾಪಾಡಬೇಕು. ಅದು ಸಾಧ್ಯವಾಗದೇ ಇದ್ದಲ್ಲಿ ರಾಜೀನಾಮೆ ಕೆರೆದು ಹೊರಬರಬೇಕು.

ಲೋಕಾಯುಕ್ತರ ಈ ನಿಲುವಿಗೆ ತಲೆದೂಗಿತು ಜನತೆ! ‘ಭೇಷ್ ಅಧಿಕಾರಿ ಅಂದರೆ ಹೀಗಿರಬೇಕು’ ಎಂದು ತಾರೀಫು ಮಾಡಿತು.

ಇಂತಹ ಜಂಜಾಟದಲ್ಲೇ ಹೇಗೋ ಲೋಕಾಯುಕ್ತರು ಒಂದು ವಾರ ಕಳೆದರು. ಸರ್ಕಾರ ವಿದಾಯ ಹೇಳುವ ತರಾತುರಿಯಲ್ಲಿತ್ತು.

ಆದರೆ.... ಶುದ್ಧಹಸ್ತದ ಅಧಿಕಾರಿ. ಅಂತಹವರೇ ಈ ಸರ್ಕಾರದಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ ಎಂದು ರಾಜೀನಾಮೆ ನೀಡಿದ್ದಾರೆ ಎಂದರೆ... ಬಿಜೆಪಿಗೆ ಅಳಿಸಲಾಗದ ಕಳಂಕ. ಇದನ್ನು ಹೇಗಾದರೂ ಮಾಡಿ ನಿವಾರಿಸಬೇಕು....

‘ಪಿತೃಸಮಾನರು’ ಪ್ರವೇಶ ಪಡೆದರು!

‘ಪಿತೃ’ವಿಗಿಂತ ‘ಪಿತೃಸಮಾನರು’ ಎಂದೆಂದೂ ಮಿಗಿಲು. ಅಪ್ಪನಿಗೆ ಸೆಡ್ಡು ಹೊಡೆದು ನಿಲ್ಲಬಹುದು. ಅಪ್ಪನ ಸಮಾನರಿಗೆ? ಎಂದಿಗೂ ಸಾಧ್ಯವಿಲ್ಲ.

ಪಿತೃಸಮಾನರ ವಾಕ್ಯಪರಿಪಾಲನೆಗಾಗಿ ರಾಜೀನಾಮೆ ಹಿಂಪಡೆದರು ‘ನ್ಯಾಯ’ಮೂರ್ತಿಗಳು!

‘ಅಚಲ’ ನಿರ್ಧಾರ ಏನಾಯಿತು?

ಏನೂ ಆಗಿಲ್ಲ, ಅದು ಅಲ್ಲೇ ಗರುಡಗಂಬದಂತೆ ನಿಂತಿದೆ! ‘ಪಿತೃಸಮಾನರು’ ಎಲ್ಲಾ ಬೇಡಿಕೆಗಳನ್ನು ಈಡೇರಿಸುವ ಆಶ್ವಾಸನೆ ನೀಡಿದ್ದಾರಂತೆ! ಮುಖ್ಯಮಂತ್ರಿಗಳೂ ಹೆಚ್ಚು ಅಧಿಕಾರ ನೀಡಲು ‘ಪರಿಶೀಲಿ’ಸುತ್ತಾರಂತೆ!

ಯಡ್ಯೂರಪ್ಪನವರ ‘ಪರಿಶೀಲನೆ’ ಬಗೆಗೆ ಅಷ್ಟೊಂದು ನಂಬಿಕೆ ನ್ಯಾಯಮೂರ್ತಿಗಳಿಗೆ! ಜನರಿಗೆ ಇಲ್ಲದಿರಬಹುದು. ಅವರಿಗೆ ಇದೆ!

ಆಯಿತು. ಈಡೇರಿತೆ ಆಶ್ವಾಸನೆ?

ಉನ್ನತ ಅಧಿಕಾರಿಗಳನ್ನು ಸ್ವಯಂಪ್ರೇರಿತರಾಗಿ ತನಿಖಿಸಲು ಅಧಿಕಾರಿ ನೀಡಿತು ಯಡ್ಯೂರಪ್ಪ ಸರ್ಕಾರ.

ಏನಾಯಿತು ಜನಪ್ರತಿನಿಧಿಗಳ ತನಿಖೆ?

ಎಲ್ಲಾದರೂ ಉಂಟೆ! ಸತ್ಯಸಂಧರು ಅವರೆಲ್ಲ! ಅವರನ್ನು ತನಿಖಿಸುವುದು ಅನಗತ್ಯ!

ನ್ಯಾಯಮೂರ್ತಿಗಳ ಬರಿಕೈಗೆ ಹಿತ್ತಾಳೆ ಕಡಗ ಸಿಕ್ಕಿತ್ತು.

ಸಂತೃಪ್ತಿಗೊಂಡರೆ ನ್ಯಾಯಮೂರ್ತಿಗಳು?

ಅರ್ಧ ‘ಸಂತೋಷ’ ಆಗಿದೆಯಂತೆ!

ಪೂರ್ತಿ ‘ಸಂತೋಷ’ರಾಗಲು ‘ಪಿತೃಸಮಾನ’ರ ಬಳಿಗೆ ಹೋಗುವರೆ?

ಅದರ ಅವಶ್ಯಕತೆ ಅವರಿಗೆ ಕಂಡಿರಲಾರದು!

ವಿಧಾನ ಮಂಡಲದಲ್ಲೂ ಅದೇ ಗದ್ದಲ. ನ್ಯಾಯಮೂರ್ತಿಗಳು ಎತ್ತಿದ ಗಣಿ ಗದ್ದಲ. ಸಿಬಿಐ ತನಿಖೆಯಾಗಲಿ ಎಂದು ವಿಪಕ್ಷಗಳು. ಸರ್ಕಾರಕ್ಕೆ ಅದರ ಮೇಲೆ ನಂಬಿಕೆ ಇಲ್ಲ, ಲೋಕಾಯುಕ್ತಕ್ಕೆ ವಹಿಸುತ್ತೇವೆ ಎಂದಿತು ಸರ್ಕಾರ.

ಲೋಕಾಯುಕ್ತರ ಮೇಲೆ ಎಷ್ಟೊಂದು ನಂಬಿಕೆ ಸರ್ಕಾರಕ್ಕೆ!

ಎರಡೂ ಕಡೆಯವರೂ ಮೊಂಡು ಹಿಡಿದರು.

ಸದನ ಶಾಸ್ತ್ರಕ್ಕೆ ಎಂಬಂತೆ ಸೇರುವುದು, ಮುಂದುವರಿಕೆ ನಡೆದೇ ಇತ್ತು.

ಕಣ್ತೆರೆದವು ಮಾಧ್ಯಮಗಳು.

ಬಡವರ ಬಗ್ಗೆ ಕನಿಕರ ಹುಟ್ಟಿತು. ಅವರ ಹಣ ಪೋಲಾಗಬಾರದಲ್ಲ ಎಂದು ಮುಖಪುಟದ ವರದಿ ನೀಡಿದವು.

ಏನು ವರದಿ ಅದು?

‘ಧರಣಿಯಿಂದ ದಿವಸಕ್ಕೆ 43 ಲಕ್ಷ ನಷ್ಟ!’

ಇಷ್ಟೊಂದು ಹಣ ವ್ಯರ್ಥವಾಗುತ್ತಿದೆ. ವಿಪಕ್ಷಗಳ ಧೂರ್ತತನ ಇದು!

ಸತ್ಯ. ಗಣಿ ಹಗರಣದಿಂದ ಸರ್ಕಾರಕ್ಕೆ, ಅರ್ಥಾತ ಬಡ ಜನತೆಗೆ ಆಗಿರುವ ನಷ್ಟ ಎಷ್ಟು?

ಇಪ್ಪತ್ತು ಸಾವಿರ ಕೋಟಿ!

ಮಾಧ್ಯಮ ಮಿತ್ರರಿಗೆ ‘20’ ಕ್ಕಿಂತ ‘43’ ಬೃಹತ್ ಆಗಿ ಕಂಡಿರಬೇಕು. ಕೋಟಿ, ಲಕ್ಷ ಅರ್ಥವಾಗಿರಲಾರದು. ಅದನ್ನೇ ಎತ್ತಿ ಹಿಡಿದರು!

ಸರ್ಕಾರವೇನೂ ಬಡವರ ಕೈಬಿಡಲಿಲ್ಲ.

ಕಬ್ಬಿಣದ ಅದಿರು ರಫ್ತು ನಿಷೇಧ; ಇಲ್ಲಿಯೇ ಮೌಲ್ಯವರ್ಧನೆ; ಸ್ಥಳೀಯರಿಗೆ ಉದ್ಯೋಗ ಅವಕಾಶ ಇಂತಹವುಗಳ ಚಿಂತನೆಗಳಲ್ಲಿ ಮುಳುಗಿತು!

ಇದೆಲ್ಲ ಆಗಬೇಕಾದ್ದೆ ಇದು ಮುಂದಿನ ಮಾತು. ಈಗಾಗಲೇ ನಡೆದಿರುವ ಗಣಿ ಹಗರಣಕ್ಕೆ ಮುಕ್ತಿ ಹೇಗೆ?

ಲೋಕಾಯುಕ್ತರಿಗೆ ವಹಿಸುತ್ತೇವೆ!

ಅವರ ವ್ಯಾಪ್ತಿಗೆ ಮೀರಿದ ಸಂಗತಿಗಳು ಇವೆಯಲ್ಲ? ಅಲ್ಲದೆ ಗಣಿ ಹಗರಣ ಪತ್ತೆಹಚ್ಚಿದ್ದೇ ಅವರು. ಎರಡು ವರ್ಷಗಳ ಹಿಂದೆ ನೀಡಿದ್ದ ವರದಿಯೇ ಧೂಳು ತಿನ್ನುತ್ತಾ ಬಿದ್ದಿದೆಯಲ್ಲಾ, ಇನ್ನೊಂದು ವರದಿ ಏಕೆ? ಗೆದ್ದಲುಹುಳುಗೆ ಆಹಾರ ಒದಗಿಸಲಾ?

ಉಹುಂ ಏನೆಂದರೂ ಕೇಳಲೊಲ್ಲದು ಸರ್ಕಾರ. ಲೋಕಾಯುಕ್ತರೇ ಈಗ ಬೇಕು ಅದಕ್ಕೆ!

ಆಯಿತು. ಲೋಕಾಯುಕ್ತ ತನಿಖೆಯೇ ಆಗಲಿ. ಫಲಿತಾಂಶವೇನು?



ಆಯಕಟ್ಟಿನ ಸಮಯದಲ್ಲಿ ‘ಪಿತೃಸಮಾನ’ರ ಪ್ರವೇಶ! ಪರೀಕ್ಷೆಗೆ ಮುನ್ನವೇ ಫಲಿತಾಂಶ ಪ್ರಕಟಿಸಬಹುದು! ‘ಪಿತೃಸಮಾನ’ರ ಇಂತಹ ಅಭಯವೇ ವಿಪಕ್ಷಗಳ ಭಯ!

ಶ್ರೀರಾಮುಲು ಜೈಲಿಗೆ ಹೋದ್ರಂತೆ!

ಶಾಸನಸಭೆ ಅನ್ನೋದು ರೌಡಿಗಳ ಕಾಳಗದ ಅಂಗಳದಂತೆ ಶೋಭಾಯಮಾನವಾಗಿತ್ತು, ಆಡಳಿತ ಪಕ್ಷದೋರು ಠಾಕುಠೀಕಾಗಿ ಸಮಯಕ್ಕೆ ಸರಿಯಾಗಿ ಸದನಕ್ಕೆ ಬರೋರು. ಆರುಚಾಟ, ಕಿರುಚಾಟಗಳಿಗೆ ಅಳಿಲುಸೇವೆ ಸಲ್ಲಿಸೋರು. ಕಲಾಪ ನಾಳೆಗೆ ಮುಂದೂಡಲಾಗಿದೆ ಕೇಳಿಸಿಕೊಂಡು ಬರ್ಖಾಸ್ತು ಆಗೋರು. ಇದು ನಡೀತಿತ್ತು, ವಿಪಕ್ಷಗಳ ಕರ್ಮ. ಅಹೋರಾತ್ರಿ ಧರಣಿ ಅಂತ ಸಾರಿದ ತಪ್ಪಿಗೆ ಕಷ್ಟವೋ ಸುಖವೋ ಅಲ್ಲೇ ಇರೋದು ಅನಿವಾರ್ಯ ಆಗಿತ್ತು.

ಇದು ಅವತ್ತಿನ ಪರಿಸ್ಥಿತಿ.

‘ನೀವು ಏನು ಬಡ್ಕೊಂಡ್ರೂ ಅಷ್ಟೇಯ, ನಾನು ಮಾಡೋದೆ ಮಾಡ್ತೀನಿ’ ಎನ್ನುವ ಆಧುನಿಕ ಜನತಂತ್ರದ ಧೋರಣೆಗೆ ಅನುಸಾರವಾಗಿ ಯಡ್ಯೂರಪ್ಪನವರೇನು ಮಾಡಿದ್ರು... ಮನಸ್ಸ ತಿಳಿ ಮಾಡ್ಕೋತೀವಿ ಅಂತೇಳಿ ‘ಎರಡನೆ ಹೆಂಡತಿ’ಗೆ ಹೋದ್ರು! ಇನ್ನು ಯಾರ್‍ಯಾರು ಎಲ್ಲೆಲ್ಲಿಗೋದ್ರೊ ತಿಳೀದು. ಶ್ರೀರಾಮುಲು ಸೀದಾ ಪರಪ್ಪನ ಅಗ್ರಹಾರ ಜೈಲಿಗೆ ಹೋದ್ರು!

ಪರಪ್ಪನ ಅಗ್ರಹಾರದ ಜೈಲೇ ಯಾಕೆ ನೆನಪಿಗೆ ಬಂದಿತು ಅಂದ್ರೆ... ಬಂದಿತು ಅಷ್ಟೆ. ಈಗ ಮಗುವಿಗೆ ತಾಯಿ ನೆನಪು ಬರುತ್ತೆ, ಯಾಕೆ ಬಂತು ಅಂದ್ರೆ ಹೇಳಾಕಾಯ್ತದ. ಮಗು ಅತ್ತಾಗ ತಾಯಿ ಓಡೋಡಿ ಬರೋಲ್ವ ಹಂಗೇನೆ ಜೈಲಿನೋರು ಒಂದು ಆಂಬ್ಯುಲೆನ್ಸ್ ಬೇಕು ಅಂತಾವ ಕೇಳಿದ್ರಂತೆ. ಅದೇನು ಅದರ ಕತೆ ನೋಡಾನ ಅಂತ ಹೋಗಿದ್ರು. ಹೆಂಗೋ ಬರೋದು ಬಂದಿದೀನಿ ಅಂತಾವ ಅವರೇನು ಮಾಡಿದ್ರು.... ಬಳ್ಳಾರಿ ಹಾಗೂ ಆದರ ಆಸುಪಾಸಿನ ಕೈದಿಗಳ ಕುಶಲೋಪರಿ ವಿಚಾರಿಸಿದರು. ಜೈಲಿನ ಅಧಿಕಾರಿಗಳು ಎದುರು ಇದ್ರೆ ಕೈದಿಗಳ ಅಂತರಾಳದ ಮಾತು ಅಲ್ಲೇ ಉಡುಗಿಹೋಗ್ತದಲ್ಲಾ.... ಹಂಗಾಗವೆ ಇರಲಿ, ಎಲ್ರೂ ಮನಸ್ಸು ಬಿಚ್ಚಿ ಮಾತಾಡಲಿ ಅಂತಾವ ಅಧಿಕಾರಿಗಳನ್ನ ಹೊರಕ್ಕೆ ಕಳಿಸಿದ್ರು. ಇಷ್ಟೆ ಅಂತೆ ನಡೆದದ್ದು. ಇಷ್ಟಕ್ಕೆ ಎಷ್ಟೊಂದು ಮಾತಾಡ್ತರಪ್ಪ ಜನಾ... ಅವರ ಪೆರೋಲ್ ಬಿಡುಸ್ತಾರೆ ಅಂತಾರೆ. ಅವರ ಮೂಲಕ ಉದ್ದೇಶಿತ ‘ಬಳ್ಳಾರಿ ಬಚಾವ್’ ಯಾತ್ರೇಲಿ ಭಯದ ವಾತಾವರಣ ನಿರ್ಮಿಸ್ತಾರೆ ಅಂತಾರೆ. ಅದೂ ಹೋಗ್ಲಿ ಅಂದ್ರೆ ಅವರಿಗೆ ಸುಪಾರಿ ನೀಡಿ ವಿಪಕ್ಷ ನಾಯಕರುಗಳ ಖತಂ ಮಾಡುಸ್ತಾರೆ ಅಂತಾರಲ್ಲ ಜನ ಅನ್ನೋರು... ಏನೋ ಅವರ ಊರಿನ ಕಡೆಯವರು. ಗುರುತು ಪರಿಚಯ ಇರೋರು. ಮನೆ ಕಡೆ ವಿಷಯ ತಿಳಿಸಾನ ಅಂತೆಲ್ಲ ಚಿಂತಿಸಿದ ಮಂತ್ರಿಗಳು ಹಂಗೆ ಮಾಡಿದ್ರೆ ಇವು ಹಿಂಗೆಲ್ಲ ಮಾತಾಡೋದಾ...

ನಿಜ. ಜೈಲಿಗೆ ಭೇಟಿ ನೀಡಬೇಕಾದ್ರೆ ಪೂರ್ವಾನುಮತಿ ಪಡೆದಿರಬೇಕು. ಆದರೇನು ಮಾಡಲಾಗುತ್ತೆ, ಸಮಯ ಸಂದರ್ಭ ಅಂತ ಇರುತ್ತಲ್ಲಾ, ಭೇಟಿ ನೀಡೋದು ಗೊತ್ತಿದ್ದರೆ ಹಿಂಗೆಲ್ಲ ಮಾಡಬೌದಿತ್ತು. ಆದರೆ ಅದು ಸಡನ್ ಆಗಿ ಆದದ್ದು. ಅನುಮತಿ ಪಡೀಲಿಲ್ಲ, ಈಗತಾನೆ ಏನು ಮೀರೋಗಿರೋದು. ಭೇಟಿ ನೀಡಿ ಆಯ್ತಲ್ಲ, ಈಗ ಪರವಾನಗಿ ತಗೋತಾರೆ. ಹಿಂದಿನ ದಿವಸದ ಡೇಟ್ ಹಾಕಿ ಅನುಮತಿ ಪತ್ರ ನೀಡಲ್ಲ ಅಂತ ಯಾವ್ನೋನು ಹೇಳ್ತಾನೆ. ತಗೋತಾರೆ. ಹೆಂಗಾದ್ರೂ ರೆಕಾರ್ಡ್‌ನಲ್ಲಿರಲಿ ಅಂತಾವ. ಯಾಕೆಂದ್ರೆ ಜೈಲು ಅಧಿಕಾರಿಗಳಿಗೂ ತೊಂದರೆ ಆಗಬಾರದಲ್ಲಾ....

250 ರೂಪಾಯಿ ಅಲ್ಲ, ಕೇವಲ 12 ರೂಪಾಯಿಗೆ ಸಂಕ್ಷಿಪ್ತ ‘ಕವಲು’ ಕಾದಂಬರಿ

ಎಸ್.ಎಲ್.ಭೈರಪ್ಪನವರ ‘ಕವಲು’ ಕಾದಂಬರಿಯನ್ನು ಓದಲು ನಾನು ತುಂಬಾ ಉತ್ಸುಕನಾಗಿದ್ದೆ. ಈ ಉತ್ಸಾಹಕ್ಕೆ ಕಾರಣ ಭೈರಪ್ಪನವರ ಮೇಲಿನ ಅಭಿಮಾನವಂತೂ ಖಂಡಿತ ಅಲ್ಲ, ಬದಲಿಗೆ ಅವರ ಕಾದಂಬರಿಯಲ್ಲಿ ಇರಬಹುದಾದ ವಕ್ರತನವನ್ನು ತಿಳಿಯಲು ಉತ್ಸುಕನಾಗಿದ್ದೆ. ಸದ್ಯ ಪ್ರತೀವಾರದಂತೆ ಈ ಶುಕ್ರವಾರವೂ ಸಹ ನಾನು ‘ಗೌರಿ ಲಂಕೇಶ್’ ಪತ್ರಿಕೆಯನ್ನು ತೆಗೆದುಕೊಂಡೆ. ಪತ್ರಿಕೆಯ ಮುಖಪುಟವನ್ನು ತಿರುಗಿಸಿದ ತಕ್ಷಣವೇ ‘ಕವಲು’ ಎಂಬ ಪದ ನನ್ನ ಕಣ್ಣನ್ನು ಕುಕ್ಕಿತ್ತು, ಕುತೂಹಲದಿಂದ ‘ಕಂಡಹಾಗೆ’ ಅಂಕಣವನ್ನು ಓದಲು ಶುರುಮಾಡಿದೆ. ಓದುತ್ತಾ ಓದುತ್ತಾ ನನ್ನಲ್ಲಿದ್ದ ಕುತೂಹಲ ಕಡಿಮೆಯಾಗಿ “ಕತ್ತೆ ಮೊಲೆಯಲ್ಲಿ ಖಂಡುಗ ಹಾಲಿದ್ದರೇನು?” ಎಂಬ ಅನಿಸಿಕೆ ಮೂಡಿತು.

ಆದ್ದರಿಂದ ಈ ಕಾದಂಬರಿ ಖರೀದಿಸಲು ನನ್ನಲ್ಲಿದ್ದ 250 ರೂ.ಗಳಲ್ಲಿ ನಾನು ಮತ್ತು ನನ್ನ ಸ್ನೇಹಿತರು ಹನುಮಂತು ಹೋಟೆಲ್‌ನಲ್ಲಿ ಮೂರು ಮಟನ್ ಪಲಾವ್ ತಿಂದು, ಉಳಿದ ಹತ್ತು ರೂಪಾಯಿಗೆ ಹತ್ತು ರೂಪಾಯಿ ಸೇರಿಸಿ ಹೊರಗೆ ಹೊಟ್ಟೆ ಹಸಿವಿನಿಂದ ನಿಂತಿದ್ದ ಬಡ ಹುಡುಗನಿಗೆ “ನೀನು ಹೋಗಿ ಚರ್ಚ್ ಬಳಿ ಇರುವ ಹೋಟೆಲ್‌ನಲ್ಲಿ ಬಡಾ ಬಿರ್ಯಾನಿ ತಿನ್ನು” ಅಂತ ಕೊಟ್ಟಾಗ ಆ ಹುಡುಗನ ಮುಖದಲ್ಲಿ ಸಂತೋಷ ಇಮ್ಮಡಿಸಿತು. ಆ ಸಂದರ್ಭದಲ್ಲಿ ನನಗೆ “ಸ್ವಾತಿ ಮಳೆ ಬಿದ್ದರೆ ಮುತ್ತಿನಂಥ ಜೋಳ” ಎಂಬ ಮಾತು ನೆನಪಾಯಿತು.

-ಉದಯ್, ಕುರುಬರಹಳ್ಳಿ, ಮೈಸೂರು

ಎಸ್.ಎಲ್.ಭೈರಪ್ಪನ ‘ಕವಲು’ ಕಾದಂಬರಿಯನ್ನು ಚೆನ್ನಾಗಿ ‘ಬ್ಲಾಸ್ಟ್’ ಮಾಡಿದ್ದೀಯ. ಅದನ್ನು ಓದಿ ಸಮಾಧಾನವಾಯಿತು. ಥ್ಯಾಂಕ್ಸ್...

-ಡಾ.ವಿಜಯ, ಬೆಂಗಳೂರು

‘ಕವಲು’ ಬಗೆಗಿನ ‘ಕಂಡಹಾಗೆ’ ಅರ್ಥಪೂರ್ಣವಾಗಿತ್ತು...


-ವಿದ್ಯಾಧರ ರೈ, ಕೊಡಗು

ಅಕ್ಕ, ‘ಕವಲು’ ಕಾದಂಬರಿಯನ್ನು ದುಡ್ಡು ಕೊಟ್ಟು ತಗೋತಿರಲಿಲ್ಲ, ಹಾಗೇ ಸಿಕ್ಕರೆ ಓದೋಣ ಅಂದುಕೊಂಡಿದ್ದೆ. ಆ ಓದುವಿಕೆಯ ನರಕದಿಂದ ನನ್ನನ್ನು ತಪ್ಪಿಸಿದ್ದಕ್ಕೆ ಥ್ಯಾಂಕ್ಸ್!

-ಓದುಗ

‘ಕವಲು’ ಕಾದಂಬರಿಯನ್ನು ಓದುವ ಹಿಂಸೆಯಿಂದ ಬಚಾವ್ ಮಾಡಿದ್ದಕ್ಕೆ ಧನ್ಯವಾದಗಳು.

-ನಾಟಿ ಹಸು, ಈಮೇಲ್ ಮೂಲಕ.



‘ದೇಶಕಾಲ’ ಕುರಿತು ಮಂಜುನಾಥ ಲತಾ ಮತ್ತು ಚಂದ್ರಶೇಖರ ಐಜೂರ್ ಅವರ ಲೇಖನಗಳನ್ನು ಪ್ರಕಟಿಸಿದ್ದಕ್ಕೆ ನಿಮಗೆ ಹ್ಯಾಟ್ಸ್ ಆಫ್! ಅವರಿಬ್ಬರ ಪ್ರತಿಭೆ ಮೆಚ್ಚುವಂತಹದ್ದು!!

-ಉಮೇಶ್‌ಚಂದ್ರ, ಮಂಗಳೂರು

ಸುವರ್ಣ (ನಿವೇದಿತಾ) ಅವರು ತಮ್ಮ ಮನದ ಬಯಕೆಯಂತೆ ಸನ್ಯಾಸ ತೊರೆದು ಶ್ರೀ ಚೇತನ್‌ರವರ ಕೈಹಿಡಿದು, ಸನ್ಯಾಸತ್ವದಿಂದ ಸಂಸಾರದೆಡೆಗೆ ಕಾಲಿಟ್ಟದ್ದು ಪ್ರಕೃತಿ ಸಹಜವಾಗಿದೆ. ಇದಕ್ಕಾಗಿ ಅವರಿಬ್ಬರನ್ನು ಅಭಿನಂದಿಸುತ್ತಾ ಪ್ರೀತಿಯಿಂದ ಬಾಳಿಬದುಕಿ ಎಂದು ಹಾರೈಸುತ್ತೇವೆ.

ಆದರೆ ಒಂದು ವಾರಪತ್ರಿಕೆಯಲ್ಲಿ ನಿವೇದಿತಾರ ಬಗ್ಗೆ, ಪೂಜ್ಯ ಶಿವಮೂರ್ತಿ ಶರಣರ ಬಗ್ಗೆ ಸುಳ್ಳಿನ ಸುದ್ದಿ ಬರೆದಿದ್ದಾರೆ. ವಿನಾಕಾರಣ ಅಪಮಾನಕಾರಕ ಕಥೆ ಹೆಣೆದಿದ್ದಾರೆ. ಆದ್ದರಿಂದ ನಿವೇದಿತಾ ವಿಚಲಿತರಾಗಕೂಡದು. ಆ ಪತ್ರಿಕೆ ಅನೇಕ ಸಲ ಇಂತಹ ಸುಳ್ಳು ಸುದ್ದಿಗಳನ್ನು ಬರೆದಿದೆ; ಒಳ್ಳೆಯವರ ಮಾನಹಾನಿ ಮಾಡುವುದೇ ಆ ಪತ್ರಿಕೆಯ ಕೆಲಸವಾಗಿದೆ.

ಪೂಜ್ಯ ಶರಣರ ಬಗ್ಗೆ ಆಗಲೀ, ನಿವೇದಿತಾರವರ ಬಗ್ಗೆ ಆಗಲೀ ಜನರಲ್ಲಿ-ಯಾರಲ್ಲಿಯೂ ಕೆಟ್ಟ ಭಾವನೆಗಳಿಲ್ಲ ಹಾಗೂ ಅವರಿಂದ ಕೆಟ್ಟದ್ದು ಆಗಿದೆ ಎಂದು ಯಾರಿಗೂ ಅನಿಸಿಲ್ಲ.

ಆದರೆ ಗೌರಿ ಅವರ ‘ಲಂಕೇಶ್’ ವಾರಪತ್ರಿಕೆಯಲ್ಲಿ ಸರಿಯಾಗಿ ಬರೆದಿದ್ದಾರೆ. ‘ನನ್ನ ಪಾಲಿಗೆ ಚಿತ್ರದುರ್ಗದ ಶರಣರೇ ದೇವರು’ ಎಂಬ ನಿವೇದಿತಾ ಹೇಳಿರುವುದು ಸರಿಯಾದ ಮಾತು. ಗುರುಗಳು ಸನ್ಯಾಸ ತೊರೆದು ಸಂಸಾರಿ ಆಗುವುದಕ್ಕೆ ಒಪ್ಪಿಗೆ ನೀಡಿದ ನಂತರವೇ ಅವರು ಮದುವೆ ಆಗಿದ್ದು, ನಿವೇದಿತಾ ಧೈರ್ಯವಾಗಿರಬೇಕು. ಅವರ ಹಿಂದೆ ಇಡೀ ಬಸವ ಕೇಂದ್ರದ ಬಳಗವಿದೆ, ಪೂಜ್ಯ ಶಿವಮೂರ್ತಿ ಶರಣರಿದ್ದಾರೆ, ಅಪಾರವಾದ ಬಸವ ತತ್ವಾಭಿಮಾನಿಗಳಿದ್ದಾರೆ. ಸಂಸಾರವನ್ನಾರೂ ಕೆಟ್ಟದ್ದೆನ್ನುವುದಿಲ್ಲ. ನಿವೇದಿತಾ ಅವರು ಸಂಸಾರಕ್ಕೆ ಬದ್ಧರಾಗಿದ್ದು, ಸಂಸಾರದ ಜೊತೆಜೊತೆಗೆ ಆಧ್ಯಾತ್ಮವನ್ನೂ ಮುಂದುವರೆಸಬಹುದು. ಬಸವಣ್ಣ ಹಾಗೂ ಶರಣರು ಸಂಸಾರಸ್ಥರಾಗಿದ್ದುಕೊಂಡೇ ಆಧ್ಯಾತ್ಮ ಜೀವಿಗಳಾಗಿ ಬದುಕಿದರು.

-ಮಾನ್ವಿ ಹಾಗೂ ರಾಯಚೂರು
ಬಸವ ಕೇಂದ್ರ ಪದಾಧಿಕಾರಿಗಳು

ರಣ ಜಾಗಕ್ಕೆ ಂಗೀತಂ?


ನಿರ್ದೇಶಕ ನಾಗಾಭರಣರ ಅತಿಯಾದ ಸೊ? ಅಥವಾ ನಿರ್ಮಾಪಕ ಕುಮಾರ್ ನವರ ಜಿಪುಣುತನವಾ? ಗೊತ್ತಿಲ್ಲ. ಆದರೆ ಮಧ್ಯೆ ವ್ಯಾವಹಾರಿಕ ಸಮರ ಆರಂಭವಾಗಿರು ಸತ್ಯ.

ಟಿನ ವರ್ಷಗಳಲ್ಲಿ ರಾಜಕಾರಣಿಯಾಗೇ ಹೆಚ್ಚೆಚ್ಚು ಂಡಿರುವ ಕುಮಾರ್ ಬಂಗಾರಪ್ಪ ಸಿನಿಮಾ ದ ದೂರವೇ ಉಳಿದಿದ್ದಾರೆ. ಎಂಟು ವರ್ಷಗಳ ದ ಉಪೇಂದ್ರ ನಟಿಸಿದ್ದ 'ರಕ್ತಕಣ್ಣೀರು' ಆದ ಮಾರ್ ಬಂಗಾರಪ್ಪ ನಟಿಸಿದ ಯಾವ ಚಿತ್ರಗಳೂ ಯಾಗಿಲ್ಲ.

ತಿ ಹೀಗಿರುವಾಗ ತಾನು ಸಣ್ಣಪುಟ್ಟ ಸಿನಿಮಾಗಳಲ್ಲಿ ದಕ್ಕಿಂತ ಯಾವುದಾದರೂ ಐತಿಹಾಸಿಕ ಚಿತ್ರದ ಮಾತ್ರ ರೀ ಎಂಟ್ರಿ ಪಡೆಯಬೇಕು ಮರಿ 'ಬಂ' ಬಯಕೆಯಾ ಯಿತು. ಕೆಳದಿಯ ಶಿವಪ್ಪ ನನ್ನು ಸಿನಿಮಾವೊಂದನ್ನು ನಿರ್ಮಿಸಿ ತಾವು ನಟಿಸಲು ಕುಮಾರ್ ದರು.


ಂದೆ ಇದೇ ಕುಮಾರ್ ಪ್ಪನವರ ಹೋಂಬ್ಯಾನರ್ ರ್ಮಾಣವಾಗಿದ್ದ 'ಕಲ್ಲರಳಿ ' ಚಿತ್ರವನ್ನು ನಿರ್ದೇಶಿಸಿದ್ದ ಾ ಅವರಿಗೇ ಈ ಚಿತ್ರದ ನಿರ್ದೇಶನದ ಯನ್ನೂ ನೀಡಲಾಗಿತ್ತು. ಬೇರೆ ಚಿತ್ರಗಳಾದರೆ ಾತ್ತಿಗೆ ಮೊಳ ನೇಯುವಂತೆ ಹೇಗೆ ಬೇಕೋ ಥೆ, ಚಿತ್ರಕಥೆಗಳನ್ನು ಕಲ್ಪಿಸಿಕೊಂಡು ಬಹುದು. ಆದರೆ ಒಬ್ಬ ಇತಿಹಾಸ ಪುರುಷನ ಹಾಗೆ ಮನಸೋ ಇಚ್ಛೆ ಕಲ್ಪಿಸಿಕೊಳ್ಳಲಾಗುವುದಿಲ್ಲ.

ಇಲ್ಲಿ ಇನ್ನೊಂದು ಅಂಶವೆಂದರೆ, ಕುಮಾರ್ ಬಂಗಾರಪ್ಪ ನಟಿಸಲು ಮುಂದಾದ ಕೆಳದಿಯ ಶಿವಪ್ಪ ನಾಯಕನ ಬಗ್ಗೆ ಸಂಪೂರ್ಣ ವಿವರಗಳು ಸ್ಪಷ್ಟವಾಗಿ ದಾಖಲಾಗಿಲ್ಲ. ಹೀಗಾಗಿ ಆತನ ಬಗೆಗಿನ ವಿವರಗಳನ್ನು ಸಂಶೋಧಿಸುವುದೊಂದೇ ಕುಮಾರ್ ಬಂಗಾರಪ್ಪನವರ ಮುಂದಿದ್ದ ದಾರಿ. ಮಾತ್ರವಲ್ಲ ಸಿನಿಮಾದವರನ್ನು ಈ ಸಂಶೋಧನೆಯ ಕೆಲಸಕ್ಕೆ ಬಿಟ್ಟರೆ




ಅದು ಎಕ್ಕುಟ್ಟಿಹೋಗುವುದು ಶತಸಿದ್ಧ ಎಂದು ತೀರ್ಮಾನಿಸಿದ ಕುಮಾರ್ ಬಂಗಾರಪ್ಪ ಯೂನಿವರ್ಸಿಟಿ ಪ್ರೊಫೆಸರುಗಳು, ಬರಹಗಾರರ ಮೊರೆ ಹೋದರು.

ಎಚ್.ಎಸ್. ಗೋಪಾಲರಾವ್, ಪ್ರೊ. ಸಿದ್ದಲಿಂಗಯ್ಯ, ಕಂಬಾಳಿ, ಪ್ರೊ. ಚಂದ್ರಶೇಖರ ಉಪಾಲ ಮತ್ತು ಎಲ್.ಎಸ್. ಮುಕುಂದರಾಜ್‌ರಂಥ ದೇಶ-ಕೋಶ ಗೊತ್ತಿರುವ ಒಂದಷ್ಟು ಮಂದಿಯನ್ನು ಕಲೆಹಾಕಿಕೊಂಡು ಶಿವಪ್ಪನಾಯಕನ ಡಿಟೇಲುಗಳನ್ನು ಶೋಧಿಸಲು ಬಿಟ್ಟರು. ಅದು ಸಾಕಾರವೂ ಆಯಿತು.


ನಾಗಾಭರಣ

ಈ ಸಿನಿಮಾಗೆ ಈವರೆಗೆ ಬರೋಬ್ಬರಿ ಹದಿನಾಲ್ಕು ವರ್ಷನ್ ಚಿತ್ರಕಥೆಗಳು ಸಿದ್ಧವಾಗಿವೆ. ಒಂದೊಂದು ಸಲವೂ ಬದಲಾವಣೆಗಳಾಗುತ್ತಿರುವುದರಿಂದ ಈಗಲೂ ಅಂತಿಮ ಹಂತದ ಸಂಭಾಷಣೆಯ ಪುಟಗಳು ಸಿದ್ಧಗೊಂಡಿಲ್ಲ. ನಿರ್ದೇಶಕ ನಾಗಾಭರಣ ಕೂಡಾ ಮೂರೂವರೆ ವರ್ಷಗಳಿಂದ ಬೇರೆ ಚಿತ್ರಗಳನ್ನು ಮಾಡುವ ಗೋಜಿಗೆ ಹೋಗದೆ ಸಂಪೂರ್ಣವಾಗಿ 'ಶಿವಪ್ಪನಾಯ್ಕ'ನ ಸಂಗಡದಲ್ಲೇ ತಲ್ಲೀನರಾಗಿದ್ದಾರೆ. ಕುಮಾರ್ ಬಂಗಾರಪ್ಪ ಈ ಚಿತ್ರದಲ್ಲಿ ನೈಜವಾಗಿ ನಟಿಸಲು ಕಳೆದ ಒಂದೂವರೆ ವರ್ಷದಿಂದ ಉದ್ದದ ಕೂದಲು ಬಿಟ್ಟು, ಅದಕ್ಕೆ ಸೀಗೆಕಾಯಿ, ಶ್ಯಾಂಪೂ ಹಾಕಿ ಮೇಂಟೇನ್ ಮಾಡಿಕೊಂಡಿದ್ದಾರೆ.


ಸಿಂಗೀತಂ

ಇಂಥ ಕೂದಲು ಕೃಷಿ, ರಿಸರ್ಚು, ರೇಜಿಗೆಗಳ ನಡುವೆ ಆಗಸ್ಟ್ ಹದಿನೈದರ ಒಳಗಾಗಿ ಈ ಚಿತ್ರದ ಮುಹೂರ್ತವನ್ನು ನೆರವೇರಿಸಲು ಚಿತ್ರತಂಡ ನಿರ್ಧರಿಸಿತ್ತು. ಆದರೆ ಈಗ ಇದ್ದಕ್ಕಿದ್ದ ಹಾಗೆ ಈ ಪ್ರಾಜೆಕ್ಟ್ ಸಡನ್ ತಿರುವು ಪಡೆಯುವ ಸಾಧ್ಯತೆಗಳು ಕಾಣಿಸುತ್ತಿವೆ. ಅದೇನಪ್ಪ ಅಂದರೆ, ನಿರ್ದೇಶಕ ನಾಗಾಭರಣರ ಜಾಗಕ್ಕೆ ಮತ್ತೊಬ್ಬ ಹಿರಿಯ ನಿರ್ದೇಶಕ ಸಿಂಗೀತಂ ಶ್ರೀನಿವಾಸ್ ಬಂದು ಕೂರುವ ಸಾಧ್ಯತೆ...

ಪ್ಯಾಕೇಜು ಕೊಡಲ್ಲ ಅಂದ್ರು

ಮಹಾನ್ ಲೆಕ್ಕಾಚಾರದ ಮನುಷ್ಯರಾದ ಕುಮಾರ್ ಬಂಗಾರಪ್ಪ ಎಲ್ಲೂ ಒಂದು ರೂಪಾಯಿಯನ್ನೂ ಪೋಲು ಮಾಡದ ವ್ಯಕ್ತಿ. 'ತೆರೆಯ ಮೇಲೆ ಕಾಣಲು ಎಷ್ಟು ಬೇಕೋ ಅಷ್ಟಕ್ಕೆ ಮಾತ್ರ ಹಣ ಖರ್ಚು ಮಾಡಬೇಕು' ಎನ್ನುವುದು ಮರಿ 'ಬಂ' ಅಭಿಪ್ರಾಯ. ಅಷ್ಟೇ ಅಲ್ಲ, ಈ ಸಿನಿಮಾ ತುಂಬ ಶ್ರೀಮಂತವಾಗಿ ಮೂಡಿಬಂದರೂ ಅದು ಐದು ಕೋಟಿಯ ಬಜೆಟ್ ಮೀರಬಾರದೆಂಬುದು ಅವರ ಖಡಕ್ ನಿರ್ಧಾರ.

ಭರಣ ಮತ್ತು ಕುಮಾರ್ ಮಧ್ಯೆ ಭಿನ್ನಾಭಿಪ್ರಾಯ ಮೂಡಿದ್ದೇ ಇಲ್ಲಿ.

ಕಡಿಮೆ ಬಜೆಟ್‌ನಲ್ಲಿ ಸಿನಿಮಾ ಮುಗಿಸಿಬಿಟ್ಟರೆ ತಮಗೇನೂ ದಕ್ಕುವುದಿಲ್ಲ ಎನ್ನುವುದು ಭರಣರ ಕೊರಗು. ಹೀಗಾಗಿ "ಎಂಟು ಕೋಟಿ ರೂಪಾಯಿಗಳ ಪ್ಯಾಕೇಜ್ ಕೊಟ್ಟರೆ ಮಾತ್ರ ಸಿನಿಮಾ ಮಾಡಲು ಸಾಧ್ಯ" ಎಂದು ಭರಣ ಹಠ ಹಿಡಿದು ಕುಳಿತಿದ್ದಾರಂತೆ. "ನನ್ನನ್ನು ಬಿಟ್ಟು ಬೇರೆ ನಿರ್ದೇಶಕರಿಂದ ಈ ಪ್ರಾಜೆಕ್ಟ್ ಮುಂದುವರೆಸಲು ಸಾಧ್ಯವಿಲ್ಲ" ಎಂಬ ಭರಣರ ಕಾನ್ಫಿಡೆನ್ಸೂ ಅವರ ಹಠಕ್ಕೆ ಕಾರಣವಿರಬಹುದು.

ಆದರೆ ಭರಣ ಹೀಗೆ ಕಾಸಿನ ವಿಚಾರಕ್ಕೆ ತಕರಾರು ಮಾಡುತ್ತಿರುವುದರ ಬೆನ್ನಿಗೇ ಕುಮಾರ್ ಅಂಡ್ ಟೀಂ ಸೀದಾ ಚೆನ್ನೈಗೆ ಹೋಗಿ ಸಿಂಗೀತಂ ಶ್ರೀನಿವಾಸ್ ಬಳಿ ಮಾತುಕತೆ ನಡೆಸಿಬಂದಿದೆ. ಈಗಾಗಲೇ ಸಿನಿಮಾದ ಸ್ಕ್ರಿಪ್ಟು ಒಪ್ಪವಾಗಿರುವಾಗ, ಅದರೊಟ್ಟಿಗೆ ಒಂದಿಬ್ಬರು ಪಳಗಿದ ಅಸೋಸಿಯೇಟುಗಳನ್ನು ಕೊಟ್ಟರೆ, ಸಿಂಗೀತಂಗೆ ವಯಸ್ಸಾಗಿ ದ್ದರೂ ಸಿನಿಮಾ ಮುಗಿಸಿಕೊಡುತ್ತಾರೆ ಎಂಬ ಲೆಕ್ಕಾಚಾರದಲ್ಲಿದ್ದಾರಂತೆ ಕುಮಾರ್.

ಕಡೆಯದಾಗಿ 'ಕೆಳದಿ' ವಿಚಾರದಲ್ಲಿ ಗೆಲ್ಲೋರ್‍ಯಾರು? ಸೋಲೋರ್‍ಯಾರು? ಎಂಬುದು ಗೊತ್ತಿಲ್ಲವಾದರೂ 'ಶಿವಪ್ಪನಾಯ್ಕ'ನ ವಿಚಾರದಲ್ಲಿ ಕಾಳಗಗಳು ಭುಗಿಲೆದ್ದು ಅದು ಮತ್ತಷ್ಟು ಕಾವು ಪಡೆಯುವುದಂತೂ ದಿಟ! ●

ಅಂತೂ ಒಳ್ಳೇ ಕಾಲ ಬಂತು!

ದ ಚಿತ್ರಗಳ ಹೆಗಲೇರಿ ಕುಳಿತಿದ್ದ ಸೋಲಿನ ದೂರಾಗುವ ಲಕ್ಷಣಗಳು ಕಾಣಿಸುತ್ತಿವೆ.

ಗಾರ ಮುಟ್ಟಿದರೂ ಮಣ್ಣಾಯಿತು' ಅನ್ನೋ ಕನ್ನಡ ಚಿತ್ರರಂಗಕ್ಕೆ ಅಕ್ಷರಶಃ ಮವಂತೆ ಕಳೆದೆರಡು ವರ್ಷಗಳಿಂದ ಬಜೆಟ್‌ನ ಸ್ಟಾರ್ ಸಿನಿಮಾಗಳಿಂದ ತೆವಲಿಗಾಗಿ ಸಿನಿಮಾ ಮಾಡಿದ ಗಳ ಸಿನಿಮಾಗಳತನಕ ಎಲ್ಲವೂ ಮೋಚಿಕೊಂಡಿದ್ದವು. ಗಣಿ ಧಣಿಗಳು ಮುಕ್ಕಿದರು, ಗಾಂಧಿನಗರದ ಪ್ರೊಫೆ ಮಾಪಕರೂ ನಿರ್ನಾಮವಾಗಿದ್ದರು... ಗಿರುವಾಗ ಈಗ ಒಂದಿಷ್ಟು ಚಿತ್ರಗಳು ಭರವಸೆಯನ್ನು ಮೂಡಿಸಿವೆ.


ಶಶಾಂಕ್

ದ್ದಿಲ್ಲದೆ ಗದ್ದ 'ಲವ್‌ಸ್ಟೋರಿ'!

ವರ್ಷ 'ನಾನ್ ಮಾಡಿದ್ ತಪ್ಪಾ' ಎಂಬ ಚಿತ್ರದಿಂದ 'ಲಿಫ್ಟ್ ಕೊಡ್ಲಾ' ತನಕ ಒಟ್ಟು ೬೪ ಸಿನಿಮಾಗಳು ಯಾಗಿವೆ. ಮೊದಲ ಆರು ತಿಂಗಳಲ್ಲಿ ಗೆದ್ದ ದರೆ 'ಆಪ್ತರಕ್ಷಕ' ಮತ್ತು ಪುನೀತ್ ನಟಿಸಿದ ಮಾತ್ರ.

ಟ್‌ಬಾಲ್ ಪಂದ್ಯಾವಳಿ, ಪರಭಾಷಾ ಸಿನಿಮಾಗಳ ಳೇನೇ ಇದ್ದರೂ ಜನ ಮತ್ತೆ ಕನ್ನಡ ಸಿನಿಮಾಗಳನ್ನು ವ ಮನಸ್ಸು ಮಾಡಿದ್ದಾರೆ. ಶಶಾಂಕ್ ನಿರ್ದೇಶನದ ಲವ್ ಸ್ಟೋರಿ' ಅಬ್ಬರದ ಪ್ರಚಾರ ಮಾಡದೇ ಸೈಲೆಂಟಾಗಿ ಹಿಟ್ ಆಗಿದೆ.

ನ ಲವ್ ಸ್ಟೋರಿ' ಈಗ ಐದನೇ ವಾರದ ನ ಕಾಣುತ್ತಿದೆ. ಈ ಚಿತ್ರದ ಒಟ್ಟು ಬಜೆಟ್ ಕೋಟಿ. ಈ ಸಿನಿಮಾ ಐದು ವಾರದಲ್ಲಿ ಐದು ಪಹಿವಾಟು ನಡೆಸಿದೆ. ಅಲ್ಲಿಗೆ, ಥಿಯೇಟರ್ ಪಬ್ಲಿಸಿಟಿ, ಇತ್ಯಾದಿಗಳೆಲ್ಲ ಕಳೆದು ನಿರ್ಮಾಪಕರಿಗೆ ವರೆ ಕೋಟಿ ವಾಪಾಸು ಬಂದಿದೆ. ಇನ್ನು ಚಿತ್ರ ತೆಗೆ ಮುನ್ನವೇ ಉದಯ ಟೀವಿಯವರು ಎಂಭತ್ತು ಸ್ಯಾಟಲೈಟ್ ರೈಟ್ಸು ಪಡೆದಿದ್ದಾರೆ. ಆಡಿಯೋ ಡಿವಿಡಿ ಹಕ್ಕುಗಳೂ ಹದಿನೈದು ಲಕ್ಷಕ್ಕೆ ಟವಾಗಿದ್ದವು. ಹೀಗಾಗಿ ಸದ್ಯ ನಿರ್ಮಾಪಕರು ಣದ ಹಣವಷ್ಟೂ ವಾಪಾಸು ಬಂದಿದೆ. ಇನ್ನು ವಾರದ ನಂತರ ಬರುವ ಓವರ್‌ಫ್ಲೋ ದುಡ್ಡೆಲ್ಲಾ ಪಕರಿಗೆ ಒದಿಹಿಂದಿ ಸಿನ್ನಳ ಲಾಭವೇ...

ಸಿನಿಮಾ ಆರಂಭವಾದಾಗಿನಿಂದಲೂ ಇವತ್ತಿನ ವರೆಗೂ ಏಕಪ್ರಕಾರದ ಕಲೆಕ್ಷನ್ ಕಾಣುತ್ತಿದೆ. ಮೊದಲ ಹಂತವಾಗಿ ಸ್ಯಾಟಲೈಟ್ ಪ್ರಿಂಟುಗಳನ್ನೂ ಸೇರಿ 32 ಥಿಯೇಟರ್‌ಗಳಲ್ಲಿ ಚಿತ್ರವನ್ನು ಬಿಡುಗಡೆಗೊಳಿಸ ಲಾಗಿತ್ತು. ಆದರೆ ಸಿನಿಮಾ ಹಿಟ್ ಆದ ಮೇಲೆ ಪ್ರಿಂಟುಗಳ ಸಂಖ್ಯೆಯನ್ನು 45ಕ್ಕೆ ಏರಿಸಲಾಯಿತು. ಮೈಸೂರು ಏರಿಯಾ ಹೊರತುಪಡಿಸಿದರೆ ಮಿಕ್ಕೆಲ್ಲಾ ಕಡೆ ಬರೀ 'ಎ' ಸೆಂಟರ್‌ಗಳಲ್ಲಿ ಮಾತ್ರ ಈ ಚಿತ್ರವನ್ನು ಬಿಡುಗಡೆ ಮಾಡಲಾಗಿದೆ. ಮಿಕ್ಕಂತೆ ಮಳೆಯ ಕಾರಣಕ್ಕೆ 'ಬಿ ಮತ್ತು ಸಿ' ಸೆಂಟರ್‌ಗಳಲ್ಲಿ ಸಿನಿಮಾವನ್ನು ಇಲ್ಲಿಯತನಕ ಬಿಡುಗಡೆಯೇ ಮಾಡಿಲ್ಲ.

ಸಿನಿಮಾ ಬಿಡುಗಡೆ ಯಾದ ನಂತರ 'ಲವ್ ಸ್ಟೋರಿ'ಯ ವಿತರಣೆಯ ಹಕ್ಕಿಗಾಗಿ ಜನ ಡಿಸ್ಟ್ರಿಬ್ಯೂಟರ್ ಮೋಹನ್ ರ ಹಿಂದೆ ಮುಗಿ ಬಿದ್ದಿದ್ದಾರೆ. ಆದರೆ ಫ್ಯಾಮಿಲಿ ಆಡಿಯನ್ಸ್ ಬರುವ ಮತ್ತು ಒಳ್ಳೇ ಕ್ವಾಲಿಟಿ ಪ್ರದರ್ಶನ ನೀಡುವ ಚಿತ್ರಮಂದಿರಗಳನ್ನು ಮಾತ್ರ ಆಯ್ಕೆ ಮಾಡಿ ಅಂಥಲ್ಲಿ ಚಿತ್ರವನ್ನು ಪ್ರಮೋಟ್ ಮಾಡ ಲಾಗುತ್ತಿದೆ.



ಇದರೊಂದಿಗೆ ಯಾವ ನಿರೀಕ್ಷೆಯೂ ಇಲ್ಲದೆ ದಿನೇಶ್ ಬಾಬು ನಿರ್ದೇಶನದ 'ಎರಡನೇ ಮದುವೆ' ಜನರನ್ನು ಸಿಕ್ಕಾಪಟ್ಟೆ ಸೆಳೆದು ಒಳ್ಳೆ ಕಲೆಕ್ಷನ್ ಮಾಡುತ್ತಿದೆ. ಜಗ್ಗೇಶ್ ಅವರ ಲಿಫ್ಟ್ ಕೊಡ್ಲಾಗೆ ಕೂಡಾ ಗಳಿಕೆಯಲ್ಲಿ ಮೋಸವಿಲ್ಲ. ಇನ್ನು ಈ ವಾರ ಬಿಡುಗಡೆಯಾಗುತ್ತಿರುವ 'ನಮ್ ಏರಿಯಾಲ್ ಒಂದಿನ', ಇನ್ನೇನು ಬಿಡುಗಡೆಗೆ ಸಿದ್ಧವಾಗಿರುವ ಈ ಕೃಷ್ಣಪ್ಪ ನಿರ್ಮಿಸಿರುವ 'ಮತ್ತೆ ಮುಂಗಾರು'ದಂಥ ಚಿತ್ರಗಳ ಬಗ್ಗೆಯೂ ಒಂದಷ್ಟು ನಿರೀಕ್ಷೆಗಳಿವೆ...

ಗೆಲುವಿನ ಪರ್ಸೆಂಟೇಜು...

ಇಲ್ಲಿಯತನಕ ಬಿಡುಗಡೆಯಾಗಿರುವ ಎಲ್ಲ ಥಿಯೇಟರ್‌ಗಳಲ್ಲೂ 'ಲವ್ ಸ್ಟೋರಿ'ಯ ಟಿಕೆಟುಗಳು ವಾರಾಂತ್ಯದಲ್ಲಿ ಬ್ಲಾಕ್‌ನಲ್ಲಿ ಓಡುತ್ತಿವೆ. ಕಳೆದೊಂದು ವಾರದಿಂದ ಕನ್ನಡೇತರರೂ ಬಂದು ಈ ಸಿನಿಮಾ ನೋಡಲು ಶುರುಮಾಡಿದ್ದಾರೆ. ಬೆಂಗಳೂರಿನಲ್ಲಂತೂ ಇರುವ ಮೂವತ್ತು ಪರ್ಸೆಂಟ್ ಕನ್ನಡಿಗರಲ್ಲಿ ಸಿನಿಮಾ ಅಭಿಮಾನಿಗಳು ಮಾತ್ರ ಥಿಯೇಟರಿನತ್ತ ಬಂದರೆ ಒಂದು ಚಿತ್ರ ಐವತ್ತು ದಿನ ಪೂರೈಸುವುದೂ ಕಷ್ಟ. ಹೀಗಾಗಿ ರಾಜಧಾನಿಯಲ್ಲಿ ಸಿನಿಮಾ ನೂರು ದಿನ ಪೂರೈಸಬೇಕೆಂದರೆ ಕನ್ನಡೇತರ ಪ್ರೇಕ್ಷಕರೂ ಬಂದು ಟಿಕೆಟು ಕೊಳ್ಳಲೇಬೇಕು. ಇನ್ನು ಮಹಿಳಾ ಪ್ರೇಕ್ಷಕರು ಬರದೇ ಚಿತ್ರವೊಂದು ಹಿಟ್ ಆಗಲು ಸಾಧ್ಯವೇ ಇಲ್ಲ. 'ಸಿನಿಮಾ ಚೆನ್ನಾಗಿದೆ' ಅನ್ನೋ ಮಾತು ಕಿವಿಗೆ ಬೀಳುವ ತನಕ ಹೆಂಗಸರು ಟಿಕೆಟು ಕೊಳ್ಳಲು ಕಾಸು ಬಿಚ್ಚುವುದಿಲ್ಲ. ಪರ್ಮನೆಂಟ್ ಸಿನಿಮಾ ಅಭಿಮಾನಿಗಳು, ಪಡ್ಡೆಗಳು ಥಿಯೇಟರಿನತ್ತ ನುಗ್ಗುವುದೇನಿದ್ದರೂ ಸಿನಿಮಾ ಬಿಡುಗಡೆ ಯಾದ ಮೂರು ವಾರಗಳ ಒಳಗಾಗಿ ಮಾತ್ರ. ಅದನ್ನೂ ಮೀರಿ ಸಿನಿಮಾ ಎಂಟು-ಹತ್ತು ವಾರ ಥಿಯೇಟರಿನಲ್ಲಿ ಗಟ್ಟಿಯಾಗಿ ಕಚ್ಚಿಕೊಳ್ಳಬೇಕೆಂದರೆ ಮಹಿಳಾಮಣಿಗಳ ಕಾಲ್ಗುಣ ಇರಲೇಬೇಕು!


ಕನ್ನಡ ಚಿತ್ರರಂಗದಲ್ಲಿ ಒಂದು ಚಿತ್ರ 'ಹಿಟ್' ಎನಿಸಿಕೊಳ್ಳಬೇಕು ಎಂದರೆ ಆ ಸಿನಿಮಾವನ್ನು ಎಷ್ಟು ಜನ ನೋಡಬೇಕು? ಎಂಬುದು ಮುಖ್ಯ ಪ್ರಶ್ನೆ. ತೆಲುಗು ಮತ್ತು ತಮಿಳು ಚಿತ್ರರಂಗಗಳನ್ನು ನೋಡಿದರೆ, ಅಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ಮೂವತ್ತರಿಂದ ನಲವತ್ತರಷ್ಟು ಜನ ಥಿಯೇಟರಿಗೆ ಬಂದು ಸಿನಿಮಾ ನೋಡುತ್ತಾರೆ. ಹೀಗಾಗಿ ಅಲ್ಲಿ ಬಿಡುಗಡೆಯಾದ ಸಿನಿಮಾಗಳಿಂದಾಗಿ ತೀರಾ ಹಾಕಿದ ಹಣಕ್ಕೆ ದೋಖಾ ಆಗುವುದಿಲ್ಲ.

ಆದರೆ ಕರ್ನಾಟಕದಲ್ಲಿನ ಆರುಕೋಟಿ ಜನ ಸಂಖ್ಯೆಯಲ್ಲಿ ರೆಗ್ಯುಲರ್ ಆಗಿ ಸಿನಿಮಾ ನೋಡುವವರು ಕೇವಲ ಮೂರು ಪರ್ಸೆಂಟ್ ಜನ. ಒಂದು ವಾರಕ್ಕೆ ಕನ್ನಡ ಚಿತ್ರಗಳನ್ನು ನೋಡುತ್ತಿರುವುದು ಕೇವಲ ಒಂದೂವರೆಯಿಂದ ಎರಡು ಲಕ್ಷ ಜನ ಮಾತ್ರ. ಒಂದು ವೇಳೆ ಕನ್ನಡಿಗರ ಒಟ್ಟು ಪಾಪ್ಯುಲೇಷನ್‌ನಲ್ಲಿ ಎಂಟರಿಂದ ಹತ್ತು ಪರ್ಸೆಂಟ್ ಜನ ಬಂದು ಚಿತ್ರಮಂದಿರದಲ್ಲಿ ಕೂತರೆ ಕನ್ನಡ ಚಿತ್ರರಂಗ ಉದ್ಧಾರವಾಗುವುದರಲ್ಲಿ ದೌಟೇ ಇಲ್ಲ...

ಇದನ್ನೆಲ್ಲ ಈಗ 'ಕೃಷ್ಣನ ಲವ್ ಸ್ಟೋರಿ' ಹಿಟ್ ಆಗುವ ಮೂಲಕ ಸಾಬೀತುಪಡಿಸುತ್ತಿದೆ!

● ಅರುಣ್ ಕುಮಾರ್.ಜಿ
arunodayagc@gmail.com

ರೆಬೆಲ್‌ಗೆ ಕಿಚ್ಚನ ಟ್ರಬಲ್



ರೆಬೆಲ್‌ಸ್ಟಾರ್ ಅಂಬರೀಶ್ ವಿರುದ್ಧ ಸುದೀಪ್ ನಾಯಕತ್ವದಲ್ಲಿ ಯುವ ಕಲಾವಿದರ ಪಡೆ ರೆಬೆಲ್ ಆಗಿದೆ. ಅಂದರೆ ಕನ್ನಡ ಚಿತ್ರರಂಗದ ಹೊಸ ರೆಬೆಲ್‌ಸ್ಟಾರ್ ಆಗಿ ಸುದೀಪ್ ನಿಧಾನವಾಗಿ ರೂಪುಗೊಳ್ಳುತ್ತಿದ್ದಾರೆ.

ಮೊನ್ನೆಮೊನ್ನೆ ತನಕ ಕನ್ನಡ ಚಿತ್ರರಂಗದ ಪ್ರಶ್ನಾತೀತ ಮತ್ತು ಟೀಕಾತೀತ ನಾಯಕರಾಗಿ ಮೆರೆಯುತ್ತಿದ್ದ ಅಂಬರೀಶ್ ಅವರ ವರ್ಚಸ್ಸು ಈಗ ರಾಜಕೀಯದಲ್ಲಾದಂತೆ ಗಾಂಧಿನಗರದಲ್ಲೂ ದಿನದಿಂದ ದಿನಕ್ಕೆ ಕುಸಿಯುತ್ತಿದೆ ಎಂಬುದಕ್ಕೆ ಪ್ರಸ್ತುತ ವಾಗ್ವಾದ ಒಂದು ಪುಟ್ಟ ಉದಾಹರಣೆ. ಅಷ್ಟೇ ಅಲ್ಲ, ಡಾ.ರಾಜ್ ಮತ್ತು ವಿಷ್ಣುವರ್ಧನ್ ನಿಧನದ ನಂತರ ಸಮಸ್ತ ಉದ್ಯಮವನ್ನು ಪ್ರತಿನಿಧಿಸುವಂತಹ ನಾಯಕರು ಕನ್ನಡ ಚಿತ್ರರಂಗದಲ್ಲಿ ಇಲ್ಲ ಎಂಬುದನ್ನು ಕೂಡಾ ಇದು ಸ್ಪಷ್ಟವಾಗಿ ತೋರಿಸುತ್ತದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಕನ್ನಡ ಚಿತ್ರರಂಗದ ಕಲಾವಿದರಲ್ಲಿ ಹಳೇ ಕಾಲದ ಕಲಾವಿದರು ಮತ್ತು ಹೊಸ ಜಮಾನದ ನಟರು ಎಂಬ ಸ್ಪಷ್ಟವಾದ ಎರಡು ಗುಂಪುಗಳು ಕಾಣಿಸುತ್ತಿವೆ. ನಾಲ್ಕು ದಶಕಗಳಿಂದ ಕನ್ನಡ ಚಿತ್ರರಂಗದಲ್ಲಿ ಅಜಾತಶತ್ರು ಎಂಬ ಬಿರುದಿನಿಂದ ಮೆರೆಯುತ್ತಿದ್ದ ಅಂಬರೀಶ್ ವಿರುದ್ಧ ಈ ಹೊಸ ಹುಡುಗರು ಬಂಡಾಯ ಎದ್ದಿರುವುದೇ ಈಗ ಗಾಂಧಿನಗರದಲ್ಲಿ ಹೊಸ ಟಾಕ್ ಆಗಿದೆ.



ಇದೆಲ್ಲ ಆರಂಭವಾಗಿದ್ದು ಕ್ರಿಕೆಟ್ ಆಟದ ವಿಷಯದಲ್ಲಿ. ಚಿತ್ರರಂಗದ ಡ್ಯಾನ್ಸರ್ಸ್ ಅಸೋಸಿಯೇಷನ್‌ನ ರಾಜೇಶ್ ನೃತ್ಯ ಕಲಾವಿದರ ಕ್ಷೇಮಾಭಿವೃದ್ಧಿಗಾಗಿ ಒಂದು ಕ್ರಿಕೆಟ್ ಪಂದ್ಯಾವಳಿಯನ್ನು ನಡೆಸುವ ಪ್ಲಾನ್ ಹಾಕಿದರು. ಈ ಪಂದ್ಯಾವಳಿಗೆಂದು ನಿರ್ಮಾಪಕರ, ನಿರ್ದೇಶಕರ, ನೃತ್ಯಗಾರರ, ಕಲಾವಿದರ, ಛಾಯಾಗ್ರಾಹಕರ, ಸಂಕಲನಕಾರರ ಮತ್ತು ಪತ್ರಕರ್ತರ ತಂಡಗಳನ್ನು ರೂಪಿಸಿದರು. ಒಂದೊಂದು ತಂಡಕ್ಕೆ ಒಬ್ಬೊಬ್ಬ 'ಸ್ಟಾರ್' ಕ್ಯಾಪ್ಟನ್‌ಅನ್ನು? ನೇಮಿಸಿದರು. ಉದಾಹರಣೆಗೆ ನಿರ್ಮಾಪಕರ ತಂಡಕ್ಕೆ ಶಿವರಾಜ್ ಕುಮಾರ್, ಕಲಾವಿದರ ತಂಡಕ್ಕೆ ಸುದೀಪ್, ಛಾಯಾಗ್ರಾಹಕ ತಂಡಕ್ಕೆ ಇಂದ್ರಜಿತ್ ಲಂಕೇಶ್, ಫೈಟರ್ಸ್ ತಂಡಕ್ಕೆ ದುನಿಯಾ ವಿಜಿ.... ಹೀಗೆ ನಾಯಕರನ್ನು ನೇಮಿಸಲಾಯಿತು. ಹಾಗೆಯೇ ಕ್ರೇಜಿಸ್ಟಾರ್ ರವಿಚಂದ್ರನ್, ರಮೇಶ್ ಅರವಿಂದ್, ಪುನೀತ್ ಕೂಡ ಇತರೆ ತಂಡಗಳ ನಾಯಕರಾದರು.

ನೃತ್ಯಕಲಾವಿದರ ಈ ಯೋಜನೆಗೆ ತಾರೆಗಳೆಲ್ಲಾ ಎಸ್ ಅಂದರು. ಹಾಗೆಯೇ ಸೆಂಟ್ರಲ್ ಕಾಲೇಜ್ ಮೈದಾನದಲ್ಲಿ ಪ್ರತಿ ಬೆಳಗ್ಗೆ ಪ್ರಾಕ್ಟೀಸ್ ಶುರುಮಾಡಿದರು. ಉಪೇಂದ್ರ, ಸುದೀಪ್ ಮೊದಲಾದವರು ಪ್ರಾಕ್ಟೀಸ್ ಮಾಡುವ ದೃಶ್ಯಗಳು ಟಿವಿ ಮಾಧ್ಯಮಗಳಲ್ಲಿ ಬಿತ್ತರಗೊಂಡವು. ಅಲ್ಲಿಂದಾಚೆಗೆ ಈ ಟೂರ್ನಮೆಂಟ್‌ಗೆ ಸಿಕ್ಕಾಪಟ್ಟೆ ಪ್ರಚಾರ ಮಾತ್ರವಲ್ಲ, ಜನಬೆಂಬಲವೂ ದೊರೆಯಿತು.

ಆಗ ರೆಬೆಲ್ ಸ್ಟಾರ್ ಅಂಬರೀಶ್ ಎಚ್ಚೆತ್ತುಕೊಂಡರು. ಎಲ್ಲಾ ಕಲಾವಿದರಿಗೆ ಸ್ವತಃ ಫೋನ್ ಮಾಡಿದ ಅಂಬರೀಶ್ "ನೀವ್ಯಾರೂ ಈ ಟೂರ್ನಮೆಂಟ್‌ನಲ್ಲಿ ಭಾಗವಹಿಸಬಾರದು" ಎಂದು ಮನವಿ ಮಾಡಿಕೊಂಡರು. ಅಷ್ಟಕ್ಕೆ ಸಮಾಧಾನಗೊಳ್ಳದ ಅಂಬಿ ಕಲಾವಿದರ ಸಂಘದ ಅಧ್ಯಕ್ಷನಾಗಿ ಈ ಟೂರ್ನಮೆಂಟ್‌ನಲ್ಲಿ ಭಾಗವಹಿಸುವ ಕಲಾವಿದರಿಗೆಲ್ಲ ಪತ್ರ ಬರೆದು ಈ ಟೂರ್ನಮೆಂಟ್‌ನಲ್ಲಿ ಭಾಗವಹಿಸಬಾರದು ಎಂದು ಬೌನ್ಸರ್ ಹಾಕಿದರು.

ಹೀಗೆ ನೃತ್ಯಗಾರರ ಕಾರ್ಯಕ್ರಮಕ್ಕೆ ರೆಬೆಲ್‌ಸ್ಟಾರ್ ಅಂಬರೀಶ್ ಬೌನ್ಸರ್ ಹಾಕಲು ಕಾರಣವೂ ಇದೆ. ಬರುವ ನವೆಂಬರ್‌ನಲ್ಲಿ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ಚಿತ್ರರಂಗದ ಕಲಾವಿದರನ್ನು ಸೇರಿಸಿ ಕಲಾವಿದರ ಸಂಘ ಕ್ರಿಕೆಟ್ ಟೂರ್ನಮೆಂಟ್ ನಡೆಸಲಿದೆ. ಆದ್ದರಿಂದ ಈಗ ನೃತ್ಯಕಲಾವಿದರ ಕಾರ್ಯಕ್ರಮದಲ್ಲಿ ಚಿತ್ರನಟರು ಭಾಗವಹಿಸಿದರೆ ಮುಂದಿನ ತಮ್ಮ ಕ್ರಿಕೆಟ್‌ನಲ್ಲಿ ಕಾರ್ಯಕ್ರಮಕ್ಕೆ ಅಭಿಮಾನಿಗಳು ಸೇರುವುದಿಲ್ಲ ಎಂಬ ಆತಂಕ ಅಂಬಿಯದ್ದು.

"ಆದರೆ ನಾವು ಈಗಾಗಲೇ ನೃತ್ಯಗಾರರ ತಂಡಕ್ಕೆ ಮಾತು ಕೊಟ್ಟಿದ್ದೇವೆ. ಹೀಗಾಗಿ ಈ ಪಂದ್ಯದಿಂದ ಹೊರಗುಳಿಯುವ ಪ್ರಶ್ನೆಯೇ ಇಲ್ಲ. ಹಾಗೆಯೇ ಕಲಾವಿದರ ಸಂಘದ ವಿರುದ್ಧ ಬಂಡೆದ್ದಿದ್ದೇವೆ ಎಂದು ತಾವು ಭಾವಿಸಬಾರದು" ಎಂದು ಸುದೀಪ್ ನಯವಾಗಿಯೇ ಅಂಬರೀಶ್‌ಗೆ ಹೇಳಿದರಂತೆ. ಸುದೀಪ್ ವಾದವನ್ನು ಯುವ ನಾಯಕರ ದೊಡ್ಡ ಪಡೆಯೇ ಬೆಂಬಲಿಸಿದೆ.

ಈಗ ಸುದೀಪ್ ಜೊತೆಗೆ ಹೊಸ ಜಮಾನದ ಹುಡುಗರಾದ ಚಿರಂಜೀವಿ ಸರ್ಜಾ, ನಾಗಕಿರಣ್, ಧರ್ಮ, ದೀಪಕ್, ಹರ್ಷ, 'ಜಾಲಿಡೇಸ್' ವಿಶ್ವ, 'ಜೋಶ್' ಚಿತ್ರದ ರಾಕೇಶ್, ಯಶ್ ಮೊದಲಾದ ಹುಡುಗರಿದ್ದಾರೆ. ಹಾಗೆಯೇ ನಿರ್ದೇಶಕರ ಸಂಘದ ಮಹೇಶ್, ನಾಗಶೇಖರ್, ವಾಸು, ಪ್ರೀತಂ ಗುಬ್ಬಿ ಮೊದಲಾದವರೂ ನಿತ್ಯ ಸೆಂಟ್ರಲ್ ಕಾಲೇಜ್ ಮೈದಾನದಲ್ಲಿ ಪ್ರಾಕ್ಟೀಸ್ ನಡೆಸುತ್ತಿದ್ದಾರೆ. ಇನ್ನೊಂದೆಡೆ ನಿರ್ಮಾಪಕರ ಸಂಘದ ಸ್ಟಾರ್ ಕ್ಯಾಪ್ಟನ್ ಶಿವರಾಜ್‌ಕುಮಾರ್ ಅವರಾಗಿದ್ದರೂ ಆ ತಂಡಕ್ಕೆ ಬಾಮಾ ಹರೀಶ್ ಉಪನಾಯಕರಾಗಿ, ನಿರ್ಮಾಪಕರನ್ನು ಒಟ್ಟು ಸೇರಿಸಿದ್ದಾರೆ.

ಮತ್ತೊಂದೆಡೆ ನಾಯಕಿಯರು ಈ ಯುವ ನಾಯಕರಿಗೆ ಬೆಂಬಲವಾಗಿ ನಿಲ್ಲುತ್ತಿದ್ದಾರೆ. ಪ್ರತಿಯೊಂದು ತಂಡಕ್ಕೆ ಮೂರು-ಮೂರು ನಾಯಕಿಯರು ಬ್ರಾಂಡ್ ಅಂಬಾಸಡರ್ ಆಗಿ ಕಾರ್ಯನಿರ್ವಹಿಸುತ್ತಾರಂತೆ. ಈಗ ಸಿಕ್ಕಿರುವ ಮಾಹಿತಿ ಪ್ರಕಾರ ಸುದೀಪ್ ತಂಡಕ್ಕೆ ಐಂದ್ರಿತಾ ರೇ ಮತ್ತು ನೀತೂ, ನಿರ್ಮಾಪಕರ ಸಂಘಕ್ಕೆ ಸಂಜನಾ, ರೂಪಶ್ರೀ ಮತ್ತು ಅಶಿತಾ, ನಿರ್ದೇಶಕರ ಸಂಘಕ್ಕೆ ರಾಧಿಕಾ ಪಂಡಿತ್ ಮೊದಲಾದವರು ಬೆಂಬಲ ನೀಡಿರುವ ಸುದ್ದಿ ಇದೆ. ಕಲಾವಿದರ ಸಂಘದ ಅಧ್ಯಕ್ಷರಾದ ಅಂಬರೀಶ್ ಅವರ ಬೌನ್ಸರ್‌ಅನ್ನು ಈ ನಾಯಕಿಯರು ಎದುರಿಸಲು ಸಾಧ್ಯವಿಲ್ಲದ ಕಾರಣ ಬಹುತೇಕ ನಟಿಯರ ಹೆಸರನ್ನು ಗೌಪ್ಯವಾಗಿಡಲಾಗಿದೆಯಂತೆ.

ಮೊದಲೇ ಚಿಂದಿಯಾಗಿರುವ ಕನ್ನಡ ಚಿತ್ರರಂಗ ಈಗ ಕ್ರಿಕೆಟ್ ಆಟದ ನೆಪದಲ್ಲಿ ಇನ್ನಷ್ಟು ಪೀಸ್‌ಪೀಸಾಗಿದೆ. ಮೊನ್ನೆಮೊನ್ನೆಯಷ್ಟೇ ಅಮೃತ ಮಹೋತ್ಸವ ಸಂದರ್ಭದಲ್ಲಿ ಇಡೀ ಚಿತ್ರೋದ್ಯಮ ಒಂದೇ ವೇದಿಕೆಯಲ್ಲಿ ಸೇರಿ ತನ್ನ ಒಗ್ಗಟ್ಟನ್ನು ಪ್ರದರ್ಶಿಸಿತು. ಈ ಸಮಾರಂಭದ ನೆನಪು ಮರೆಯಾಗುವ ಮುನ್ನವೇ ಚಿತ್ರರಂಗದ ಮತ್ತೊಂದು ಮುಖ ಅಭಿಮಾನಿಗಳಿಗೆ ಈಗ ವ್ಯಕ್ತವಾಗುತ್ತಿರುವುದು ಬೇಸರದ ವಿಷಯ.

ಅದೇನೇ ಇರಲಿ ಯಾವುದೇ ಕಾರಣಕ್ಕೂ ಜುಲೈ 25, 26 ಮತ್ತು 27ರಂದು ದಾವಣಗೆರೆಯಲ್ಲಿ ನಡೆಯಲಿರುವ ಈ ಕ್ರಿಕೆಟ್ ಟೂರ್ನಮೆಂಟನ್ನು ರದ್ದುಪಡಿಸುವುದಿಲ್ಲ ಎಂದು ನೃತ್ಯಗಾರರ ಸಂಘದ ವಕ್ತಾರ ರಾಜೇಶ್ ಪಟ್ಟು ಹಿಡಿದಿದ್ದಾರೆ.

ಕಳೆದ ಇಪ್ಪತ್ತು ದಿನಗಳಿಂದ ನಗರದ ಸೆಂಟ್ರಲ್ ಕಾಲೇಜ್ ಮೈದಾನದಲ್ಲಿ ಬೆಳಗ್ಗಿನ ಜಾವ ಆರರಿಂದ ಚಿತ್ರರಂಗದ ತಂತ್ರಜ್ಞರೆಲ್ಲ ಜಮಾಯಿಸಿ ಅಲ್ಲಿ ಆಟ ಆಡುವುದನ್ನ ನೋಡುವುದೇ ಒಂದು ಮಜ. ಈ ಹಿಂದೆ ಯಾವತ್ತು ಇಷ್ಟೊಂದು ಸಂಖ್ಯೆಯಲ್ಲಿ ತಂತ್ರಜ್ಞರು ಒಂದು ಕಡೆ ಜಮಾಯಿಸಿದ ಉದಾಹರಣೆಗಳಿಲ್ಲ. ಇದು ಒಂದು ರೀತಿಯಲ್ಲಿ ಉದ್ಯಮದಲ್ಲಿರುವ ಎಲ್ಲರೂ ಪರಸ್ಪರ ಅರಿತುಕೊಳ್ಳಲು ಉತ್ತಮವಾದ ವೇದಿಕೆಯಾಗಿ ಮಾರ್ಪಾಡಾಗಿದೆ. ಅಷ್ಟೇ ಅಲ್ಲ, ಉದ್ಯಮದಲ್ಲಿ ಅನೇಕ ಜನರ ನಡುವೆ ಇರುವ ಸಣ್ಣತನಗಳು ಮತ್ತು ಭಿನ್ನಾಭಿಪ್ರಾಯಗಳು ಇಂತಹ ಕ್ರೀಡೆಯಿಂದ ಪರಿಹಾರವಾಗುವ ಸಾಧ್ಯತೆ ಇದೆ. ಈ ಕಾರಣದಿಂದ ಸಿನಿಮಾದ ಜನರಲ್ಲಿರುವ ಕ್ರೀಡಾಮನೋಭಾವದ ಕೊರತೆಯನ್ನು ಈ ಟೂರ್ನಮೆಂಟ್ ನೀಗಿಸಲಿದೆ. ಹೀಗೆ ಅನೇಕ ರೀತಿಯಿಂದ ಈ ಟೂರ್ನಮೆಂಟ್‌ನಿಂದಾಗಿ ಉದ್ಯಮಕ್ಕೆ ಲಾಭವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಈ ಎಲ್ಲಾ ಕಾರಣಕ್ಕಾಗಿಯಾದರೂ ಸ್ವತಃ ಕ್ರಿಕೆಟ್ ಅಭಿಮಾನಿಯಾಗಿರುವ ಅಂಬರೀಶ್ ಈ ಟೂರ್ನಮೆಂಟ್‌ಅನ್ನು ಬೆಂಬಲಿಸಬೇಕಿತ್ತು.

ಇಡೀ ಪ್ರಕರಣವನ್ನು ಕೂಲಂಕಷವಾಗಿ ಅವಲೋಕಿಸಿದರೆ ಇದು ಅಷ್ಟು ದೊಡ್ಡ ರಾದ್ಧಾಂತವಾಗುವ ವಿಷಯವೇ ಅಲ್ಲ. ಚಿತ್ರರಂಗದ ದೊಡ್ಡಣ್ಣ ಸ್ಥಾನದಲ್ಲಿರುವ ಅಂಬರೀಶ್ ಈ ಹುಡುಗರನ್ನು ಮತ್ತು ತಂತ್ರಜ್ಞರನ್ನು ಬೆಂಬಲಿಸಿ ಅವರೊಂದಿಗೆ ಪಾಲುಗೊಳ್ಳಬೇಕಿತ್ತು. ಅದನ್ನು ಬಿಟ್ಟು ಅಂಬಿ ಈಗ ಇಡೀ ಚಿತ್ರರಂಗದ ತಂತ್ರಜ್ಞರ ಅವಕೃಪೆಗೊಳಗಾಗಿ ತಮ್ಮ ಅಜಾತಶತ್ರು ಬಿರುದಿಗೆ ತಾವೇ ಧಕ್ಕೆ ತಂದುಕೊಂಡಿದ್ದಾರೆ.

ದಾವಣಗೆರೆಯಲ್ಲಿ ಸದ್ಯದಲ್ಲೇ ನಡೆಯಲಿರುವ ಮೂರು ದಿನಗಳ ಕ್ರಿಕೆಟ್ ಪಂದ್ಯದ ಜೊತೆಗೆ ಸಂಜೆ ಹೊತ್ತು ರಸಮಂಜರಿ ಕಾರ್ಯಕ್ರಮಗಳಿಗೆ ಮತ್ತು ಭರ್ಜರಿ ಪಾರ್ಟಿಗಳಿಗೆ ಸಂಘಟಕರು ವ್ಯವಸ್ಥೆ ಮಾಡಿದ್ದಾರೆ. ಶಾಸಕ ರಾಜುಗೌಡ ನೇತೃತ್ವದಲ್ಲಿ ಶಾಸಕರ ತಂಡವೊಂದು ಕೂಡಾ ಈ ಟೂರ್ನಮೆಂಟ್‌ನಲ್ಲಿ ಭಾಗವಹಿಸಲಿರುವುದು ಇನ್ನೊಂದು ವಿಶೇಷ. ಇವರೆಲ್ಲ ಅಂಬರೀಶ್ ಬೌನ್ಸರ್ ಹಾಕಿದ ವಿಷಯ ತಿಳಿದ ನಂತರ ನೃತ್ಯಗಾರರ ತಂಡಕ್ಕೆ ಸಂಪೂರ್ಣವಾಗಿ ಬೆಂಬಲವನ್ನು ನೀಡಿದ್ದಾರೆ.

ಕ್ರೀಡೆಗಳು ಮನುಷ್ಯ-ಮನುಷ್ಯರ ನಡುವಿನ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ ಎಂಬುದು ಸ್ಪಷ್ಟ. ಅಂತಹ ಗುಣ ಮತ್ತು ಶಕ್ತಿ ಕ್ರೀಡೆಗೆ ಇದೆ. ಆದರೆ ಕನ್ನಡ ಚಿತ್ರರಂಗದ ವಿಷಯದಲ್ಲಿ ಮಾತ್ರ ಅಂತಹ ಸೌಹಾರ್ದ ನಿರ್ಮಿಸುವಲ್ಲಿ ಕ್ರೀಡೆ ಕೂಡಾ ವಿಫಲವಾಗಿರುವುದು ಆಶ್ಚರ್ಯ....

• ಸದಾಶಿವ ಶೆಣೈ
shenoylankesh@gmail.com

ಡ್ಯಾನ್ಸ್ ಕಲಾವಿದರ ಆಟ

[illegible]

ಹೊಟ್ಟೆ ತೋರಿಸ್ತಾರಂತೆ...



"ಈ ಮೂರೂ ಜನ ತಂದೆಗೆ ತಕ್ಕ ಮಕ್ಕಳು... ಯಜಮಾನ್ರು ಇದ್ದಾಗ ಯಾವಾಗ್ಲೂ ಬಂದು 'ನೋಡು ನಂಗೆ ಹೊಟ್ಟೇನೇ ಇಲ್ಲ' ಅಂತಾ ಪದೇ ಪದೇ ಹೊಟ್ಟೆ ತೋರಿಸ್ತಿದ್ದರು... ಯಾವತ್ತೂ ಅವರು ಸೊಂಟದ ಅಳತೆಯನ್ನು 32ಕ್ಕಿಂತ ಹೆಚ್ಚಿಸಿಕೊಂಡವರೇ ಅಲ್ಲ. ಅವರ ಮಕ್ಳೂ ಅವರ ಥರಾನೇ ಆಡ್ತಾರೆ... 'ಅಮ್ಮಾ ನೋಡು ನಂಗೆ ಸ್ವಲ್ಪಾನೂ ಹೊಟ್ಟೇನೇ ಬಂದಿಲ್ಲ...' ಅಂತಾ ಮೂವರೂ ಬಂದು ನನ್ನ ಮುಂದೆ ನಿಲ್ತಾರೆ..."

– ಹೀಗೆ ತಮ್ಮ ಪತಿ ಮತ್ತು ಪುತ್ರರ ಬಗ್ಗೆ ಹೇಳಿದ್ದು ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್. ಮೊನ್ನೆ ಶಿವರಾಜ್‌ಕುಮಾರ್ ಅವರ ನೂರನೇ ಸಿನಿಮಾದ ಪ್ರಯುಕ್ತ ಅವರ ಮನೆಯಲ್ಲೇ ಏರ್ಪಡಿಸಿದ್ದ 'ಮನದ ಮಾತು ಮನೆ ಊಟ'ದಲ್ಲಿ ಮಾತಾಡುತ್ತಾ ಡಾ. ರಾಜ್ ಮತ್ತು ಅವರ ಮಕ್ಕಳಿಗಿರುವ ಸೌಂದರ್ಯ ಪ್ರಜ್ಞೆಯ ಬಗ್ಗೆ ಮೆಲುಕು ಹಾಕುತ್ತಿದ್ದರು.



ಶಿವರಾಜ್‌ಕುಮಾರ್, ಪುನೀತ್ ಮತ್ತು ರಾಘಣ್ಣ ಒಂದು ಕಡೆ ಸೇರಿದಾಗಲೂ ಮನೆಯ ವಿಚಾರಗಳನ್ನು ಬಿಟ್ಟು ಸಿನಿಮಾದ ಬಗ್ಗೆಯೇ ಹೆಚ್ಚು ಹರಟುತ್ತಿರುತ್ತಾರಂತೆ. 'ನಿನ್ನ ಫಿಟ್‌ನೆಸ್ ಚೆನ್ನಾಗಿದೆ...', 'ನಿನ್ನಂಗೇ ಇನ್ನೊಂದು ಸ್ವಲ್ಪ ತೆಳ್ಳಗಾದರೆ ಚೆಂದ', 'ನಿನ್ನ ಆ ಸಿನಿಮಾ ಹೀಗಿತ್ತು'... ಹೀಗೆ ಸಿನಿಮಾವೇ ಪ್ರಮುಖ ವಿಷಯವಂತೆ.. ಹೀಗಾಗಿ ಮನೆಯ ಹೆಣ್ಣು ಮಕ್ಕಳು 'ನಿಮಗೆ ಇದು ಬಿಟ್ರೆ ಬೇರೆ ಮಾತೇ ಇಲ್ವಾ' ಎಂದೂ ಮೂದಲಿಸುತ್ತಾರಂತೆ.

'ಶಿವಣ್ಣ ನೂರನೇ ಸಿನಿಮಾದಲ್ಲಿ ನಟಿಸುತ್ತಿದ್ದರೂ ಅವರು ಪ್ರತಿ ದಿನವೂ ಮೊದಲನೇ ಚಿತ್ರದ ಶೂಟಿಂಗ್‌ಗೆ ಹೋಗುವಂತೆ ಖುಷಿಯಿಂದ ಶೂಟಿಂಗ್‌ಗೆ ಹೋಗುತ್ತಾರೆ. ಯಾವತ್ತೂ ಅವರು ಸಿನಿಮಾ ಬಗ್ಗೆ ಬೇಸರ ಮಾಡಿಕೊಂಡಿದ್ದೇ ನಾನು ನೋಡಿಲ್ಲ. ಹೀಗಾಗಿ ಶಿವಣ್ಣನೇ ನನಗೆ ಗಾಡ್‌ಫಾದರ್' ಎಂದು ಪುನೀತ್ ಹೇಳಿದರೆ, 'ಅಪ್ಪು ತುಂಬಾ ಸಣ್ಣ ವಯಸ್ಸಿಗೇ ಕ್ಯಾಮೆರಾದ ಮುಂದೆ ನಿಂತುಬಿಟ್ಟಿದ್ದ... ಐದಾರು ವರ್ಷದವನಿದ್ದಾಗಲೇ 'ಬಾಳಬಂಗಾರ'ದಲ್ಲಿ ಹಾಡು ಹೇಳಿದ್ದ... ಅವನ ಚುರುಕುತನ, ಸಾಧನೆ ನೋಡಿದಾಗಲೆಲ್ಲಾ ನಾನೂ ಸಿನಿಮಾಕ್ಕೆ ಬರಬೇಕು ಅನ್ನಿಸುತ್ತಿತ್ತು... ಹೀಗಾಗಿ ಅಪ್ಪುನೇ ನನ್ನ ಗಾಡ್‌ಫಾದರ್, ಅವನೇ ನನ್ನ ರೋಲ್‌ಮಾಡೆಲ್...' ಎಂದು ಶಿವಣ್ಣ ಹೇಳಿದರು...

ಎಲ್ಲರೂ ಹೀಗೆ ಒಬ್ಬರನ್ನೊಬ್ಬರು ಸ್ಫೂರ್ತಿಯಾಗಿಸಿಕೊಂಡಿರುವುದೇ ಈ ಸಿನಿಮಾ ಕುಟುಂಬದ ಸಾಧನೆಯ ಗುಟ್ಟಿರಬಹುದು.

ಒಟ್ಟಿನಲ್ಲಿ ಹಗಲೂ ರಾತ್ರಿ ಸಿನಿಮಾವನ್ನೇ ಧ್ಯಾನಿಸುವುದರಿಂದ ತಾನೆ ಶಿವಣ್ಣ ಸೆಂಚುರಿ ಹೊಡೆದಿರುವುದು, ಪುನೀತ್ ಕನ್ನಡದ ನಂ.1 ನಾಯಕನಾಗಿರುವುದು ಮತ್ತು ರಾಘಣ್ಣ ತಮ್ಮ ಸಹೋದರರಿಗೆ ಒಳ್ಳೆ ಗೈಡ್ ಆಗಿರುವುದು...

• ಅರುಣ್‌ಜಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...